Department of Public Instruction, Mysore

ANKAGANITA

fot the use of
pupils in the first Vernacular Standard of
Lower Primary Classes

REVISED BY

H. V. VENKATARAMAIENGAR, M.A.

ಅಂಕಗಣಿತ

ಲೋವರ್ ಪ್ರೈಮರಿ ಸ್ಕೂಲುಗಳಲ್ಲಿ ಕನ್ನಡ ಮೊದಲನೆಯ
ತರಗತಿಯಲ್ಲಿಯ ವಿದ್ಯಾರ್ಥಿಗಳಿಗಾಗಿ

ಎಚ್. ವಿ. ವೆಂಕಟರಾಮೈಯಂಗಾರ್, ಎಂ.ಎ.
ಇವರಿಂದ ಪರಿಷ್ಕರಿಸಲ್ಪಟ್ಟಿತು.

Third Edition

Mysore
PRINTED AT THE SRINIVASA PRESS
1920

ವಿಷಯ ಸೂಚನೆ.

ಅಂಕಗಣಿತ

ಮೊದಲನೆಯ ಭಾಗ

ಒಂದನೆಯ ಅಧ್ಯಾಯ.

ಅಂಕಕರಣ, ಸಂಖ್ಯಾಪಠನ.

+ ಇದು ಕೂಡುವ ಗುರುತು. ಈ ಗುರುತು ಯಾವ ಸಂಖ್ಯೆಯ ಹಿಂದೆ ಇದೆಯೋ ಅದನ್ನು ಕೂಡಬೇಕು. 3+4 ಎಂದರೆ 4 ನ್ನು 3 ಕ್ಕೆ ಕೂಡಬೇಕು.

— ಇದು ಕಳೆಯುವ ಗುರುತು. ಈ ಗುರುತು ಯಾವ ಸಂಖ್ಯೆಯ ಹಿಂದೆ ಇದೆಯೋ ಅದನ್ನು ಕಳೆಯಬೇಕು. 4–3 ಎಂದರೆ 4 ರಲ್ಲಿ 3 ನ್ನು ಕಳೆಯಬೇಕು.

1 ನೆಯ ಅಭ್ಯಾಸ.

ಒಂದರಿಂದ ನೂರರವರೆಗೆ,

A

(1) ಒಂದಂಕೆಯ ಸಂಖ್ಯೆಗಳೆಷ್ಟಿವೆ? ಅವುಗಳನ್ನು ಕ್ರಮವಾಗಿ ಹೇಳು.

(2) ಎರಡಂಕೆಗಳ ಸಂಖ್ಯೆಗಳೆಷ್ಟಿವೆ? ಅವುಗಳಲ್ಲಿ ದೊಡ್ಡದಾವುದು? ಚಿಕ್ಕದಾವುದು?

(3) ಇವುಗಳನ್ನು ಓದಿಹೇಳು:—15, 24, 35, 48, 57, 63, 78, 87, 95, 99.

(4) ಇವುಗಳನ್ನು ಸಂಖ್ಯೆಗಳಲ್ಲಿ ಬರೆ:—ಹದಿನೈದು, ಐವತ್ತಮೂರು, ಮೂವತ್ತೈದು, ನಲವತ್ತೆರಡು, ಐವತ್ತನಾಲ್ಕು, ಅರವತ್ತೆಂಟು, ಎಪ್ಪತ್ತೇಳು, ಎಂಬತ್ತೈದು.

5. i. 2 ಎಂಬಂಕೆಯು ಒಂದೇ ಇದ್ದರೆ ಏನನ್ನು ತೋರಿಸುತ್ತದೆ ಎಂಬುದನ್ನು ಕಡ್ಡಿಗಳ ಮೂಲಕವಾಗಿ ತೋರಿಸು.

ii. ಈ 2 ರ ಪಕ್ಕದಲ್ಲಿ ಎಡಗಡೆಗೆ ಮತ್ತೊಂದು 2 ನ್ನು ಬರೆದರೆ ಆ 2 ಏನನ್ನು ತೋರಿಸುತ್ತದೆ ಎಂಬುದನ್ನು ಕಡ್ಡಿಗಳ ಮೂಲಕ ತೋರಿಸು.

ಬಲಭಾಗದಲ್ಲಿ ಮೊದಲನೆಯ 2 ಬರೆದಿರುವ ಸ್ಥಾನಕ್ಕೆ **ಏಕ** ಅಥವಾ **ಒಂದರ** ಸ್ಥಾನವೆಂದು ಹೆಸರು. ಅಲ್ಲಿರುವ ಅಂಕೆಯು ಅಷ್ಟು ಒಂದುಗಳನ್ನು ತೋರಿಸುತ್ತದೆ. ಎರಡನೆಯ 2 ಬರೆದಿರುವ ಸ್ಥಾನಕ್ಕೆ **ದಶಕ** ಅಥವಾ **ಹತ್ತರ** ಸ್ಥಾನವೆಂದು ಹೆಸರು. ಅಲ್ಲಿರುವ ಅಂಕೆಯು ಅಷ್ಟು ಹತ್ತುಗಳಿವೆ ಎನ್ನುವುದನ್ನು ತೋರಿಸುತ್ತದೆ. ಹೀಗೆ ಒಂದೇ ಅಂಕೆಯು ಬೇರೆಬೇರೆ ಸ್ಥಾನಗಳಲ್ಲಿ ಬರೆಯಲ್ಪಡುವುದರಿಂದ ಬೇರೆಬೇರೆ **ಅರ್ಥ**ವನ್ನು ಎಂದರೆ **ಬೆಲೆ**ಯನ್ನು ಹೊಂದುತ್ತದೆ.

(6) 36, 63, 45, 54—ಈ ಸಂಖ್ಯೆಗಳಲ್ಲಿ ಪ್ರತಿ ಅಂಕೆಯ ಬೆಲೆಯನ್ನು ಹೇಳು.

(7) 10 ಹತ್ತುಗಳಿಗೆ ಏನು ಹೆಸರು? ಅದನ್ನು ಬರೆದು ತೋರಿಸುವುದು ಹೇಗೆ?

ಬಲಗಡೆಯ ಮೊದಲನೆಯ, ಸಂಖ್ಯೆಯ ಮೂರನೆಯ ಸ್ಥಾನಕ್ಕೆ **ಶತಕ** ಅಥವಾ **ನೂರರ** ಸ್ಥಾನವೆಂದು ಹೆಸರು. ಅಲ್ಲಿರುವ ಅಂಕೆಯು ಅಷ್ಟು ನೂರುಗಳಿವೆ ಎನ್ನುವುದನ್ನು ತೋರಿಸುತ್ತದೆ.

(8) i. ಏಕಸ್ಥಾನದಲ್ಲಿ ಬರೆಯಬೇಕಾದ 3 ನ್ನು ದಶಕಸ್ಥಾನದಲ್ಲಿ ಬರೆದರೆ ಅದರ ಬೆಲೆಯನ್ನು ಎಷ್ಟು ಹೆಚ್ಚಿಸಿದ ಹಾಗಾಯಿತು.

ii. ದಶಕ ಸ್ಥಾನದಲ್ಲಿ ಬರೆಯಬೇಕಾದ 3 ನ್ನು ಶತಕಸ್ಥಾನದಲ್ಲಿ ಬರೆದರೆ ಬೆಲೆಯನ್ನು ಎಷ್ಟು ಹೆಚ್ಚಿಸಿದ ಹಾಗಾಯಿತು?

ಹೀಗೆ ಒಂದಂಕೆಯನ್ನು ಎಡಗಡೆಗೆ ಒಂದು ಸ್ಥಾನ ಹೆಚ್ಚಿಸುವುದರಿಂದ ಅದರ ಬೆಲೆಯು ಹತ್ತರಷ್ಟು ಹೆಚ್ಚುತ್ತದೆ.

(9) i. 25 ರಲ್ಲಿ ಎಷ್ಟು ಹತ್ತುಗಳು, ಮೇಲೆ ಎಷ್ಟು ಒಂದುಗಳು ಇವೆ?

25=? ಹತ್ತುಗಳು + ? ಒಂದುಗಳು.

ii. 25 ಕ್ಕೆ ಎಷ್ಟು ಒಂದುಗಳನ್ನು ಸೇರಿಸಿದರೆ 3 ಹತ್ತುಗಳಾಗುತ್ತವೆ ?

25+5=30.

iii. 30 ರಲ್ಲಿ ಎಷ್ಟನ್ನು ಕಳೆದರೆ 25 ಬರುತ್ತದೆ ?

30—5=25.

(?) ಕ್ಕೆ ಬದಲಾಗಿ ಏನನ್ನು ಬರೆಯಬೇಕು ?

(10) 25 = 2 ಹತ್ತುಗಳು+5 ಒಂದುಗಳು.

= 3 ಹ —5 ಒಂ.

ಹೀಗೆಯೇ ಕೆಳಗೆ ಕೊಟ್ಟಿರುವ ಸಂಖ್ಯೆಗಳನ್ನು ಎರಡು ವಿಧವಾಗಿ ಬರೆ:—15, 22, 36, 45, 57, 68,

B

(1) ಒಂದು ಪೆಟ್ಟಿಗೆಯಲ್ಲಿ 25 ಪುಸ್ತಕಗಳಿವೆ. ಇನ್ನೊಂದರಲ್ಲಿ 20 ಪುಸ್ತಕಗಳಿವೆ. ಈ ಎರಡು ಪೆಟ್ಟಿಗೆಗಳಲ್ಲಿಯೂ ಒಟ್ಟು ಎಷ್ಟು ಪುಸ್ತಕಗಳಿವೆ ?

(2) ನನ್ನ ವಯಸ್ಸು 42 ವರುಷ. ರಾಮುನು ನನಗಿಂತ 5 ವರುಷ ದೊಡ್ಡವನು. ಹಾಗಾದರೆ ರಾಮುನ ವಯಸ್ಸೆಷ್ಟು ?

(3) ಒಂದು ಜೇಲದಲ್ಲಿ 22 ರೂಪಾಯಿಗಳಿವೆ. ಇನ್ನೊಂದರಲ್ಲಿ 24 ರೂ. ಗಳಿವೆ. ಈ ಎರಡು ಜೇಲಗಳಲ್ಲಿಯೂ ಒಟ್ಟೆಷ್ಟು ರೂ. ಗಳಿವೆ.

(4) i. ಈ ಕೂಡುವ ಲೆಕ್ಕಗಳನ್ನು ಮಾಡು.

8	22	28	48	54	67
4	10	13	22	36	32

ii. 8+4=?, 22+10=?, 28+14=?, 48+22=?, 54+36=?, 67+32=?.

(?) ಕ್ಕೆ ಬದಲಾಗಿ ಏನನ್ನು ಬರೆಯಬೇಕು ?

(5) 19+17= 47+19= 42+31=

21+16= 38+17= 54+33=

ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ.

(6) ನನ್ನಲ್ಲಿ 35 ರೂ. ಗಳಿವೆ. 20 ರೂ. ಗಳನ್ನು ವೆಚ್ಚಮಾಡಿದರೆ ಉಳಿಯುವುದೆಷ್ಟು ?

(7) ನನ್ನಲ್ಲಿ 25 ಗಜ ಕಾಗದಗಳಿವೆ. ರಾಮುನಲ್ಲಿ ನನಗಿಂತ 8 ಗಜಗಳು ಕಡಿಮೆ ಇವೆ. ಹಾಗಾದರೆ ರಾಮುನಲ್ಲೆಷ್ಟಿವೆ?

(8) ಒಂದು ಸರದಲ್ಲಿ 18 ಮಣಿಗಳಿವೆ. ಇನ್ನೆಷ್ಟು ಮಣಿಗಳನ್ನು ಪೋಣಿಸಿದರೆ ಆ ಸರದಲ್ಲಿ 26 ಮಣಿಗಳಾಗುತ್ತವೆ?

(9) i. ಈ ಕಳೆಯುವ ಲೆಕ್ಕಗಳನ್ನು ಮಾಡು:—

1	12	22	25	36	57	65	72
1	5	5	10	15	31	33	25
———	———	———	———	———	———	———	———

ii. 8—3= 36—15=
12—5= 57—31=
22—5= 65—33=
25—10= 72—25=

ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ.

(10) 35—25= 34—21= 58—29=
28—13= 48—36= 67—38=

ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ.

C

(1) 3, 5, 7, 9 ರ ಮಗ್ಗಿಗಳನ್ನು ಹೇಳು?

(2) ಒಂದು ಪಾಠಶಾಲೆಯು ದಿವಸಕ್ಕೆ 5 ಘಂಟೆಗಳ ಕಾಲ ತೆಗೆದಿರುತ್ತದೆ. 6 ದಿವಸಗಳಲ್ಲಿ ಎಷ್ಟು ಘಂಟೆಗಳ ಕಾಲ ತೆಗೆದಿರುತ್ತದೆ?

(3) ನಾನು ಒಂದು ವಾರಕ್ಕೆ 5 ಆಣೆಗಳನ್ನು ಉಳಿಸುತ್ತೇನೆ. 8 ವಾರಗಳಲ್ಲಿ ಎಷ್ಟು ಉಳಿಸುತ್ತೇನೆ?

(4) ಸಾಲಿಗೆ 10 ಹುಡುಗರಂತೆ 10 ಸಾಲುಗಳಲ್ಲಿ ಎಷ್ಟು ಹುಡುಗರಿದ್ದಾರೆ?

(5) 1 ರೂ. ಗೆ 6 ಸೇರುಗಳಂತೆ 4 ರೂ. ಗೆ ಸಣ್ಣಕ್ಕಿಯನ್ನು ಕೊಂಡುಕೊಂಡರೆ ಎಷ್ಟು ಸೇರುಗಳು ಬರುವುವು?

(6) ನನ್ನಲ್ಲಿ 20 ಬಳಪಗಳಿವೆ. 5 ಹುಡುಗರಿಗೆ ಸಮವಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ಬಳಪಗಳು ಬರುತ್ತವೆ?

(7) i. ಹತ್ತು ರೂ. ಗಳ ನೋಟುಗಳು 8 ನ್ನು ನಾಲ್ಕು ಜನಳಿಗೆ ಸಮನಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ನೋಟುಗಳು ಬರುತ್ತವೆ? ಎಷ್ಟು ರೂ. ಗಳು ಬರುತ್ತವೆ?

ii. 4 ರೂ. ನ್ನು ನಾಲ್ಕು ಜನಗಳಿಗೆ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ಒರುತ್ತದೆ?

iii. 80 ರೂ. ನ್ನು ನಾಲ್ಕು ಜನಗಳಿಗೆ ಹಂಚು.

(8) 8 ನ್ನು ಎಷ್ಟು ಸಲ ಕೂಡಿದರೆ 32 ಬರುತ್ತದೆ? 25 ರಲ್ಲಿ 5 ನ್ನು ಎಷ್ಟುಸಲ ಕಳೆಯಬಹುದು?

(9) i. ಆಣೆಗೆ 6 ರಂತೆ 10 ಆಣೆಗಳಿಗೆ ಸೀಬೆಹಣ್ಣುಗಳನ್ನು ಕೊಂಡರೆ ಎಷ್ಟು ಹಣ್ಣುಗಳು ಬರುತ್ತವೆ?

ii ಆ ಹಣ್ಣುಗಳಲ್ಲಿ 20 ಹಣ್ಣುಗಳನ್ನು ಇಟ್ಟುಕೊಂಡು ಮಿಕ್ಕವನ್ನು ಆಣೆಗೆ 5 ರಂತೆ ಮಾರಿದರೆ ಎಷ್ಟು ಆಣೆಗಳು ಬರುತ್ತವೆ?

(10) i. ಒಂದು ಕಟ್ಟಿನಲ್ಲಿ 6 ಮೇಣದ ಬತ್ತಿಗಳಿವೆ. 6 ಕಟ್ಟುಗಳಲ್ಲಿ ಎಷ್ಟಿವೆ?

ii. ಆ ಬತ್ತಿಗಳನ್ನು ಕಟ್ಟಿಗೆ 9 ರಂತೆ ಕಟ್ಟಿದರೆ ಎಷ್ಟು ಕಟ್ಟುಗಳು ಆಗುತ್ತವೆ?

2 ನೆಯ ಅಭ್ಯಾಸ

ನೂರೊಂದರಿಂದ ಸಾವಿರದವರೆಗೆ.

ನೂರುಗಳು.

100=1 ನೂರು=10 ಹತ್ತುಗಳು.

(1) ಇವುಗಳನ್ನು ಓದಿಹೇಳು:—200, 400, 700, 800.

ಇವುಗಳನ್ನು ಅಂಕೆಗಳಲ್ಲಿ ಬರೆ:—ಮುನ್ನೂರು, ಐನೂರು, ಆರುನೂರು, ಒಂಬೈನೂರು.

(2) 100, 300 ,500, 700 ಗಳಲ್ಲಿ ಎಷ್ಟು ಹತ್ತುಗಳಿವೆ?

(3) 200, 400, 600, 800 ರೂ. ಗಳಿಗೆ 10 ರೂ. ಗಳ ನೋಟುಗಳು ಎಷ್ಟು ಬರುತ್ತವೆ?

(4) ಒಬ್ಬೊಬ್ಬನಿಗೆ 200 ರೂ. ಗಳಂತೆ 4 ಜನಗಳಿಗೆ ಕೊಡಬೇಕಾದರೆ ಎಷ್ಟು ರೂ. ಗಳು ಇರಬೇಕು?

(5) 600 ರೂ. ಗಳನ್ನು i. ಇಬ್ಬರಿಗೆ ii. ಮೂರು ಜನರಿಗೆ iii. ಆರು ಜನರಿಗೆ ಹಂಚು.

(6) 400+200 ಎಷ್ಟು

(7) 400+200+100 ಎಷ್ಟು ?

(8) 600+300 ಎಷ್ಟು ?

(9) ನನ್ನಲ್ಲಿರುವ 500 ರೂ ಗಳಲ್ಲಿ 100 ರೂ ಗಳನ್ನು ಕಳೆದು ಕೊಂಡೆನು. ರಾಮನು 200 ರೂ. ಗಳನ್ನು ನನಗೆ ಕೊಟ್ಟನು. ಈಗ ನನ್ನಲ್ಲೆಷ್ಟಿದೆ ?

300 — 100+200 ಎಷ್ಟು ?

(10) 300 ರೂ. ಗಳನ್ನು i. ಮೂರು ಜನಗಳಿಗೆ, ii. ಆರು ಜನಗಳಿಗೆ iii. ಹತ್ತು ಜನಗಳಿಗೆ ಸಮನಾಗಿ ಹಂಚು.

3 ನೆಯ ಅಭ್ಯಾಸ.

ಇವುಗಳನ್ನು ಅಂಕೆಗಳಲ್ಲಿ ಬರೆ:—

(1) ನೂರೆರಡು
(2) ನೂರೊಂಬತ್ತು
(3) ನೂರ ಮೂವತ್ತು
(4) ನೂರೈವತ್ತು
(5) ನೂರ ಹನ್ನೆರಡು
(6) ನೂರ ಮುವ್ವತ್ತೆಂಟು
(7) ನೂರ ನಲವತ್ತೊಂಬತ್ತು
(8) ಇನ್ನೂರೈದು
(9) ಇನ್ನೂರೇಳು
(10) ಇನ್ನೂರರುವತ್ತು
(11) ಇನ್ನೂರ ತೊಂಬತ್ತು
(12) ಇನ್ನೂರ ಹದಿನೆಂಟು
(13) ಇನ್ನೂರತೊಂಬತ್ತೇಳು
(14) ಮುನ್ನೂರೇಳು
(15) ಮುನ್ನೂರೈವತ್ತು
(16) ಮುನ್ನೂರತೊಂಬತ್ತು
(17) ಮುನ್ನೂರಱವತ್ತೈದು
(18) ಮುನ್ನೂರೆಪ್ಪತ್ತೇಳು
(19) ಮುನ್ನೂರತೊಂಬತ್ತೊಂ [ಬತ್ತು
(20) ನಾನೂರೊಂದು
(21) ನಾನೂರೊಂಬತ್ತು
(22) ನಾನೂರ ನಲವತ್ತು
(23) ನಾನೂರೆಂಬತ್ತು
(24) ನಾನೂರನಲವತ್ತನಾಲ್ಕು
(25) ನಾನೂರರುವತ್ತೇಳು
(26) ಐನೂರ ಮೂರು
(27) ಐನೂರ ಐದು
(28) ಐನೂರೈವತ್ತು
(29) ಐನೂರರುವತ್ತು
(30) ಐನೂರೈವತ್ತೈದು
(31) ಐನೂರೆಂಬತ್ತೆರಡು
(32) ಆರುನೂರೇಳು
(33) ಆರುನೂರೊಂಬತ್ತು
(34) ಆರುನೂರರುವತ್ತು
(35) ಆರುನೂರ ಎಪ್ಪತ್ತು
(36) ಆರುನೂರರುವತ್ತೆರಡು
(37) ಏಳುನೂರ ತೊಂಬತ್ತು
(38) ಏಳನೂರ ತೊಂಬತ್ತೆರಡು
(39) ಏಳನೂರ ತೊಂಬತ್ತೇಳು
(40) ಏಳುನೂರ ತೊಂಬತ್ತೊಂ [ಬತ್ತು
(41) ಎಂಟುನೂರೆರಡು
(42) ಎಂಟುನೂರೊಂಬತ್ತು
(43) ಎಂಟುನೂರ ಹತ್ತು
(44) ಎಂಟುನೂರ ನಲವತ್ತು
(45) ಎಂಟುನೂರ ಹನ್ನೊಂದು
(46) ಒಂಬೈನೂರೆಂಟು
(47) ಒಂಬೈನೂರಾರು
(48) ಒಂಬೈನೂರ ಮೂವತ್ತು
(49) ಒಂಬೈನೂರಿಪ್ಪತ್ತೇಳು
(50) ಒಂಬೈನೂರ ತೊಂಬ [ತೊಂಬತ್ತು

4 ನೆಯ ಅಭ್ಯಾಸ.

ಇವುಗಳನ್ನು ಓದಿಹೇಳು.

(1)	101	(11)	222	(21)	420	(31)	605	(41)	756
(2)	107	(12)	299	(22)	480	(32)	608	(42)	789
(3)	150	(13)	304	(23)	444	(33)	612	(43)	804
(4)	190	(14)	309	(24)	468	(34)	625	(44)	840
(5)	145	(15)	320	(25)	508	(35)	646	(45)	888
(6)	195	(16)	390	(26)	509	(36)	664	(46)	890
(7)	206	(17)	333	(27)	510	(37)	712	(47)	906
(8)	209	(18)	378	(28)	570	(38)	721	(48)	916
(9)	260	(19)	402	(29)	578	(39)	734	(49)	930
(10)	290	(20)	405	(30)	587	(40)	743	(50)	998

ಮಿಶ್ರೋದಾಹರಣೆಗಳು.

5 ನೆಯ ಅಭ್ಯಾಸ.

(1) 625 ರಲ್ಲಿ ಪ್ರತಿ ಅಂಕೆಯ ಬೆಲೆಯನ್ನೂ ಹೇಳು.

(2) 999 ರಲ್ಲಿ ಪ್ರತಿ 9 ರ ಬೆಲೆಯನ್ನೂ ಹೇಳು.

(3) 917 ರಲ್ಲಿ 1 ರ ಬೆಲೆ ಏನು. 971 ರಲ್ಲಿ 1 ರ ಬೆಲೆ ಏನು?

(4) 76 ರ ಮಧ್ಯದಲ್ಲಿ ಎಂದರೆ 7, 6 ರ ನಡುವೆ ಒಂದು ಸೊನ್ನೆಯನ್ನಿಟ್ಟರೆ ಯಾವ ಸಂಖ್ಯೆಯಾಗುತ್ತದೆ? ಬರೆದು ತೋರಿಸು ಮತ್ತು ಓದಿ ಹೇಳು.

(5) 806 ಇಲ್ಲಿರುವ 0 ಯು ಏನನ್ನು ತೋರಿಸುತ್ತದೆ

(6) i. 421 ರಲ್ಲಿ ಎಷ್ಟು ನೂರುಗಳಿವೆ.

ii 4 ನೂರುಗಳಲ್ಲಿ ಎಷ್ಟು ಹತ್ತುಗಳಿವೆ? 421 ರಲ್ಲಿ ಎಷ್ಟು ಹತ್ತುಗಳಿವೆ.

(7) 273, 327, 735, 825, 873, 921, 933, 945, 983–ಇವುಗಳಲ್ಲಿ ಎಷ್ಟು ನೂರುಗಳಿವೆ? ಎಷ್ಟು ಹತ್ತುಗಳಿವೆ?

(8) 34 ಹತ್ತುಗಳು, ಮೇಲೆ 6 ಎಂದರೆಷ್ಟು?

(9) 96 ಹತ್ತುಗಳು, ಮೇಲೆ 7 ಎಂದರೆಷ್ಟು?

(10) 3 ರ ಮುಂದೆ ಒಂದು ಸೊನ್ನೆಯನ್ನಿಟ್ಟರೆ ಎಷ್ಟು ಹತ್ತುಗಳಾಗುತ್ತವೆ?

(11) 27 ರ ಮುಂದೆ ಒಂದು ಸೊನ್ನೆಯನ್ನಿಟ್ಟಿದ್ದರೆ ಎಷ್ಟು ಹತ್ತುಗಳಾಗುತ್ತವೆ?

(12) 3, 7, 8, 15, 18, 28, 32, 58, 78, 95,—ಇವುಗಳ ಮುಂದೆ ಒಂದು ಸೊನ್ನೆಯನ್ನಿಟ್ಟರೆ ಎಷ್ಟು ಹತ್ತುಗಳಾಗುತ್ತವೆ.

ಒಂದು ಸಂಖ್ಯೆಯ ಮುಂದೆ ಒಂದು ಸೊನ್ನೆಯನ್ನು ಹಾಕಿದರೆ ಆ ಸಂಖ್ಯೆಯಷ್ಟು ಹತ್ತುಗಳಾಗುತ್ತವೆ.

(13) 432=4 ನೂರುಗಳು+3 ಹತ್ತುಗಳು+2 ಒಂದುಗಳು

=43 ಹತ್ತುಗಳು+2 ಒಂದುಗಳು

=44 ಹತ್ತುಗಳು—8 ಒಂದುಗಳು

ಕೆಳಗೆ ಕೊಟ್ಟಿರುವ ಸಂಖ್ಯೆಗಳನ್ನು ಹೀಗೆ ಮೂರು ವಿಧವಾಗಿ ವಿಂಗಡಿಸಿ ಬರೆ.

125, 225, 367, 588, 698.

(14) ನನ್ನಲ್ಲಿ 325 ರೂ. ಗಳಿವೆ. ಗೋವಿಂದನಲ್ಲಿ 200 ರೂ. ಗಳಿವೆ. ನಮ್ಮಿಬ್ಬರಲ್ಲಿಯೂ ಒಟ್ಟಿಷ್ಟು ರೂ. ಗಳಿವೆ.

(15) ಒಂದು ಪೆಟ್ಟಿಗೆಯಲ್ಲಿ 144 ನಿಬ್ಬುಗಳಿವೆ. ಇನ್ನೊಂದರಲ್ಲಿ 30 ನಿಬ್ಬುಗಳಿವೆ. ಎರಡು ಪೆಟ್ಟಿಗೆಗಳಲ್ಲಿಯೂ ಒಟ್ಟಿಷ್ಟು ನಿಬ್ಬುಗಳಿವೆ.

(16) ಒಂದು ಕಟ್ಟಿನಲ್ಲಿ 125 ಗಜ ಕಾಗದವಿದೆ. ನಾನು 8 ಗಜಗಳನ್ನು ಹೆಚ್ಚಾಗಿ ಸೇರಿಸುತ್ತೇನೆ. ಈಗೆಷ್ಟು ಗಜಗಳು ಕಾಗದವಿದೆ?

(17) ಈ ಕೂಡುವ ಲೆಕ್ಕಗಳನ್ನು ಮಾಡು:—

(1)	(2)	(3)	(4)	(5)	(6)	(7)
66	76	154	236	356	487	609
22	53	28	118	148	236	122

(8)	(9)	(10)
782	815	805
217	126	194

(18) i. ಒಂದು ಗುಡ್ಡೆಯಲ್ಲಿ 12 ನಿಂಬೆ ಹಣ್ಣುಗಳಿವೆ. 5 ಹಣ್ಣುಗಳನ್ನು ಮಾರಿದ ಮೇಲೆ ಎಷ್ಟು ಹಣ್ಣುಗಳು ಉಳಿದಿವೆ ?

ii. ಅದಕ್ಕೆ ಈಗ 20 ಹಣ್ಣುಗಳನ್ನು ಸೇರಿಸಿದರೆ ಎಷ್ಟಾಯಿತು ?

(19) ಒಂದು ಗಾಡಿಯೂ ಕುದುರೆಯೂ ಸೇರಿ 310 ರೂ. ಗಳಾಗುತ್ತವೆ. ಕುದುರೆಯ ಖರೀದಿ 90 ರೂ. ಗಳಾದರೆ ಗಾಡಿಯ ಖರೀದಿ ಎಷ್ಟು ?

(20). ಒಂದು ಚೀಲದಲ್ಲಿ 450 ರೂ. ಗಳಿವೆ. 200 ರೂ. ಗಳನ್ನು ತೆಗೆದುಕೊಂಡಮೇಲೆ ಆ ಚೀಲದಲ್ಲೆಷ್ಟು ಉಳಿಯುತ್ತದೆ ?

(21) ಈ ಕಳೆಯುವ ಲೆಕ್ಕಗಳನ್ನು ಮಾಡು ?

[1]	[2]	[3]	[4]	[5]	[6]	[7]	[8]
12	32	110	115	225	326	438	658
5	15	20	23	112	141	342	234

(22) ಒಂದು ಪುಟದಲ್ಲಿ 20 ಸಾಲುಗಳಿವೆ. ಪ್ರತಿ ಸಾಲಿನಲ್ಲಿಯೂ 10 ಅಕ್ಷರಗಳಿವೆ. ಆ ಪುಟದಲ್ಲೆಷ್ಟು ಅಕ್ಷರಗಳಿವೆ ?

(23) 1 ಸವತೆಕಾಯಿಗೆ 10 ಕಾಸುಗಳಂತೆ 25 ಸವತೆಕಾಯಿಗಳಿಗೆ ಎಷ್ಟು ಕಾಸುಗಳು ?

(24) i. 1 ಗುಡ್ಡೆಗೆ 10 ಮಾವಿನಹಣ್ಣುಗಳಂತೆ ಇಟ್ಟರೆ 320 ಹಣ್ಣುಗಳಿಗೆ ಎಷ್ಟು ಗುಡ್ಡೆಗಳು ಆಗುತ್ತವೆ ?

ii. 10 ಮಾವಿನ ಹಣ್ಣುಗಳಿಗೆ 1 ರೂಪಾಯಾದರೆ 320 ಹಣ್ಣುಗಳಿಗೆ ಎಷ್ಟು ರೂ. ಗಳು ?

(25) 170 ರೂ. ಗಳನ್ನು 10 ಜನಗಳಿಗೆ ಹಂಚು.

(26) ಒಂದು ಪಲ್ಲಾ ಅಕ್ಕಿಗೆ 100 ಸೇರುಗಳು. 7 ಪಲ್ಲಾಗಳಿಗೆ ಎಷ್ಟು ಸೇರುಗಳು ? 900 ಸೇರುಗಳಿಗೆ ಎಷ್ಟು ಪಲ್ಲಾಗಳು ?

(27) ಗಂಜಾಮಿಗೂ ಮೈಸೂರಿಗೂ 10 ಮೈಲಿಗಳು ದೂರವಿದೆ. ಹತ್ತು ಸಲ ಹೋಗಿಬಂದರೆ ಎಷ್ಟು ಮೈಲಿಗಳನ್ನು ನಡೆದ ಹಾಗಾಯಿತು?

(28) i. 1 ಚೌಕಕ್ಕೆ 10 ರೂ. ಗಳಂತೆ 70 ಚೌಕಗಳಿಗೆಷ್ಟು ?

ii. ಪ್ರತಿ ಚೌಕಕ್ಕೂ 1 ರೂ. ಹೆಚ್ಚು ಖರೀದಿ ಇದ್ದರೆ ಎಷ್ಟು ರೂ. ಗಳು ಹೆಚ್ಚಾಗಿ ಬೇಕು ?

iii. ಚೌಕಕ್ಕೆ 11 ರೂ. ಗಳಂತೆ 70 ಚೌಕಗಳನ್ನು ಮಾರಿದರೆ ಎಷ್ಟು ರೂ. ಗಳು ಬರುತ್ತವೆ ?

(29) i. ಒಂದು ಗಜ ಬಟ್ಟೆಗೆ 4 ಆಣೆಗಳಾದರೆ 8 ಗಜಗಳಿಗೆಷ್ಟು ಖರೀದಿ ?

ii. ಎಷ್ಟು ಸಲ 8 ಗಜಗಳನ್ನು ಅಳೆದರೆ 80 ಗಜಗಳಾಗುವುವು ?

iii. ಗಜಕ್ಕೆ 4 ಆಣೆಯಂತೆ 80 ಗಜಗಳಿಗೆಷ್ಟು ಖರೀದಿ ?

(30) i. 100 ಮಾವಿನ ಹಣ್ಣುಗಳನ್ನು 5 ಜನಗಳಿಗೆ ಸಮನಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ಹಣ್ಣುಗಳು ಬರುತ್ತವೆ ?

ii. 45 ಹಣ್ಣುಗಳನ್ನು 5 ಜನಗಳಿಗೆ ಸಮನಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ಹಣ್ಣುಗಳು ಬರುತ್ತವೆ ?

iii. 145 ಹಣ್ಣುಗಳನ್ನು 5 ಜನಗಳಿಗೆ ಸಮನಾಗಿ ಹಂಚು.

6 ನೆಯ ಅಭ್ಯಾಸ.

ಸಾವಿರದಿಂದ ಹತ್ತು ಸಾವಿರದ ವರೆಗೆ

ಸಾವಿರಗಳು.

10 ನೂರುಗಳಿಗೆ **1** ಸಾವಿರವೆಂದು ಹೆಸರು ಬಲಗಡೆಯಿಂದ ನಾಲ್ಕನೆಯ ಸ್ಥಾನವೆ ಸಾವಿರದ ಸ್ಥಾನವು. ನಾಲ್ಕನೆಯಸ್ಥಾನದಲ್ಲಿರುವ ಅಂಕೆಯು ಎಷ್ಟು ಸಾವಿರಗಳಿವೆ ಎನ್ನುವುದನ್ನು ತೋರಿಸುತ್ತದೆ.

ಸಾ.	ನೂ.	ಹ.	ಒಂ.
4	0	0	0

ಮಿಕ್ಕ ಸ್ಥಾನಗಳಲ್ಲಿ ಯಾವ ಅಂಕೆಗಳೂ ಇಲ್ಲವೆನ್ನುವುದನ್ನು ಸೊನ್ನೆಗಳು ತೋರಿಸುತ್ತವೆ.

A

ಇವುಗಳನ್ನು ಅಂಕೆಗಳಲ್ಲಿ ಬರಿ :—

[1] ಎರಡುಸಾವಿರ	[4] ಏಳುಸಾವಿರ	[7] ಐದುಸಾವಿರ
[2] ನಾಲ್ಕುಸಾವಿರ	[5] ಎಂಟುಸಾವಿರ	[8] ಒಂಬತ್ತುಸಾವಿರ
[3] ಆರುಸಾವಿರ	[6] ಮೂರುಸಾವಿರ	

B

ಇವುಗಳನ್ನು ಓದಿಹೇಳಿ:—

(1) 3000	(3) 2000	(5) 4000	(7) 5000
(2) 7000	(4) 6000	(6) 8000	(8) 9000

C

(1) i. 1000 ದಲ್ಲಿ ಎಷ್ಟು ನೂರುಗಳಿವೆ? ಎಷ್ಟು ಹತ್ತುಗಳಿವೆ?

ii. (B) ಯಲ್ಲಿರುವ ಸಾವಿರಗಳಲ್ಲಿ ಎಷ್ಟು ನೂರುಗಳಿವೆ? ಎಷ್ಟು ಹತ್ತುಗಳಿವೆ?

(2) i. 1000 ರೂ. ಗಳಿಗೆ ಎಷ್ಟು ನೂರು ರೂ. ಗಳ ನೋಟುಗಳು ಬರುತ್ತವೆ.

ii. ಈ ನೋಟುಗಳನ್ನು ಇಬ್ಬರಿಗೆ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ನೋಟುಗಳು ಬರುತ್ತವೆ? ಎಷ್ಟು ರೂ. ಗಳು ಬರುತ್ತವೆ?

iii. 1000 ದ ಅರ್ಧವೆಷ್ಟು?

(3) i. 8 ನೂರು ರೂ. ಗಳನ್ನು ನಾಲ್ಕು ಜನಗಳಿಗೆ ಸಮನಾಗಿ ಹಂಚು. ಒಬ್ಬೊಬ್ಬನಿಗೆಷ್ಟು ಬರುತ್ತದೆ?

ii. 200 ರೂಗಳಲ್ಲಿ ಎಷ್ಟು ಹತ್ತು ರೂ. ಗಳಿವೆ? ನಾಲ್ಕು ಜನಗಳಿಗೆ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ಬರುತ್ತದೆ?

iii. 1000 ದಲ್ಲಿ ಕಾಲುಭಾಗವೆಷ್ಟು?

(4) i. ಒಂದು ಚೀಲದಲ್ಲಿ ಒಂದು ಸಾವಿರ ರೂ. ಗಳಿವೆ. ಇನ್ನೊಂದರಲ್ಲಿ ಎಂಟುನೂರು ರೂ. ಗಳಿವೆ. ಈ ಎರಡು ಚೀಲಗಳಲ್ಲಿಯೂ ಒಟ್ಟು ಎಷ್ಟು ರೂ. ಗಳಿವೆ? ಅಂಕೆಗಳಲ್ಲಿ ಬರಿ.

ii. ರಾಮನಲ್ಲಿ ಸಾವಿರ ರೂ. ಗಳಿವೆ. ಗೋವಿಂದನಲ್ಲಿ ಎಂಟುನೂರು ರೂ. ಗಳಿವೆ. ಭೀಮನಲ್ಲಿ ಐವತ್ತು ರೂ. ಗಳಿವೆ. ಈ ಮೂವರಿಂದ ಒಟ್ಟೆಷ್ಟು ರೂ. ಗಳಿವೆ? ಅಂಕೆಗಳಲ್ಲಿ ಬರಿ.

(6) i. 6 ನೂರುಗಳು+8 ನೂರುಗಳು=? ಸಾ.+? ನೂ.

4 ನೂ.+7 ನೂ.=? ಸಾ.+? ನೂ.

5 ನೂ.+8 ನೂ.=? ಸಾ,+? ನೂ.

(?) ಕ್ಕೆ ಬದಲಾಗಿ ಏನು ಬರೆಯಬೇಕು?

ii. ಈ ಕೂಡುವ ಲೆಕ್ಕಗಳನ್ನು ಮಾಡು :—

ಸಾ.	ನೂ.	ಹ.	ಒಂ.	ಸಾ.	ನೂ.	ಹ.	ಒಂ.	
1	8	7	0	1	4	3	2	1546
	6	2	4		7	6	5	554

(7) ನನ್ನಲ್ಲಿ 5 ಸಾವಿರ ರೂ. ಗಳಿವೆ. ನನ್ನ ತಮ್ಮನಿಗೆ 2 ಸಾವಿರ ರೂ. ಗಳನ್ನೂ, ಧರ್ಮಾರ್ಥವಾಗಿ 1 ಸಾವಿರ ರೂ. ಗಳನ್ನೂ ಕೊಟ್ಟುಬಿಡುತ್ತೇನೆ. ಹಾಗಾದರೆ ನನ್ನಲ್ಲಿ ಉಳಿಯುವುದೆಷ್ಟು ?

(9) ಈ ಕಳೆಯುವ ಲೆಕ್ಕಗಳನ್ನು ಮಾಡು :—

	ಸಾ.	ನೂ.	ಹ.	ಒಂ.		ಸಾ.	ನೂ.	ಹ.	ಒಂ.		
(1)		7	6	4	(2)	2	5	6	7	[3]	3478
		4	3	2		1	4	5	6		1369

(9) ಒಂದು ಸಾಲಿಗೆ 100 ಸಿಪಾಯಿಗಳಂತೆ 10 ಸಾಲುಗಳಲ್ಲಿ ಎಷ್ಟು ಸಿಪಾಯಿಗಳಿದಾರೆ.

(10) i. ಒಬ್ಬನಿಗೆ 1000 ರೂಪಾಯಿ ಸಾಲವಿದೆ. ತಿಂಗಳಿಗೆ 100 ರೂ. ಗಳಂತೆ ತೀರಿಸುತ್ತಾ ಬಂದರೆ ಎಷ್ಟು ತಿಂಗಳಲ್ಲಿ ಸಾಲವನ್ನು ತೀರಿಸಬಹುದು ?

ii. 6,000 ರೂ. ಗಳನ್ನು ತೀರಿಸುವುದಕ್ಕೆ ಎಷ್ಟು ತಿಂಗಳು ಬೇಕು.

7 ನೆಯ ಅಭ್ಯಾಸ.

ಇವುಗಳನ್ನು ಅಂಕೆಗಳಲ್ಲಿ ಬರೆ ಮತ್ತು ಹಾಗೆ ಬರೆದುದನ್ನು ಓದಿ ಹೇಳು.

[1] ಒಂದು ಸಾವಿರದೊಂಬತ್ತು
[2] ಒಂದು ಸಾವಿರದ ಮೂವತ್ತೊಂದು
[3] ಒಂದುಸಾವಿರದ ನಾನೂರೈವತ್ತಾರು
[4] ಎರಡುಸಾವಿರದ ಎರಡು
[5] ಎರಡುಸಾವಿರದ ನಲವತ್ತೆಂಟು
[6] ಎರಡುಸಾವಿರದ ಇನೂರಿಪ್ಪತ್ತೆರಡು
[7] ಮೂರುಸಾವಿರದೊಂಬತ್ತು
[8] ಮೂರುಸಾವಿರದಿಪ್ಪತ್ತೇಳು
[9] ಮೂರುಸಾವಿರದ ಮುನ್ನೂರನಲವತ್ತನಾಲ್ಕು
[10] ಮೂರುಸಾವಿರದೆಂಟುನೂರು
[11] ನಾಲ್ಕು ಸಾವಿರದ ಎರಡು
[12] ನಾಲ್ಕು ಸಾವಿರದೊಂಬೈನೂರು
[13] ನಾಲ್ಕು ಸಾವಿರದೇಳನೂರೆಪ್ಪತ್ತು

(14) ನಾಲ್ಕುಸಾವಿರದಾರನೂರೈವತ್ತ
ನಾಲ್ಕು
(15) ಐದುಸಾವಿರದೊಂಬತ್ತು
(16) ಐದುಸಾವಿರದೆಂಟುನೂರಾರು
(17) ಐದುಸಾವಿರದೈನೂರಮುವ್ವತ್ತು
(18) ಆರುಸಾವಿರದೆಂಟುನೂರೆಪ್ಪತ್ತು
(19) ಆರುಸಾವಿರದೊಂಬೈನೂರೆಂಬತ್ತೇ [ಳು
(20) ಆರುಸಾವಿರದೈದು
(21) ಏಳುಸಾವಿರದೇಳು
(22) ಏಳುಸಾವಿರದ ಇನ್ನೂರೆರಡು
(23) ಏಳುಸಾವಿರದ ನೂರೈವತ್ತಾರು
(24) ಎಂಟುಸಾವಿರದೊಂದು
(25) ಎಂಟುಸಾವಿರದಿಪ್ಪತ್ತಮೂರು
(26) ಎಂಟುಸಾವಿರದೆಂಟುನೂರೆಂಬ
ತ್ತೆಂಟು
(27) ಒಂಬತ್ತುಸಾವಿರದೆಂಟುನೂರರು
ವತ್ತು
(28) ಒಂಬತ್ತುಸಾವಿರದ ಆರುನೂರು
(29) ಒಂಬತ್ತುಸಾವಿರದೊಂಬೈನೂರ
ತೊಂಬತ್ತು.
(30) ಒಂಬತ್ತುಸಾವಿರದ ತೊಂಬತ್ತು

8 ನೆಯ ಅಭ್ಯಾಸ.

ಇವುಗಳನ್ನು ಓದಿ ಹೇಳು:—

(1)	1011	(8)	2987	(15)	5302	(22)	7304
(2)	1101	(9)	3007	(16)	5590	(23)	7777
(3)	1110	(10)	3105	(17)	5695	(24)	8010
(4)	1111	(11)	3456	(18)	6006	(25)	8699
(5)	2800	(12)	4040	(19)	6021	(26)	8986
(6)	2106	(13)	4440	(20)	6789	(27)	9090
(7)	2260	(14)	4444	(21)	7011	(28)	9602

(29) 7095 = ? ಸಾವಿರಗಳು + ? ನೂರುಗಳು + ? ಹತ್ತುಗಳು + ? ಒಂದುಗಳು. (?) ಕ್ಕೆ ಬದಲಾಗಿ ಏನನ್ನ ಬರೆಯಬೇಕು ?

(30) 9099 ರಲ್ಲಿ ಪ್ರತಿ 9 ರ ಬೆಲೆಯನ್ನು ಹೇಳು ?

(31) i. 3684 ರಲ್ಲಿ ಎಷ್ಟು ಸಾವಿರಗಳಿವೆ ?

ii. 3 ಸಾ. ಗಳಲ್ಲಿ ಎಷ್ಟು ನೂರುಗಳಿವೆ ? 3684 ರಲ್ಲಿ ಎಷ್ಟು ನೂರುಗಳಿವೆ ?

iii. 3 ಸಾ. ಗಳಲ್ಲಿ ಎಷ್ಟು ಹತ್ತುಗಳಿವೆ ? 6 ನೂರುಗಳಲ್ಲಿ ಎಷ್ಟು ಹತ್ತುಗಳಿವೆ ? 3684 ರಲ್ಲಿ ಎಷ್ಟು ಹತ್ತುಗಳಿವೆ ?

(32) 3999, 4321, 5463, 6066, 8175—ಇವುಗಳಲ್ಲಿ ಎಷ್ಟು ಸಾ. ಗಳಿವೆ ? ಎಷ್ಟು ನೂರುಗಳಿವೆ ? ಎಷ್ಟು ಹತ್ತುಗಳಿವೆ ?

ಇವುಗಳಿಂದ ತಿಳಿಯುವುದೇನು ?

ಒಂದು ಸಂಖ್ಯೆಯ ಕೊನೆಯ ಅಂಕೆಯನ್ನು ಬಿಟ್ಟುಬಿಟ್ಟರೆ ನಿಂತಿರುವ ಸಂಖ್ಯೆಯು ಎಷ್ಟು ಹತ್ತುಗಳಿವೆ ಎನ್ನುವುದನ್ನು ತೋರಿಸುತ್ತದೆ. ಕೊನೆ ಎರಡಂಕೆಗಳನ್ನು ಬಿಟ್ಟುಬಿಟ್ಟರೆ ನಿಂತಿರುವ ಸಂಖ್ಯೆಯು ಎಷ್ಟು ನೂರುಗಳಿವೆ ಎನ್ನುವುದನ್ನು ತೋರಿಸುತ್ತದೆ. ಕೊನೆಯ ಮೂರಂಕೆಗಳನ್ನು ಬಿಟ್ಟುಬಿಟ್ಟರೆ ಎಷ್ಟು ಸಾ. ಗಳಿವೆ ಎನ್ನುವುದನ್ನು ತೋರಿಸುತ್ತದೆ.

(33) ನನ್ನಲ್ಲಿ 4 ಸಾವಿರ ರೂ. ಗಳಿವೆ. ರಾಮುನಲ್ಲಿ 600 ರೂ. ಗಳೂ ಗೋವಿಂದನಲ್ಲಿ 8 ರೂ. ಗಳೂ ಇವೆ. ನಮ್ಮ ಮೂರು ಜನಗಳಲ್ಲಿಯೂ ಒಟ್ಟೆಷ್ಟು. ರೂ. ಗಳಿವೆ?

(34) ಈ ಕೂಡುವ ಲೆಕ್ಕಗಳನ್ನು ಮಾಡು:—

[1]

ಸಾ.	ನೂ.	ಹ.	ಒಂ.
4	8	6	5
2	1	3	4

[2]

ಸಾ.	ನೂ.	ಹ.	ಒಂ.
2	1	2	3
4	6	8	6

[3]

3674
4246

[4]

4657
2349

[5]

5432
4567

(35) ಈ ಕಳೆಯುವ ಲೆಕ್ಕಗಳನ್ನು ಮಾಡು:—

[1]

ಸಾ.	ನೂ.	ಹ.	ಒಂ.
4	7	5	6
2	4	3	2

[2]

ಸಾ.	ನೂ.	ಹ.	ಒಂ.
3	6	7	4
2	3	2	3

[3]

4789
2698

[4]

3674
2335

9 ನೆಯ ಅಭ್ಯಾಸ.

ಹತ್ತುಸಾವಿರದಿಂದ ಲಕ್ಷದ ವರೆಗೆ

ಬಲಗಡೆಯಿಂದ **ಐದನೆಯ** ಸ್ಥಾನಕ್ಕೆ **ಹತ್ತುಸಾವಿರದ** ಸ್ಥಾನವೆಂದು ಹೆಸರು. 5 ನೆಯ ಸ್ಥಾನದಲ್ಲಿರುವ ಅಂಕೆಯು ಎಷ್ಟು ಹತ್ತುಸಾವಿರಗಳಿವೆ ಎನ್ನುವುದನ್ನು ತೋರಿಸುತ್ತದೆ.

ಹ. ಸಾ.	ಸಾ.	ನೂ.	ಹ.	ಒಂ.	
5	0	0	0	0	=5 ಹತ್ತು ಸಾವಿರಗಳು =50 ಸಾವಿರಗಳು

ಮಿಕ್ಕ ಸ್ಥಾನಗಳಲ್ಲಿ ಯಾವ ಅಂಕೆಗಳೂ ಇಲ್ಲವೆನ್ನುವುದನ್ನು ಸೊನ್ನೆಗಳು ತೋರಿಸುತ್ತವೆ.

A

ಇವುಗಳನ್ನು ಓದಿಹೇಳು.

(1) 40,000 (3) 70,000 (5) 20,000 (7) 10,000
(2) 60,000 (4) 80,000 (6) 50,000 (8) 30,000

B

ಇವುಗಳನ್ನು ಸಂಖ್ಯೆಗಳಲ್ಲಿ ಬರೆ.

(1) ನಲವತ್ತು ಸಾವಿರ (4) ಅರುವತ್ತು ಸಾವಿರ (7) ಐವತ್ತು ಸಾವಿರ
(2) ಎಂಬತ್ತು ಸಾವಿರ (5) ಹತ್ತು ಸಾವಿರ (8) ಎಪ್ಪತ್ತು ಸಾವಿರ
(3) ಮೂವತ್ತು ಸಾವಿರ (6) ಇಪ್ಪತ್ತು ಸಾವಿರ

C

(1) ಒಂದು ಇಟ್ಟಿಗೆಯ ಗೂಡಿನಲ್ಲಿ ಇಪ್ಪತ್ತು ಸಾವಿರ ಇಟ್ಟಿಗೆಗಳಿವೆ. ಮತ್ತೊಂದರಲ್ಲಿ ಮೂವತ್ತು ಸಾವಿರ ಇಟ್ಟಿಗೆಗಳಿವೆ. ಮೂರನೆಯದರಲ್ಲಿ ಹತ್ತು ಸಾವಿರ ಇಟ್ಟಿಗೆಗಳಿವೆ. ಮೂರು ಗೂಡುಗಳಲ್ಲಿಯೂ ಒಟ್ಟು ಎಷ್ಟು ಇಟ್ಟಿಗೆಗಳಿವೆ?

(2) ನನ್ನಲ್ಲಿ ಮೂವತ್ತು ಸಾವಿರ ರೂ. ಗಳಿವೆ. ಗೋವಿಂದನಲ್ಲಿಯೂ ಅಷ್ಟೇ ಇದೆ. ಭೀಮನಲ್ಲಿಯೂ ಅಷ್ಟೇ ಇದೆ. ನಮ್ಮ 3 ಜನಗಳಲ್ಲಿಯೂ ಎಷ್ಟಿದೆ?

(3) ನನ್ನಲ್ಲಿ ಇಪ್ಪತ್ತು ಸಾವಿರ ರೂ. ಗಳಿವೆ. ನನ್ನಲ್ಲಿರುವ ಹಣದ ಮೂರರಷ್ಟು ರಾಮನಲ್ಲಿದೆ. ಹಾಗಾದರೆ ರಾಮನಲ್ಲೆಷ್ಟಿದೆ? ನಮ್ಮಿಬ್ಬರಲ್ಲಿಯೂ ಎಷ್ಟಿವೆ?

(4) ಒಂದು ಬೆಟ್ಟವು ನಲವತ್ತು ಸಾವಿರ ಅಂಗುಲ ಎತ್ತರವಿದೆ. ಇನ್ನೊಂದುಬೆಟ್ಟವು ಐವತ್ತು ಸಾವಿರ ಅಂಗುಲ ಎತ್ತರವಿದೆ. ಹಾಗಾದರೆ ಮೊದಲನೆಯ ಬೆಟ್ಟಕ್ಕಿಂತ ಎರಡನೆಯ ಬೆಟ್ಟವು ಎಷ್ಟು ಎತ್ತರವಾಗಿದೆ?

(5) ನಾನು ಮನೆಕಟ್ಟುವುದಕ್ಕೆ ಐವತ್ತು ಸಾವಿರ ಇಟ್ಟಿಗೆಗಳನ್ನು ಕೂಡಿ ಹಾಕಿದೇನೆ. ಆದರೆ ಆ ಮನೆಗೆ ಎಪ್ಪತ್ತು ಸಾವಿರ ಇಟ್ಟಿಗೆಗಳು ಬೇಕಾಗುತ್ತವೆ. ಹಾಗಾದರೆ ಇನ್ನೆಷ್ಟು ಸಾವಿರ ಇಟ್ಟಿಗೆಗಳು ಸಾಲವು?

(6) i. 1 ಚೀಲಕ್ಕೆ ಸಾವಿರ ರೂ. ಗಳಂತೆ ತುಂಬಿದರೆ ಹತ್ತು ಸಾವಿರ ರೂ. ಗಳನ್ನು ಎಷ್ಟು ಚೀಲಗಳಲ್ಲಿ ತುಂಬಬಹುದು?

ii. 1 ಸಾ. ರೂ. ಗಳಿಗೆ ನೂರು ರೂ. ಗಳ ನೋಟುಗಳೆಷ್ಟು ಬರುತ್ತವೆ? ಹತ್ತು ಸಾ. ರೂ. ಗಳಿಗೆ ಎಷ್ಟು ಬರುತ್ತವೆ? ಹತ್ತು ರೂ. ಗಳ ನೋಟುಗಳು ಎಷ್ಟು ಬರುತ್ತವೆ?

(7) 17,877 ರಲ್ಲಿ ಎಷ್ಟು ಸಾವಿರಗಳಿವೆ? ಎಷ್ಟು ನೂರುಗಳಿವೆ? ಎಷ್ಟು ಹತ್ತುಗಳಿವೆ?

(8) (A) ಯಲ್ಲಿರುವ ಹತ್ತು ಸಾವಿರಗಳಲ್ಲಿ ಎಷ್ಟು ಸಾವಿರಗಳಿವೆ? ಎಷ್ಟು ನೂರುಗಳಿವೆ? ಎಷ್ಟು ಹತ್ತುಗಳಿವೆ?

(9) ಒಂದು ದಿವಸದಲ್ಲಿ 1000 ಕಬ್ಬುಗಳನ್ನು ಆಲೆ ಆಡಿದರೆ 5000 ಕಬ್ಬುಗಳನ್ನು ಎಷ್ಟು ದಿವಸಗಳಲ್ಲಿ ಆಲೆಯಾಡಬಹುದು?

(10) ಒಬ್ಬ ವರ್ತಕನು 20,000 ಅಕ್ಕಿಯ ಮೂಟೆಗಳನ್ನು ರೈಲು ಮೂಲಕ ಕಳುಹಿಸುತ್ತಾನೆ. ಒಂದೊಂದು ಗಾಡಿಯಲ್ಲಿ 100 ಮೂಟೆಗಳನ್ನು ಹಾಕಿದರೆ ಅವನಿಗೆ ಎಷ್ಟು ಗಾಡಿಗಳು ಬೇಕು?

10 ನೆಯ ಅಭ್ಯಾಸ.

ಇವುಗಳನ್ನು ಸಂಖ್ಯೆಗಳಲ್ಲಿ ಬರೆ, ಮತ್ತು ಹಾಗೆ ಬರೆದುದನ್ನು ಓದಿ ಹೇಳು.

(1) ಹತ್ತು ಸಾವಿರದೆಂಟು
(2) ಹದಿನೆಂಟು ಸಾವಿರ
(3) ಹನ್ನೊಂದು ಸಾವಿರದಿನ್ನೂರು
(4) ಹದಿನೆಂಟು ಸಾವಿರದ ಇನ್ನೂರ ಹತ್ತು
(5) ಹತ್ತೊಂಬತ್ತು ಸಾವಿರದ ಒಂಬೈನೂರ ಇಪ್ಪತ್ತೆಂಟು
(6) ಇಪ್ಪತ್ತು ಸಾವಿರದೇಳು
(7) ಇಪ್ಪತ್ತೊಂದು ಸಾವಿರದ ಮುನ್ನೂರು
(8) ಇಪ್ಪತ್ತೈದು ಸಾವಿರದ ಮುನ್ನೂರೆಂಟು

(9) ಇಪ್ಪತ್ತೇಳುಸಾವಿರದ ಮುನ್ನೂರಿಪ್ಪತ್ತು
(10) ಇಪ್ಪತ್ತೇಳುಸಾವಿರದೆಂಟುನೂರ ತೊಂಬತ್ತೆಂಟು
(11) ಮೂವತ್ತೊಂದುಸಾವಿರದಾರು
(12) ಮೂವತ್ತೆರಡುಸಾವಿರದ ಎಂಟುನೂರು
(13) ಮೂವತ್ತೈದುಸಾವಿರದ ಅರುವತ್ತು
(14) ಮೂವತ್ತೇಳುಸಾವಿರದ ಆರುನೂರ ಐವತ್ತುನಾಲ್ಕು
(15) ನಾಲ್ವತ್ತುಸಾವಿರದ ನಾನೂರನಾಲ್ಕು
(16) ನಾಲ್ವತ್ತೆರಡುಸಾವಿರದ ಐನೂರನಾಲ್ಕು
(17) ನಾಲ್ವತ್ತೈದುಸಾವಿರದ ಆರುನೂರ ಮೂವತ್ತು
(18) ನಾಲ್ವತ್ತೊಂಬತ್ತುಸಾವಿರದ ಏಳುನೂರ ನಾಲ್ವತ್ತೆಂಟು
(19) ಐವತ್ತುಸಾವಿರದ ಹದಿನಾಲ್ಕು
(20) ಐವತ್ತುಸಾವಿರದ ನಾನೂರು
(21) ಐವತ್ತೇಳುಸಾವಿರದ ನಾನೂರನಾಲ್ಕು
(22) ಅರುವತ್ತಾರುಸಾವಿರದ ಮುನ್ನೂರೆಂಟು
(23) ಅರುವತ್ತೊಂಬತ್ತುಸಾವಿರದ ನೂರಹನ್ನೆರಡು
(24) ಎಪ್ಪತ್ತುಸಾವಿರದ ಏಳುನೂರೊಂದು
(25) ಎಪ್ಪತ್ತೊಂಬತ್ತುಸಾವಿರದ ಎಂಟುನೂರ ಅರುವತ್ತು
(26) ಎಂಬತ್ತುಸಾವಿರದ ಮುನ್ನೂರೆಂಟು
(27) ಎಂಬತ್ತೇಳುಸಾವಿರದ ಮುನ್ನೂರ ಐವತ್ತು
(28) ತೊಂಬತ್ತುನಾಲ್ಕುಸಾವಿರದ ಇಪ್ಪತ್ತಾರು
(29) ತೊಂಬತ್ತೆಂಟುಸಾವಿರದ ಐನೂರಇಪ್ಪತ್ತೇಳು

11 ನೆಯ ಅಭ್ಯಾಸ.

ಇವುಗಳನ್ನು ಓದಿಹೇಳು.

(1) 32,145	(8) 70,008	(15) 70,085	(21) 67,891
(2) 41,325	(9) 12,012	(16) 9,001	(22) 19,177
(3) 42,020	(10) 90,101	(17) 87,000	(23) 65,432
(4) 50,150	(11) 30,030	(18) 65,400	(24) 34,318
(5) 63,002	(12) 41,031	(19) 11,111	(25) 78,236
(6) 70,800	(13) 55,055	(20) 21,021	
(7) 99,009	(14) 89,704		

(26) 1811 ರಲ್ಲಿ ಬೆಂಗಳೂರಿಗೆ ಇಂಗ್ಲೀಷರು ತಮ್ಮ ಸೈನ್ಯವನ್ನು ತಂದರು. ಪೇಟೆಯೆಂದೂ ಲಷ್ಕರೆಂದೂ ಬೆಂಗಳೂರು ಎರಡು ಭಾಗವಾಗಿದೆ. ಪೇಟೆಯ ಜನಸಂಖ್ಯೆ 69,473 ಲಷ್ಕರಿನ ಜನಸಂಖ್ಯೆ 89,599.

ಇದರಲ್ಲಿ ಸಂಖ್ಯೆಗಳಿರುವ ಕಡೆಗಳಲ್ಲೆಲ್ಲಾ ಅಕ್ಷರಗಳನ್ನೇ ಉಪಯೋಗಿಸಿ ಬರೆ.

(27) ಈ ಕೂಡುವ ಲೆಕ್ಕಗಳನ್ನು ಮಾಡು:—

ಹ. ಸಾ.	ಸಾ.	ನೂ.	ಹ.	ಒಂ.
5	3	2	4	5
2	4	5	3	4

ಹ. ಸಾ.	ಸಾ.	ನೂ.	ಹ.	ಒಂ.
4	3	2	3	8
4	2	8	6	3

(3)
53,245
43,238

(4)
24,567
42,863

(28) ಈ ಕಳೆಯುವ ಲೆಕ್ಕಗಳನ್ನು ಮಾಡು:—

(1)

ಹ. ಸಾ.	ಸಾ.	ನೂ.	ಹ.	ಒಂ.
7	5	6	4	5
2	4	3	2	3

(2)
58,321
42,212

(29) i. ನನ್ನಲ್ಲಿ 30,020 ರೂ. ಗಳಿವೆ. ಗೋವಿಂದನಲ್ಲೂ ಅಷ್ಟೇ ಇದೆ. ನಮ್ಮಿಬ್ಬರಿಂದ ಒಟ್ಟು ಎಷ್ಟಿದೆ?

ii. ರಾಮನಲ್ಲೂ ಅಷ್ಟೇ ಇದ್ದರೆ ನಮ್ಮ ಮೂರು ಜನರಿಂದ ಒಟ್ಟು ಎಷ್ಟಿದೆ?

(30) i. 50,000 ಕಾಯಿಗಳನ್ನು ಐವತ್ತು ಕರಿಗೆ ಸಮನಾಗಿ ಹಂಚು.

ii. 500 ಕಾಯಿಗಳನ್ನು ಐವತ್ತು ಕರಿಗೆ ಸಮನಾಗಿ ಹಂಚು.

iii. 50,550 ಕಾಯಿಗಳನ್ನು ಐವತ್ತು ಕರಿಗೆ ಸಮನಾಗಿ ಹಂಚು.

ಲಕ್ಷ.

10 ಹತ್ತು ಸಾವಿರಗಳಿಗೆ ಲಕ್ಷವೆಂದು ಹೆಸರು.

ಲಕ್ಷ=10 **ಸಾವಿರಗಳು.**

=100 **ಸಾವಿರಗಳು.**

ಬಲಗಡೆಯಿಂದ 6 ನೆಯ ಸ್ಥಾನವು ಲಕ್ಷ ಸ್ಥಾನವು. 6 ನೆಯ ಸ್ಥಾನದಲ್ಲಿರುವ ಅಂಕವು ಅಷ್ಟು ಲಕ್ಷಗಳನ್ನು ತೋರಿಸುತ್ತದೆ.

7	0	0	0	0	0	=7 ಲಕ್ಷಗಳು.

ಮಿಕ್ಕ ಸ್ಥಾನಗಳಲ್ಲಿ ಯಾವ ಅಂಕಗಳೂ ಇಲ್ಲವೆನ್ನುವುದನ್ನು ಸೊನ್ನೆಗಳು ತೋರಿಸಿರುತ್ತವೆ.

12 ನೆಯ ಅಭ್ಯಾಸ.

A

ಇವುಗಳನ್ನು ಸಂಖ್ಯೆಯಲ್ಲಿ ಬರೆ.

(1) ಒಂಬತ್ತು ಲಕ್ಷ	(3) ಆರು ಲಕ್ಷ	(5) ಎರಡು ಲಕ್ಷ	(7) ಎಂಟು ಲಕ್ಷ
(2) ಏಳು ಲಕ್ಷ	(4) ಮೂರು ಲಕ್ಷ	(6) ಐದು ಲಕ್ಷ	(8) ನಾಲ್ಕು ಲಕ್ಷ

B

ಇವುಗಳನ್ನು ಓದಿ ಹೇಳು.

(1) 7,00,000	(3) 9,00,000	(5) 4,00,000	(7) 2,00,000
(2) 3,00,000	(4) 6,00,000	(6) 5,00,000	(8) 8,00,000

C

(1) ನಾನು ಒಂದು ಸೇತುವೆಯನ್ನು ಕಟ್ಟಿಸುವುದಕ್ಕೆ 3 ಲಕ್ಷ ಕಲ್ಲುಗಳನ್ನು ಕೂಡಿಹಾಕಿದೇನೆ. ಮತ್ತೊಬ್ಬನು ಇನ್ನೊಂದು ಸೇತುವೆಯನ್ನು ಕಟ್ಟಿಸುವುದಕ್ಕೆ 5 ಲಕ್ಷ ಕಲ್ಲುಗಳನ್ನು ಕೂಡಿಹಾಕಿದಾನೆ. ನಾವಿಬ್ಬರೂ ಒಟ್ಟು ಎಷ್ಟು ಕಲ್ಲುಗಳನ್ನು ಕೂಡಿಹಾಕಿದೇವೆ?

(2) 1899 ರಲ್ಲಿ 2 ಲಕ್ಷ, 1900 ರಲ್ಲಿ 3 ಲಕ್ಷ, 1901 ರಲ್ಲಿ 4 ಲಕ್ಷ ತೆಂಗಿನಕಾಯಿಗಳು ವ್ಯಾಪಾರವಾದುವು. ಈ ಮೂರು ವರುಷಗಳಲ್ಲಿ ಒಟ್ಟು ಎಷ್ಟು ತೆಂಗಿನಕಾಯಿಗಳು ವ್ಯಾಪಾರವಾದುವು?

(3) ನಾನು ಜೊಂಬಾಯಿಗೆ ಕಳುಹಿಸುವುದಕ್ಕೆ 9 ಲಕ್ಷ ಗಿಟಕುಗಳನ್ನು ಕೂಡಿಹಾಕಿದೇನೆ. ಅವುಗಳಲ್ಲಿ 2 ಲಕ್ಷ ಕೆಟ್ಟುಹೋದರೆ ಒಳ್ಳೆಯವು ಎಷ್ಟಿವೆ?

(4) ನನ್ನ ಹತ್ತಿರ 4 ಲಕ್ಷ ಇಟ್ಟಿಗೆಗಳಿವೆ. ಅವುಗಳಲ್ಲಿ ಒಬ್ಬನಿಗೆ ಅರ್ಧವನ್ನು ಕೊಟ್ಟು ಅವನಿಂದ 3 ಲಕ್ಷ ಇಟ್ಟಿಗೆಗಳನ್ನು ಬದಲಾಗಿ ತೆಗೆದುಕೊಳ್ಳುತ್ತೇನೆ. ನನ್ನಲ್ಲಿ ಎಷ್ಟು ಇಟ್ಟಿಗೆಗಳಿವೆ?

(5) ಗೋವಿಂದಸೆಟ್ಟಿಯು ತನ್ನಲ್ಲಿದ್ದ 6 ಲಕ್ಷ ಸಣ್ಣ ಕಾಯಿಗಳನ್ನು ರಾಮಸೆಟ್ಟಿಗೆ ಕೊಟ್ಟು ಅವನಿಂದ 4 ಲಕ್ಷ ದೊಡ್ಡ ಕಾಯಿಗಳನ್ನು ತೆಗೆದುಕೊಂಡನು. ಹಾಗಾದರೆ ಗೋವಿಂದಸೆಟ್ಟಿಗೆ ಎಷ್ಟು ಕಾಯಿಗಳು ಕಡಿಮೆ ಬಂದಹಾಗಾಯಿತು ?

(6) 2 ಲಕ್ಷ ಜನಗಳುಳ್ಳ ಪಟ್ಟಣಗಳು ಎರಡಿವೆ. ಒಟ್ಟು ಎಷ್ಟು ಜನಗಳಿದಾರೆ? 3 ಪಟ್ಟಣಗಳಿದ್ದರೆ ಎಷ್ಟು ಜನಗಳು ? 4, 5, 6, 7, 8, 9, 10 ಪಟ್ಟಣಗಳಿದ್ದರೆ ಎಷ್ಟು ಜನಗಳು ?

(7) 3 ಕಾರ್ಖಾನೆಗಳು ಸಮವಾಗಿ ಒಟ್ಟು 9 ಲಕ್ಷ ಬೆಂಕಿ ಪೊಟ್ಟಣಗಳನ್ನು ತಯಾರುಮಾಡಿದರೆ ಪ್ರತಿ ಕಾರ್ಖಾನೆಯೂ ಎಷ್ಟು ಪೊಟ್ಟಣಗಳನ್ನು ತಯಾರುಮಾಡುತ್ತದೆ ?

(8) ಸಮವಾಗಿ ಹಣವುಳ್ಳ 4 ಜನ ಸಾಹುಕಾರರಲ್ಲಿ 8 ಲಕ್ಷ ರೂ. ಗಳಿವೆ. ಹಾಗಾದರೆ ಒಬ್ಬೊಬ್ಬನಲ್ಲಿ ಎಷ್ಟು ರೂ. ಗಳಿವೆ ?

(9) 1 ಲಕ್ಷದಲ್ಲಿ ಎಷ್ಟು ಹತ್ತುಸಾವಿರಗಳಿವೆ ? ಎಷ್ಟು ಸಾವಿರಗಳಿವೆ ? ಎಷ್ಟು ನೂರುಗಳಿವೆ ? ಎಷ್ಟು ಹತ್ತುಗಳಿವೆ ?

(10) 2, 4, 5 ಲಕ್ಷಗಳಲ್ಲಿ ಎಷ್ಟು ಹತ್ತುಸಾವಿರಗಳಿವೆ ? ಎಷ್ಟು ಸಾವಿರಗಳಿವೆ ? ಎಷ್ಟು ನೂರುಗಳಿವೆ ?

13 ನೆಯ ಅಭ್ಯಾಸ.

ಇವುಗಳನ್ನು ಅಂಕೆಗಳಲ್ಲಿ ಬರೆ.

(1) ಎರಡುಲಕ್ಷದ ಇಪ್ಪತ್ತೆರಡು.
(2) ಎರಡುಲಕ್ಷದ ಮುನ್ನೂರ ಇಪ್ಪತ್ತೊಂದು.
(3) ಎರಡುಲಕ್ಷದ ಆರುಸಾವಿರದ ಮುನ್ನೂರ ಎಪ್ಪತ್ತೈದು.
(4) ಎರಡುಲಕ್ಷದ ನಾಲ್ವತ್ತುಸಾವಿರದ ನಾಲ್ವತ್ತು.
(5) ಎರಡುಲಕ್ಷದ ನಾಲ್ವತ್ತಾರುಸಾವಿರದಮುನ್ನೂರಎಪ್ಪತ್ತಾರು
(6) ಎರಡುಲಕ್ಷದ ಇಪ್ಪತ್ತುಸಾವಿರದ ಇನ್ನೂರ ಇಪ್ಪತ್ತುಮೂರು
(7) ಎರಡುಲಕ್ಷದ ನಾಲ್ವತ್ತುಸಾವಿರದ ನಾನೂರ ನಾಲ್ವತ್ತು.
(8) ಮೂರುಲಕ್ಷದ ಮುನ್ನೂರ ಮೂವತ್ತುಮೂರು.
(9) ಮೂರುಲಕ್ಷದ ಎಂಟುಸಾವಿರದ ಐವತ್ತು.
(10) ನಾಲ್ಕುಲಕ್ಷದ ಎರಡುಸಾವಿರದ ಐನೂರ ಇಪ್ಪತ್ತಾರು.

(11) ನಾಲ್ಕುಲಕ್ಷದ ಹದಿನೈದುಸಾವಿರದ ಇಪ್ಪತ್ತೊಂದು.

(12) ನಾಲ್ಕುಲಕ್ಷದ ಮೂವತ್ತೈದುಸಾವಿರದ ನಾಲ್ವತ್ತು.

(13) ನಾಲ್ಕುಲಕ್ಷದ ಮೂವತ್ತೈದುಸಾವಿರದ ನಾನೂರ ನಾಲ್ವತ್ತು.

(14) ನಾಲ್ಕುಲಕ್ಷದ ನಾಲ್ಕುಸಾವಿರದೇಳ್ನೂರ ನಾಲ್ವತ್ತು.

(15) ಐದುಲಕ್ಷದ ನಾಲ್ಕುಸಾವಿರದೈದು.

(16) ಐದುಲಕ್ಷದ ಐವತ್ತುಸಾವಿರದ ನಾಲ್ವತ್ತೆಂಟು.

(17) ಐದುಲಕ್ಷದ ಅರುವತ್ತೆಂಟು ಸಾವಿರದ ನಾನೂರೆಂಟು.

(18) ಆರುಲಕ್ಷದ ನಾಲ್ವತ್ತೊಂದು.

(19) ಆರುಲಕ್ಷದ ಸಾವಿರದ ಹತ್ತು.

(20) ಆರುಲಕ್ಷದ ಐವತ್ತುಸಾವಿರದ ಮುನ್ನೂರಿಪ್ಪತ್ತೊಂದು.

(21) ಏಳುಲಕ್ಷದ ಮೂವತ್ತುಸಾವಿರದೈದು.

(22) ಏಳುಲಕ್ಷದ ಮೂವತ್ತುಸಾವಿರದ ಹದಿನೈದು.

(23) ಏಳುಲಕ್ಷದ ನಾಲ್ವತ್ತುಸಾವಿರದ ಇನ್ನೂರ ಹದಿನೈದು.

(24) ಏಳುಲಕ್ಷದ ಎಂಬತ್ತೆರಡುಸಾವಿರದ ನಾನೂರ ಇಪ್ಪತ್ತೊಂಬತ್ತು.

(25) ಎಂಟುಲಕ್ಷದ ಹದಿನೆಂಟು,

(26) ಎಂಟುಲಕ್ಷದ ಇನ್ನೂರ ಹದಿನೆಂಟು.

(27) ಎಂಟುಲಕ್ಷದ ಇಪ್ಪತ್ತೆರಡುಸಾವಿರದ ಮುನ್ನೂರ ಇಪ್ಪತ್ತೊಂದು.

(28) ಒಂಬತ್ತುಲಕ್ಷದ ನೂರ ಹದಿನೇಳು.

(29) ಒಂಬತ್ತುಲಕ್ಷದ ಐದುಸಾವಿರದ ನೂರ ಹದಿನೇಳು.

(30) ಒಂಬತ್ತುಲಕ್ಷದ ಎಪ್ಪತ್ತೈದುಸಾವಿರದ ಏಳುನೂರ ನಾಲ್ವತ್ತೊಂದು.

14 ನೆಯ ಅಭ್ಯಾಸ.

ಇವುಗಳನ್ನು ಓದಿಹೇಳು.

[1] 1,32,605	[6] 5,15,205	[11] 3,04,810	[16] 6,95,082
[2] 2,07,895	[7] 7,00,077	[12] 9,05,047	[17] 3,21,990
[3] 3,13 077	[8] 8,60,660	[13] 2,01,202	[18] 1,02,034
[4] 4,01,735	[9] 5,51,535	[14] 8,35,210	[19] 9,00,010
[5] 4,42,081	[10] 6,63,600	[15] 8,10,079	[20] 9,08,063

ಮಿಶ್ರೋದಾಹರಣೆಗಳು.

15 ನೆಯ ಅಭ್ಯಾಸ.

A

ಇವುಗಳನ್ನು ಸಂಖ್ಯೆಗಳಲ್ಲಿ ಬರೆ.

(1) ಮುನ್ನೂರ ಹದಿಮೂರು.
(2) ಎಂಟುನೂರಾರು.
(3) ಒಂಬೈನೂರೈವತ್ತು.
(4) ಏಳುನೂರು.
(5) ನಾಲ್ಕುಸಾವಿರದ ಮುನ್ನೂರಿಪ್ಪತ್ತೊಂದು.
(6) ಐದುಸಾವಿರದೆಂಟುನೂರರುವತ್ತು.
(7) ಏಳುಸಾವಿರದ ನಾನೂರೈದು.
(8) ಎಂಟುಸಾವಿರದೆಂಬತ್ತೆಂಟು.
(9) ಒಂಬತ್ತುಸಾವಿರದೊಂಬತ್ತು.
(10) ಆರುಸಾವಿರದಾರುನೂರು.
(11) ಏಳುಸಾವಿರದ ನಾಲ್ವತ್ತು.
(12) ಹನ್ನೊಂದುಸಾವಿರದ ಇನ್ನೂರ ಹದಿನೈದು.
(13) ಎಂಬತ್ತೇಳುಸಾವಿರದ ಆರುನೂರ ಐವತ್ತು.
(14) ತೊಂಬತ್ತೈದುಸಾವಿರದ ನಾನೂರ ಮೂರು.
(15) ಎಪ್ಪತ್ತುನೂರುಸಾವಿರದ ನಾಲ್ವತ್ತೈದು.
(16) ಐದುಲಕ್ಷದ ಹದಿನೆಂಟುಸಾವಿರದ ಮೂವತ್ತೈದು.
(17) ಏಳುಲಕ್ಷದ ಅರುವತ್ತೈದುಸಾವಿರದ ಮುನ್ನೂರ ಹದಿನಾಲ್ಕು
(18) ಎಂಟುಲಕ್ಷದ ಇಪ್ಪತ್ತುಸಾವಿರದ ಅರುವತ್ತೇಳು.
(19) ಒಂಬತ್ತುಲಕ್ಷದ ಹದಿನೇಳು.
(20) ಐದುಲಕ್ಷದ ನಾನೂರೈದು.

B

ಇವುಗಳನ್ನು ಓದಿ ಹೇಳು.

[1] 63	[4] 602	[7] 916	[10] 9011	[13] 55,555
[2] 76	[5] 614	[8] 3,421	[11] 14,414	[14] 1,11,321
[3] 87	[6] 767	[9] 9.705	[12] 90,530	[15] 9,89,298

(16) 12345, 12354, 55454—ಈ ಸಂಖ್ಯೆಗಳಲ್ಲಿರುವ 5 ಗಳ ಬೆಲೆಗಳನ್ನು ಹೇಳು.

(17) 12676 ರೂ. ಗಳಿಗೆ ಸಾವಿರ ರೂ. ಗಳ ನೋಟುಗಳು ಎಷ್ಟು ಬರುತ್ತವೆ? ನೂರು ರೂ. ಗಳ ನೋಟುಗಳು ಎಷ್ಟು ಬರುತ್ತವೆ? ಹತ್ತು ರೂ. ಗಳ ನೋಟುಗಳು ಎಷ್ಟು ಬರುತ್ತವೆ?

(18) 8, 76, 284, 482, 824, 842, 4123—ಈ ಸಂಖ್ಯೆಗಳ ಮುಂದೆ ಒಂದು ಸೊನ್ನೆಯನ್ನು ಹಾಕಿದರೆ ಎಷ್ಟು ಹತ್ತುಗಳು ಆಗುತ್ತವೆ? ಎರಡು ಸೊನ್ನೆಗಳನ್ನು ಹಾಕಿದರೆ ಎಷ್ಟು ನೂರುಗಳು ಆಗುತ್ತವೆ?

(19) ಈ ಕೂಡುವ ಲೆಕ್ಕಗಳನ್ನು ಮಾಡು:—

[1]	[2]	[3]	[4]	[5]
26	153	4,128	54,328	1,23,456
57	268	3,245	27,762	6,54,321

(20) ಈ ಕಳೆಯುವ ಲೆಕ್ಕಗಳನ್ನು ಮಾಡು:—

[1]	[2]	[3]	[4]	[5]
68	158	4,238	76,345	8,34,567
34	29	3,125	31,256	2,12,378

ಎರಡನೆಯ ಅಧ್ಯಾಯ.

ಸಂಕಲನ (ಕೂಡುವುದು).

I ಒಂದಂಕೆಗಳ ಸಂಖ್ಯೆಗಳನ್ನು ಕೂಡುವುದು.

ನನ್ನಲ್ಲಿ 4 ರೂ. ಗಳಿವೆ. ಗೋವಿಂದನಲ್ಲಿ 5, ರಾಮನಲ್ಲಿ 6, ನರಸಿಂಹನಲ್ಲಿ 7 ರೂ ಗಳಿವೆ. ನಮ್ಮ ನಾಲ್ಕು ಜನಗಳಿಂದ ಒಟ್ಟು ಎಷ್ಟು ರೂ. ಗಳಿವೆ?

4 ರೂ.
5 ರೂ.
6 ರೂ.
7 ರೂ.
———
22 ರೂ. ಒಟ್ಟು 22 ರೂ. ಗಳಿವೆ.

ಲೆಕ್ಕವನ್ನು ಮಾಡುವಾಗ 7+6=13, 13+5=18, 18+4=22 ಎಂದು ಹೇಳಬಾರದು ; 7, 13, 18, 22 ಎಂದು ಹೇಳಿಕೊಂಡು ಲೆಕ್ಕವನ್ನು ಮಾಡಿದರೆ ಕಾಲವು ಕೂಡಿಬರುವುದು.

16 ನೆಯ ಅಭ್ಯಾಸ.

(1) ಒಂದಂಗಡಿಗೆ ಹೋಗಿ 9 ರೂ. ಗಳಿಗೆ ಅಕ್ಕಿಯನ್ನೂ, 6 ರೂ. ಗಳಿಗೆ ತುಪ್ಪವನ್ನೂ, 3 ರೂ. ಗಳಿಗೆ ಬೇಳೆಯನ್ನೂ, 5 ರೂ. ಗಳಿಗೆ ಚಿಲ್ಲರೆ ಸಾಮಾನುಗಳನ್ನೂ ಕೊಂಡುಕೊಂಡರೆ, ನನಗೆ ಎಷ್ಟು ವೆಚ್ಚವಾಯಿತು ?

(2) ನನ್ನ ಮನೆಯಲ್ಲಿ ತರಕಾರಿಗೆ ಸೋಮವಾರ 5 ಕಾಸು, ಮಂಗಳವಾರ 7 ಕಾ., ಬುಧವಾರ 6 ಕಾ., ಬೃಹಸ್ಪತಿವಾರ 7 ಕಾ., ಶುಕ್ರವಾರ 8 ಕಾ., ಶನಿವಾರ 6 ಕಾ., ಆದಿತ್ಯವಾರ 8 ಕಾ., ಗಳು ವೆಚ್ಚವಾದುವು; ಹಾಗಾದರೆ ಒಟ್ಟು ಎಷ್ಟು ಕಾಸುಗಳು ವೆಚ್ಚವಾದುವು?

(3) ಒಂದು ಮಡಕೆಯಲ್ಲಿ 3 ಸೇರು, ಮತ್ತೊಂದರಲ್ಲಿ 4 ಸೇರು, ಮೂರನೆಯದರಲ್ಲಿ 6 ಸೇರು, ನಾಲ್ಕನೆಯದರಲ್ಲಿ 5 ಸೇರು, ಐದನೆಯದರಲ್ಲಿ 8 ಸೇರು ಮೊಸರು ಇದೆ. ಈ ಮಡಕೆಗಳಲ್ಲೆಲ್ಲಾ ಒಟ್ಟು ಎಷ್ಟು ಸೇರು ಮೊಸರು ಇದೆ?

(4) ರಾಮನಿಗೆ ಕೆಳಗೆ ಕೊಟ್ಟಿರುವ ಪಟ್ಟಿಯಂತೆ ಒಂದು ವಾರದಲ್ಲಿ ನಂಬರುಗಳು ಬಂದಿವೆ?

	ಗಣಿತ	ಓದುವುದು	ಬರೆವಣಿಗೆ	ಭಾಷೆ
ಸೋಮವಾರ	6	4	3	8
ಮಂಗಳವಾರ	7	5	2	7
ಬುಧವಾರ	5	7	4	6
ಗುರುವಾರ	0	6	3	7
ಶುಕ್ರವಾರ	4	8	4	3
ಶನಿವಾರ	8	0	5	9

ಅವನಿಗೆ ಪ್ರತಿಪಾಠದಲ್ಲೂ ಎಷ್ಟು ನಂಬರುಗಳು ಬಂದಿವೆ? ಪ್ರತಿ ದಿವಸವಲ್ಲೂ ಎಷ್ಟು ಬಂದಿವೆ?

(5) ರಾಮನಲ್ಲೂ ಭೀಮನಲ್ಲೂ ಪ್ರತಿ ಒಬ್ಬನಲ್ಲೂ 9 ಗಜಗಳ ಕಾಗದವಿದೆ. ಗೋವಿಂದನಲ್ಲಿ 6 ಗಜಗಳಿವೆ. ನನ್ನಲ್ಲಿ 5 ಗಜಗಳಿವೆ ಹಾಗಾದರೆ ಒಟ್ಟಿಷ್ಟು ಗಜಗಳ ಕಾಗದವಿದೆ?

(6) 6 ಕಾಸಿಗೆ ಕಿತ್ತಿಳೆ ಹಣ್ಣು, 3 ಕಾಸಿಗೆ ನಿಂಬೆಹಣ್ಣು, 7 ಕಾಸಿಗೆ ಬಾಳೆಯ ಹಣ್ಣು, 9 ಕಾಸಿಗೆ ವೀಳ್ಯದೆಲೆ—ಈ ರೀತಿ ಕೊಂಡುಕೊಳ್ಳಬೇಕಾದರೆ ಎಷ್ಟು ಕಾಸುಗಳು ಬೇಕು?

(7) ಒಬ್ಬ ಹುಡುಗನು ಸೋಮವಾರ 5, ಮಂಗಳವಾರ 6, ಬುಧವಾರ 6, ಬೃಹಸ್ಪತಿವಾರ 7, ಶುಕ್ರವಾರ 7, ಶನಿವಾರ 6, ಕರಡುಗಳನ್ನು ಬರೆದರೆ ಒಟ್ಟಿಷ್ಟು ಕರಡುಗಳನ್ನು ಬರೆದಹಾಗಾಯಿತು?

(8) 9 ರೂ. ಗೆ ಒಂದು ಪಂಚೆ, 8 ರೂ. ಗೆ ಒಂದು ರೇಷ್ಮೆಯ ಚೌಕ, 5 ರೂ. ಗೆ ಒಂದರಂತೆ 4 ಸಣ್ಣ ಪಂಚೆಗಳು, ಇವುಗಳನ್ನು ಕೊಂಡುಕೊಳ್ಳಬೇಕಾದರೆ ಎಷ್ಟು ರೂ. ಗಳು ಬೇಕು?

ಇವುಗಳನ್ನು ಕೂಡು:—

(9) 2 ಆಣೆ, 9 ಆಣೆ, 6 ಆ., 8 ಆ., 4 ಆ.

(10) 4 ರೂ., 4 ರೂ., 8 ರೂ., 8 ರೂ., 7 ರೂ., 7 ರೂ. 6 ರೂ., 6 ರೂ.

(11) 6 ಅಂಗುಲ 2 ಅಂ., 8 ಅಂ., 4 ಅಂ., 5 ಅಂಗುಲಗಳು.

(12) 1 ಶತಕ, 3 ದಶಕ, 4 ಶತಕ, 5 ಒಂದುಗಳು, 6 ದ., 3 ಒಂ.

(13) 1 ಸಾವಿರ, 3 ಸಾ., 2 ಶ, 4 ದ., 5 ಸಾ., 6 ಶ., 5 ದ.

(14) i. 9, 8, 7, 6, 5,

ii. ಈ ಅಂಕೆಗಳನ್ನು ಈ ಕ್ರಮವಲ್ಲದೆ ಬೇರೆ ಕ್ರಮವಾಗಿಯೂ ಕೂಡು. ಉತ್ತರವು ಬದಲಾಯಿಸುವುದೇ ನೋಡು. ಇದರಿಂದ ತಿಳಿಯುವುದೇನು?

(15) 4, 5, 5, 6, 6, 6, 7, 7, 7.

(16) 9, 8, 6, 5, 7, 8, 6, 4.

(17) 1 ರಿಂದ 9 ರ ವರೆಗೆ ಇರುವ ಸಂಖ್ಯೆಗಳನ್ನು ಕೂಡು.

ಇವುಗಳಲ್ಲಿ ಅಡ್ಡಸಾಲು ಸಂಖ್ಯೆಗಳ ಒಟ್ಟೆಷ್ಟು? ಉದ್ದಸಾಲು ಸಂಖ್ಯೆಗಳ ಒಟ್ಟೆಷ್ಟು? ಮೂಲೆಸಂಖ್ಯೆಗಳ ಒಟ್ಟೆಷ್ಟು?

(18) i

6	1	8
7	5	3
2	9	4

ii

5	3	7
7	5	3
3	7	5

(19)

2	1	3	5	4
3	5	4	2	1
4	2	1	3	5
1	3	5	4	2
5	4	2	1	3

(20)

4	2	3	1	5	6	7
7	4	5	6	3	2	1
1	2	4	3	5	6	7
7	6	5	4	3	2	1
1	2	3	5	4	6	7
7	6	5	2	3	4	1
1	6	3	7	5	2	4

II ಎರಡಂಕೆಗಳುಳ್ಳ ಸಂಖ್ಯೆಗಳನ್ನು ಕೂಡುವುದು.

ನನ್ನ ಮುಂದೆ 4 ಗುಡ್ಡೆ ರೂಪಾಯಿಗಳಿವೆ. ಒಂದನೆಯ ಗುಡ್ಡೆಯಲ್ಲಿ 25 ರೂ., ಎರಡನೆಯ ಗುಡ್ಡೆಯಲ್ಲಿ 32 ರೂ., ಮೂರನೆಯ ಗುಡ್ಡೆಯಲ್ಲಿ 43 ರೂ., ನಾಲ್ಕನೆಯ ಗುಡ್ಡೆಯಲ್ಲಿ 18 ರೂಪಾಯಿಗಳಿವೆ. ಒಟ್ಟಿಷ್ಟು ರೂ. ಗಳಿವೆ ?

	ಹ.	ಒಂ.		
1 ನೆಯ ಗುಡ್ಡೆ	2	5	ರೂ.,	8+3+2+5 ಒಂ=18 ಒಂ.
2 ನೆಯ ,,	3	2	ರೂ.,	=1 ಹ. 8 ಒಂ.
3 ನೆಯ ,,	4	3	ರೂ.,	1+1+4+3+2 ಹ =11 ಹ.
4 ನೆಯ ,,	1	8	ರೂ.,	=1 ನೂ. 1 ಹ.
ಒಟ್ಟು	11	8	ರೂ.,	

17 ನೆಯ ಅಭ್ಯಾಸ.

(1) ರಾಮನಲ್ಲಿ 19 ಬಳಪಗಳಿವೆ. ಭೀಮನಲ್ಲಿ 29 ಬಳಪಗಳಿವೆ. ಅವರಿಬ್ಬರಿಂದ ಒಟ್ಟಿಷ್ಟು ಬಳಪಗಳಿವೆ ?

(2) ನನಗೆ 25 ರೂಪಾಯಿಗಳು, ನನ್ನ ಒಬ್ಬ ತಮ್ಮನಿಗೆ 15 ರೂ. ಮತ್ತೊಬ್ಬ ತಮ್ಮನಿಗೆ 43 ರೂ. ಗಳು ಸಂಬಳವಾದರೆ ನಾವು ಮೂವರೂ ಎಷ್ಟು ರೂ. ಗಳನ್ನು ಸಂಪಾದಿಸುತ್ತೇವೆ ?

(3) ಒಂದು ಸ್ಕೂಲಿನಲ್ಲಿ ಒಂದನೆಯ ತರಗತಿಯಲ್ಲಿ 25, ಎರಡನೆಯ ತರಗತಿಯಲ್ಲಿ 23, ಮೂರನೆಯ ತರಗತಿಯಲ್ಲಿ 18, ನಾಲ್ಕನೆಯ ತರಗತಿಯಲ್ಲಿ 12, ಐದನೆಯ ತರಗತಿಯಲ್ಲಿ 7 ಹುಡುಗರಿದಾರೆ. ಹಾಗಾದರೆ ಸ್ಕೂಲಿನಲ್ಲಿ ಒಟ್ಟಿಷ್ಟು ಹುಡುಗರಿದಾರೆ ?

(4) ಐದು ಮಂದಿ ಹುಡುಗರು ಒಂದು ಮಾವಿನ ಮರಕ್ಕೆ ಹತ್ತಿ ಮೊದಲನೆಯವನು 23, ಎರಡನೆಯವನು 31, ಮೂರನೆಯವನು 47, ನಾಲ್ಕನೆಯವನು 25, ಐದನೆಯವನು 15, ಮಾವಿನ ಕಾಯಿಗಳನ್ನು ಕೊಯ್ದರು. ಒಟ್ಟಿಷ್ಟು ಕಾಯಿಗಳನ್ನು ಕೊಯ್ದರು ?

(5) ರಾಮನಲ್ಲಿ 15, ರಾಜನಲ್ಲಿ 18, ಗೋವಿಂದನಲ್ಲಿ 25, ಭೀಮನಲ್ಲಿ 31, ಕೃಷ್ಣನಲ್ಲಿ 22, ಚಿತ್ರಪಟಗಳು ಇವೆ. ಹಾಗಾದರೆ ಒಟ್ಟಿಷ್ಟು ಚಿತ್ರಪಟಗಳಿವೆ ?

(6) ಜನುವರಿ ತಿಂಗಳಲ್ಲಿ 31, ಫೆಬ್ರುವರಿಯಲ್ಲಿ 28, ಮಾರ್ಚಿಯಲ್ಲಿ 31, ಏಪ್ರಿಲ್‌ನಲ್ಲಿ 30, ಮೇಯಲ್ಲಿ 31, ಜೂನ್‌ನಲ್ಲಿ 30 ದಿವಸಗಳಿದ್ದರೆ ಈ 6 ತಿಂಗಳುಗಳಲ್ಲಿ ಒಟ್ಟಿಷ್ಟು ದಿವಸಗಳಿವೆ ?

ಗೋವಿಂದನಿಗೆ ಒಂದು ವಾರದಲ್ಲಿ ಬಂದ ನಂಬರುಗಳನ್ನು ಕೆಳಗೆ ಕೊಟ್ಟಿದೆ.

	ಭಾಷೆ	ಗಣಿತ	ಚರಿತ್ರೆ	ಭೂಗೋಳ
ಸೋಮವಾರ	15	18	19	13
ಮಂಗಳವಾರ	16	19	13	14
ಬುಧವಾರ	16	13	15	12
ಬೃಹಸ್ಪತಿವಾರ	14	15	18	13
ಶುಕ್ರವಾರ	12	17	17	14
ಶನಿವಾರ	15	19	12	16

i. ಪ್ರತಿ ಒಂದು ಪಾಠದಲ್ಲೂ ಒಟ್ಟಿಷ್ಟು ನಂಬರುಗಳು ಬಂದಿವೆ ?

ii. ಪ್ರತಿ ಒಂದು ದಿನವೂ ಎಷ್ಟು ನಂಬರುಗಳು ಬಂದಿವೆ ?

iii. ಆ ವಾರದಲ್ಲಿ ಒಟ್ಟಿಷ್ಟು ನಂಬರುಗಳು ಬಂದಿವೆ ?

ಎರಡು ರೀತಿಯಾಗಿ ಕಂಡು ಹಿಡಿ.

(8) ನಾನು ಮಾವಿನ ಹಣ್ಣುಗಳನ್ನು ತೆಗೆದುಕೊಂಡು ಬಂದು ನನ್ನ ತಂದೆಗೆ 60, ತಾಯಿಗೆ 53, ದೊಡ್ಡ ಮಗನಿಗೆ 37, ಚಿಕ್ಕಮಗನಿಗೆ 32 ಹಣ್ಣುಗಳನ್ನು ಕೊಟ್ಟಮೇಲೆ ನನ್ನಲ್ಲಿ 22 ಹಣ್ಣುಗಳು ಉಳಿದುವು. ನಾನು ಒಟ್ಟಿಷ್ಟು ಹಣ್ಣುಗಳನ್ನು ತಂದೆನು ?

ಇವುಗಳನ್ನು ಕೂಡು :—

(9) 10 ಆಣೆ, 20 ಆ., 30 ಆ., 70 ಆಣೆಗಳು.

(10) 28 ರೂಪಾಯಿಗಳು, 37 ರೂ., 8 ಆಣೆಗಳು, 45 ರೂ., 4 ಆ., 56 ರೂ.

(11) 43 ಕಾಸುಗಳು, 31, ಕಾ., 15 ರೂ., 7 ಕಾ., 91 ಕಾ., 20 ರೂ., 9 ಕಾ.

(12) 27 ಅಂಗುಲ, 30 ಅಂ., 2 ಅಂ., 18 ಅಂ., 45 ಅಂ.

(13) 48 ನ್ನು 5 ಸಲ ಕೂಡು.

(14) i. 54, 20, 7, 38, 49, 92.

ii. ಈ ಕ್ರಮವಲ್ಲದೆ ಬೇರೆ ಕ್ರಮವಾಗಿ ಸಂಖ್ಯೆಗಳನ್ನು ತೆಗೆದುಕೊಂಡು ಕೂಡು.

(15) 61+62+63+64+65+66 ಎಷ್ಟು ?

(16) 80+79+78+77+76+75+74 ಎಷ್ಟು ?

(17) 13+15+17+19+21+23+25 ಎಷ್ಟು ?

ಇವುಗಳಲ್ಲಿ ಅಡ್ಡ ಸಾಲು ಸಂಖ್ಯೆಗಳ ಮೊತ್ತವೆಷ್ಟು ? ಉದ್ದ ಸಾಲು ಸಂಖ್ಯೆಗಳ ಮೊತ್ತವೆಷ್ಟು ? ಮೂಲೆ ಸಂಖ್ಯೆಗಳ ಮೊತ್ತವೆಷ್ಟು ?

(18)

1	16	11	6
13	4	7	10
8	9	14	3
12	5	2	15

(19)

17	24	1	8	15
23	5	7	14	16
4	6	13	20	22
10	12	19	21	3
11	18	25	2	9

(20)

11	27	36	45	54	63	2
33	42	51	67	6	5	24
55	64	3	12	21	37	46
7	16	25	34	43	52	61
22	33	47	56	65	4	13
44	53	62	1	17	26	35
66	5	14	23	32	41	57

III ಮೂರು ಅಂಕೆಗಳುಳ್ಳ ಸಂಖ್ಯೆಗಳನ್ನು ಕೂಡುವುದು.

18 ನೆಯ ಅಭ್ಯಾಸ.

(1) ಒಂದು ಹೊಗೆಬಂಡಿಯಲ್ಲಿ ಮೊದಲನೆಯ ತರಗತಿಯಲ್ಲಿ 27 ಎರಡನೆಯ ತರಗತಿಯಲ್ಲಿ 91, ಮೂರನೆಯ ತರಗತಿಯಲ್ಲಿ 259 ಜನಗಳು ಪ್ರಯಾಣಮಾಡಿದರು. ಹಾಗಾದರೆ ಒಟ್ಟೆಷ್ಟು ಜನಗಳು ಪ್ರಯಾಣ ಮಾಡಿದರು ?

(2) ಒಬ್ಬನು ಒಂದು ಹಸುವನ್ನು 57 ರೂಪಾಯಿಗಳಿಗೂ ಎರಡೆತ್ತುಗಳನ್ನು 123 ರೂ. ಗಳಿಗೂ, ಒಂದೆಮ್ಮೆಯನ್ನು 47 ರೂ. ಗಳಿಗೂ ಕೊಂಡುಕೊಂಡನು. ಹಾಗಾದರೆ ಅವನೆಷ್ಟು ರೂ. ಗಳನ್ನು ಕೊಟ್ಟನು?

(3) ಜನುವರಿ 131 ರೂ.,
ಫೆಬ್ರುವರಿ 129 ರೂ.,
ಮಾರ್ಚಿ 137 ರೂ.,
ಏಪ್ರಿಲ್ 107 ರೂ.,

ಮೇಲೆ ಕೊಟ್ಟಿರುವ ಪಟ್ಟಿಯಂತೆ 4 ತಿಂಗಳುಗಳಲ್ಲಿ ವೆಚ್ಚವಾಯಿತು ಹಾಗಾದರೆ ಒಟ್ಟು ಎಷ್ಟು ರೂ. ಗಳು ವೆಚ್ಚವಾದುವು ?

(4) ಒಬ್ಬ ವರ್ತಕನ ಲೆಕ್ಕದ ಪುಸ್ತಕದಲ್ಲಿ ಈರೀತಿ ಇದೆ.

ಅಕ್ಕಿಗೆ	192	ರೂ.,
ಬೇಳೆ	66	ರೂ.,
ಉದ್ದು	36	ರೂ.,
ತುಪ್ಪ	72	ರೂ.,
ಹೆಸರು	35	ರೂ.,

ಒಟ್ಟು ಎಷ್ಟು ರೂ. ಗಳಾದುವು ?

(5) ನನ್ನಲ್ಲಿ 5 ಪೊಟ್ಟಣಗಳಿವೆ. ಮೊದಲನೆಯದರಲ್ಲಿ 75, ಎರಡನೆಯದರಲ್ಲಿ 125, ಮೂರನೆಯದರಲ್ಲಿ 144 ನಾಲ್ಕನೆಯದರಲ್ಲಿ 108, ಐದನೆಯದರಲ್ಲಿ 130, ಬಿತ್ತಗಳಿವೆ. ಈ ಐದು ಪೊಟ್ಟಣಗಳಿಂದ ಎಷ್ಟು ಬಿತ್ತಗಳಿವೆ ?

(6) ಒಂದು ಅಂಚೆಕಚೇರಿಯಲ್ಲಿ ಸೋಮವಾರ 372, ಮಂಗಳವಾರ 175, ಬುಧವಾರ 118, ಬೃಹಸ್ಪತಿವಾರ 102, ಶುಕ್ರವಾರ 76, ಶನಿವಾರ 205 ತಲೆಚೀಟಿಗಳು ವೆಚ್ಚವಾದುವು. ಹಾಗಾದರೆ ಆ ವಾರದಲ್ಲಿ ಒಟ್ಟು ಎಷ್ಟು ಸ್ಟಾಂಪುಗಳು ವೆಚ್ಚವಾದುವು ?

(7) ಒಬ್ಬನಲ್ಲಿ 275, ಇನ್ನೊಬ್ಬನಲ್ಲಿ 208, ಮತ್ತೊಬ್ಬನಲ್ಲಿ 319 ಇನ್ನೊಬ್ಬನಲ್ಲಿ 196 ಕುರಿಗಳಿವೆ: ಈ ನಾಲ್ಕು ಜನಗಳಿಂದ ಒಟ್ಟೆಷ್ಟು ಕುರಿಗಳಿವೆ ?

(8)

ಮೈಸೂರು—ಅರಸೀಕೆರೆ ರೈಲ್ವೆ	106	ಮೈಲಿಗಳು
ಬೆಂಗಳೂರು—ಚಿಕ್ಕಬಳ್ಳಾಪುರ ರೈಲ್ವೆ	40	,,
ಬೌರಿಂಗ್‌ಪೇಟೆ—ಕೋಲಾರ್ ರೈಲ್ವೆ	11	,,
ಕೋಲಾರ್—ಚಿಕ್ಕಬಳ್ಳಾಪುರ ರೈಲ್ವೆ	53	,,

ಒಟ್ಟು ಎಷ್ಟು ಮೈಲಿಗಳಾದುವು ?

ಇವುಗಳನ್ನು ಕೂಡು—

(9) 124, 897, 349, 8, 713, 99,

(10) 141, 519, 179, 878, 117,

(11) 103, 214, 344, 97 9,

(12) 491, 199, 16, 5, 983, 112.

(13) 797, 989, 891, 198, 210, 53.

(14) 957, 754, 574, 71, 99, 852, 258.

(15) 352, 523, 235, 617, 716, 671.

IV ನಾಲ್ಕು ಅಂಕೆಗಳುಳ್ಳ ಸಂಖ್ಯೆಗಳನ್ನು ಕೂಡುವಪು.

19 ನೆಯ ಅಭ್ಯಾಸ.

(1) ರಾಮಶೆಟ್ಟಿಯು ಕೆಳಗೆ ಕೊಟ್ಟಿರುವ ಪಟ್ಟಿಯಂತೆ ಸಾಲವನ್ನು ಕೊಟ್ಟರೆ ಎಷ್ಟು ರೂಪಾಯಿಗಳನ್ನು ಸಾಲ ಕೊಟ್ಟ ಹಾಗಾಯಿತು ?

ಗೋವಿಂದಗೌಡನಿಗೆ	1250 ರೂ.
ತಿಮ್ಮೇಗೌಡನಿಗೆ	1750 ರೂ.
ಕೃಷ್ಣಭಟ್ಟನಿಗೆ	2560 ರೂ.

(2) ನನಗೆ 4 ಮನೆಗಳಿವೆ. ಮೊದಲನೆಯ ಮನೆಯ ಬೆಲೆ 1250 ರೂ., ಎರಡನೆಯ ಮನೆಯ ಬೆಲೆ 2575 ರೂ., ಮೂರನೆಯ ಮನೆಯ ಬೆಲೆ 750 ರೂ., ನಾಲ್ಕನೆಯ ಮನೆಯ ಬೆಲೆ 1500 ರೂಪಾಯಿಗಳಾದರೆ ಆ ಮನೆಗಳ ಒಟ್ಟು ಬೆಲೆ ಎಷ್ಟು ?

(3) ಒಬ್ಬನಿಗೆ ನಾಲ್ಕು ಜನ ಗಂಡು ಮಕ್ಕಳೂ, ಮೂರು ಜನ ಹೆಣ್ಣು ಮಕ್ಕಳೂ ಇದ್ದಾರೆ. ಅವನು ಒಬ್ಬೊಬ್ಬ ಮಗನಿಗೆ 2250 ರೂ. ಗಳನ್ನೂ, ಒಬ್ಬೊಬ್ಬ ಮಗಳಿಗೆ 1575 ರೂ. ಗಳನ್ನೂ ಕೊಟ್ಟನು. ಅವನು ಒಟ್ಟು ಎಷ್ಟು ರೂ. ಗಳನ್ನು ಕೊಟ್ಟನು ?

(4) ನನಗೆ 5 ಮಾವಿನ ತೋಟಗಳಿವೆ. ಮೊದಲನೆಯ ತೋಟದಲ್ಲಿ 2500, ಎರಡನೆಯ ತೋಟದಲ್ಲಿ 1575, ಮೂರನೆಯ ತೋಟದಲ್ಲಿ 750, ನಾಲ್ಕನೆಯ ತೋಟದಲ್ಲಿ 125, ಐದನೆಯ ತೋಟದಲ್ಲಿ 1315 ಮಾವಿನ ಹಣ್ಣುಗಳು ಸಿಕ್ಕಿದುವು. ಈ ಐದು ತೋಟಗಳಿಂದ ಒಟ್ಟೆಷ್ಟು ಹಣ್ಣುಗಳು ಸಿಕ್ಕಿದುವು ?

(5) ಒಬ್ಬ ವರ್ತಕನು 1840 ರೂ. ಗಳ ಅಕ್ಕಿ, 758 ರೂ. ಗಳ ಬೇಳೆ, 475 ರೂ. ಗಳ ಬೆಲ್ಲ, 135 ರೂ. ಗಳ ಎಳ್ಳನ್ನು ರೈಲು ಮೂಲಕ ಕಳುಹಿಸುತ್ತಾನೆ. ಒಟ್ಟೆಷ್ಟು ರೂ. ಗಳ ಸರಕುಗಳನ್ನು ಕಳುಹಿಸಿದ ಹಾಗಾಯಿತು ?

(6) ಮೈಸೂರು ಡಿಸ್ಟ್ರಿಕ್ಟಿನ ವಿಸ್ತಾರ 5007 ; ತುಮಕೂರಿನದು 4093, ಚಿತ್ರದುರ್ಗದ್ದು 3994, ಶಿವಮೊಗ್ಗೆಯದು 3986, ಕೋಲಾರದ್ದು

3059, ಕಡೂರಿನದು 2635, ಹಾಸನದ್ದು 2603, ಬೆಂಗಳೂರಿನದು 2559 ಚದರಮೈಲಿಗಳಾದರೆ, ಮೈಸೂರು ಸೀಮೆಯ ವಿಸ್ತಾರವೆಷ್ಟು ?

ಇವುಗಳನ್ನು ಕೂಡು:—

(7) 1838, 133, 3182, 8, 2323.

(8) 2887, 1382, 18, 77, 237, 2.

(9) 2867, 937, 1432, 192, 2442.

(10) 3412, 3906, 4401, 4896, 5390.

(11) 4912, 9863, 1481, 1976, 2476.

(12) 9412, 7487, 6492, 5497, 5073.

V ಐದು ಅಂಕೆಗಳುಳ್ಳ ಸಂಖ್ಯೆಗಳನ್ನು ಕೂಡುವುದು.

20 ನೆಯ ಅಭ್ಯಾಸ.

(1) ಒಬ್ಬನು ಸಾಯುವಾಗ ತನ್ನ ಹೆಂಡತಿಗೆ 10,500 ರೂಪಾಯಿಗಳನ್ನೂ, ತನ್ನ ದೊಡ್ಡ ಮಗನಿಗೆ 40,320 ರೂ. ಗಳನ್ನೂ, ಮಿಕ್ಕ ಮಕ್ಕಳಿಗೆ 87,540 ರೂ. ಗಳನ್ನೂ ಕೊಟ್ಟನು. ಅವನು ಒಟ್ಟು ಎಷ್ಟು ರೂ. ಗಳನ್ನು ಕೊಟ್ಟ ಹಾಗಾಯಿತು ?

(2) ತೋಟದಿಂದ 3785 ರೂ. ಗಳೂ, ಗದ್ದೆಯಿಂದ 17,963 ರೂ. ಗಳೂ, ಸ್ವಂತ ಸಂಪಾದನೆಯಿಂದ 4700 ರೂ. ಗಳೂ ವರ್ಷಕ್ಕೆ ಬಂದರೆ, ಒಟ್ಟು ಎಷ್ಟು ಬಂದ ಹಾಗಾಯಿತು ?

(3) ಒಂದು ಸೈನ್ಯದಲ್ಲಿ 60,000 ಕಾಲಾಳುಗಳೂ, 15,000 ಕುದುರೆ ಸವಾರರೂ ಇದಾರೆ. ಮತ್ತೊಂದು ಸೈನ್ಯದಲ್ಲಿ 29,800 ಕಾಲಾಳುಗಳೂ, 17,320 ಕುದುರೆ ಸವಾರರೂ ಇದಾರೆ. ಇವೆರಡು ಸೈನ್ಯಗಳಿಂದ ಒಟ್ಟು ಎಷ್ಟು ಕಾಲಾಳುಗಳು ? ಒಟ್ಟು ಎಷ್ಟು ಕುದುರೆ ಸವಾರರು ? ಕಾಲಾಳುಗಳೂ, ಕುದುರೆ ಸವಾರರೂ ಎಲ್ಲರೂ ಸೇರಿ ಎಷ್ಟು ಮಂದಿಯಿರುವರು ?

(4) ಒಂದು ಕಾಫಿ ತೋಟದಲ್ಲಿ 5 ವರುಷಗಳಿಂದ ಸಂಪಾದನೆಯಾದುದನ್ನೂ ಮತ್ತು ವೆಚ್ಚವಾದುದನ್ನೂ ಕೆಳಗಿನ ಪಟ್ಟಿಯು ತೋರಿಸುತ್ತದೆ. ಒಟ್ಟು ಎಷ್ಟು ಸಂಪಾದನೆಯಾಯಿತು ? ಎಷ್ಟು ವೆಚ್ಚವಾಯಿತು ?

	ಸಂಪಾದನೆ.	ವೆಚ್ಚ.
1900 ರಲ್ಲಿ	12,375 ರೂ.	7,685 ರೂ.
1901 ,,	13,480 ರೂ.	12,365 ರೂ.
1902 ,,	11,395 ರೂ.	14,695 ರೂ.
1903 ,,	5,698 ರೂ.	10,000 ರೂ.
1904 ,,	15,400 ರೂ.	12,750 ರೂ.

(5) ಮೈಸೂರಿನಲ್ಲಿ 68,000, ಕೋಲಾರದಲ್ಲಿ 12,210, ತುಮಕೂರಿನಲ್ಲಿ 12,000 ಹಾಸನದಲ್ಲಿ 8,250, ಚಿಕ್ಕಮಗಳೂರಿನಲ್ಲಿ 9,500, ಶಿವಮೊಗ್ಗೆಯಲ್ಲಿ 6,250, ಚಿತ್ರದುರ್ಗದಲ್ಲಿ 5,792, ಬೆಂಗಳೂರಿನಲ್ಲಿ 69,500 ಜನಗಳಿದಾರೆ ಈ 8 ಊರುಗಳಿಂದ ಒಟ್ಟು ಎಷ್ಟು ಜನಗಳಿದಾರೆ?

(6) ಒಂದು ಊರಿನಲ್ಲಿರುವ ಜನರಲ್ಲಿ ಬ್ರಾಹ್ಮಣರು 422, ಕ್ಷತ್ರಿಯರು 94, ವೈಶ್ಯರು 7, ಲಿಂಗಾಯಿತರು 1570, ಇತರ ಜಾತಿಯವರು 21,326, ಮಂದಿ ಇದ್ದರೆ ಒಟ್ಟು ಎಷ್ಟು ಜನರಿದಾರೆ?

ಇವುಗಳನ್ನು ಕೂಡು :—

(7) 13,202, 73,291, 83,379, 14,368.

(8) 9,152, 15,440, 634, 42, 14,525.

(9) 45 667, 5,577, 5, 753, 58.

(10) 94,837, 61 616, 83,838, 28,383.

(11) 12,849, 2,937, 31,016, 314.

(12) 12,301, 77,331, 20,202, 11,771, 10,701.

ಮಿಶ್ರೋದಾಹರಣೆಗಳು.

21 ನೆಯ ಅಭ್ಯಾಸ.

A

ಇವುಗಳನ್ನು ಕೂಡು :—

(1) ಎಪ್ಪತ್ತಾರು, ಎಂಬತ್ತೇಳು, ತೊಂಬತ್ತೊಂಬತ್ತು, ಮೂರು, ನಾಲ್ವತ್ತೈದು.

(2) ಎಂಟು, ತೊಂಬತ್ತೇಳು, ಎಂಟುನೂರಿಪತ್ತುನಾಲ್ಕು, ಒಂಬೈನೂರೆಂಬತ್ತಾರು.

(3) ನೂರೊಂದು, ಎಂಬತ್ತೆಂಟು, ಎಂಟುನೂರೆಂಬತ್ತೆಂಟು, ಎಂಟುಸಾವಿರದೆಂಟು, ನೂರೆಂಬತ್ತೆಂಟು.

(4) ಇನ್ನೂರೊಂದು, ಐನೂರಿಪ್ಪತ್ತು, ಐನೂರೆರಡು, ಐದುಸಾವಿರದಿನ್ನೂರೊಂದು, ಇಪ್ಪತ್ತುಸಾವಿರದ ಐವತ್ತುಮೂರು.

(5) ಹತ್ತುಸಾವಿರದೊಂದು, ಇಪ್ಪತ್ತೆರಡುಸಾವಿರದೆರಡು, ಒಂಬತ್ತು, ಸಾವಿರದೆರಡು.

(6) ಐವತ್ತು ನಾಲ್ಕುಸಾವಿರದೊಂಬೈನೂರರುವತ್ತೊಂದು, ಹನ್ನೊಂದುಸಾವಿರದ ನೂರಮೂವತ್ತೆರಡು, ಏಳು, ನಾನೂರೊಂಬತ್ತು, ನಾಲ್ಕುಸಾವಿರದ ತೊಂಬತ್ತೊಂಬತ್ತು, ಎಂಬತ್ತೆಂಟು, ಆರುಸಾವಿರದ ಮೂರು.

(7) ಐನೂರೊಂದು, ಆರುನೂರಮೂರು, ಐನೂರ ಹನ್ನೆರಡು, ಏಳುಸಾವಿರದಿನ್ನೂರೊಂದು, ಆರುನೂರ ಮೂವತ್ತಾರು, ಮೂರುಸಾವಿರದ ನಾನೂರ ಹನ್ನೆರಡು.

(8) ಐದುಸಾವಿರದೊಂಬೈನೂರೆಂಬತ್ತೇಳು, ನೂರಿಪ್ಪತ್ತೊಂದು, ಏಳುನೂರಮೂವತ್ತಾರು, ನಾಲ್ವತ್ತೇಳು, ಮೂರುಸಾವಿರದಿನ್ನೂರು, ಆರು.

(9) ಇಪ್ಪತ್ತುಸಾವಿರದಿಪ್ಪತ್ತು, ನಾಲ್ಕುಸಾವಿರದೊಂಬತ್ತು, ಒಂಬೈನೂರಾರು, ತೊಂಬತ್ತುನಾಲ್ಕು, ಒಂಬತ್ತು, ಮೂವತ್ತೆಂಟು ಸಾವಿರದೇಳು, ನೂರಾರು.

(10) ಒಂದುಲಕ್ಷದನಾಲ್ಕು, ಮೂವತ್ತೆರಡುಸಾವಿರದೇಳು, ನಾಲ್ಕುಸಾವಿರದೆಂಟು, ಏಳುನೂರ ನಾಲ್ವತ್ತೈದು, ಹನ್ನೆರಡು, ಎಂಟುಸಾವಿರದೇಳುನೂರ ಹದಿನೇಳು.

B

(1) ಒಂದು ನಾಟಕವನ್ನು ನೋಡಲು 219 ಜನ ಗಂಡಸರೂ, 37 ಜನ ಹೆಂಗಸರೂ, 65 ಹುಡುಗರೂ ಸೇರಿದ್ದರು. ಒಟ್ಟಿಗೆಷ್ಟು ಜನಗಳು ಬಂದಿದ್ದರು ?

(2) ಒಂದು ಪಾಠಶಾಲೆಯಲ್ಲಿ 5 ತರಗತಿಗಳಿವೆ. ಮೊದಲನೆಯ ತರಗತಿಯಲ್ಲಿ 50 ರೂ. ಗಳು, ಎರಡನೆಯ ತರಗತಿಯಲ್ಲಿ 57 ರೂ. ಗಳು, ಮೂರನೆಯ ತರಗತಿಯಲ್ಲಿ 65 ರೂ. ಗಳು, ನಾಲ್ಕನೆಯ ತರಗತಿಯಲ್ಲಿ

44 ರೂ. ಗಳು, ಐದನೆಯ ತರಗತಿಯಲ್ಲಿ 60 ರೂ. ಗಳು ಉತ್ಪನ್ನವಾಗುತ್ತವೆ. ಹಾಗಾದರೆ ಒಟ್ಟು ಎಷ್ಟು ರೂ. ಗಳು ಉತ್ಪನ್ನವಾಗುತ್ತವೆ,

(3) ಒಂದು ಪಾಠಶಾಲೆಯಲ್ಲಿ ಒಂದನೆಯ ತರಗತಿಯಲ್ಲಿ 39. ಎರಡನೆಯದರಲ್ಲಿ 27, ಮೂರನೆಯದರಲ್ಲಿ 25, ನಾಲ್ಕನೆಯದರಲ್ಲಿ 20, ಐದನೆಯದರಲ್ಲಿ 25 ವಿದ್ಯಾರ್ಥಿಗಳಿದಾರೆ. ಹಾಗಾದರೆ ಪಾಠಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳಿದಾರೆ ?

(4) ನವರಾತ್ರಿಯ ಹಬ್ಬದಲ್ಲಿ ಜವಳಿ ಅಂಗಡಿಯ ವರ್ತಕನೊಬ್ಬನಿಗೆ 315 ರೂ. ಗಳ ಜವಳಿವ್ಯಾಪಾರವಾಯಿತು. ಮತ್ತೊಬ್ಬನಿಗೆ 412 ರೂ., ಮೂರನೆಯವನಿಗೆ 150 ರೂ., ನಾಲ್ಕನೆಯವನಿಗೆ 297 ರೂ., ಐದನೆಯವನಿಗೆ 243 ರೂ. ಗಳ ಜವಳಿವ್ಯಾಪಾರವಾಯಿತು. ಒಟ್ಟಿಷ್ಟು ರೂ. ಗಳ ಜವಳಿವ್ಯಾಪಾರವಾಯಿತು ?

(5) ಒಂದು ಪೆಟ್ಟಿಗೆಯಲ್ಲಿ 101, ಇನ್ನೊಂದರಲ್ಲಿ 103, ಮೂರನೆಯದರಲ್ಲಿ 105, ನಾಲ್ಕನೆಯದರಲ್ಲಿ 99, ಐದನೆಯದರಲ್ಲಿ 144 ಬಳಪಗಳಿವೆ. ಒಟ್ಟು ಎಷ್ಟು ಬಳಪಗಳಿವೆ ?

(6) ಈ ಕಳೆದ 5 ವರ್ಷಗಳಿಂದ ನಾನು ಸಂಪಾದಿಸಿದುದು ಮತ್ತು ವೆಚ್ಚಮಾಡಿದುದು ಎರಡನ್ನೂ ಕೆಳಗೆ ಕೊಟ್ಟಿದೇನೆ.

	ಸಂಪಾದಿಸಿದುದು	ವೆಚ್ಚಮಾಡಿದುದು
1910 ರಲ್ಲಿ	5472 ರೂ.	3278 ರೂ.
1911 ರಲ್ಲಿ	6789 ರೂ.	7896 ರೂ.
1912 ರಲ್ಲಿ	7895 ರೂ.	9687 ರೂ.
1913 ರಲ್ಲಿ	3267 ರೂ.	6804 ರೂ.
1914 ರಲ್ಲಿ	9875 ರೂ.	4532 ರೂ.

ಒಟ್ಟು ಎಷ್ಟು ಸಂಪಾದನೆಯಾಯಿತು ? ಎಷ್ಟು ವೆಚ್ಚವಾಯಿತು? ಇವುಗಳನ್ನು ಕೂಡು:—

(7) 324, 7568, 91, 011, 2223, 40, 409.

(8) 1500, 18, 011, 460, 55, 660, 70, 731, 82, 082.

(9) 407, 7911, 47, 911, 91, 074, 90, 004.

(10) 3004, 1929, 415, 9600, 3370, 7895.

ಮೂರನೆಯ ಅಧ್ಯಾಯ.

ವ್ಯವಕಲನ (ಕಳೆಯುವುದು).

I. ನನ್ನಲ್ಲಿ 76 ಬಳಪಗಳಿವೆ; ರಾಮನಿಗೆ 34 ಬಳಪಗಳನ್ನು ಕೊಟ್ಟುಬಿಟ್ಟರೆ ನನ್ನಲ್ಲಿ ಎಷ್ಟು ಬಳಪಗಳುಳಿಯುತ್ತವೆ?

	ಹ.	ಒಂ.	
ನನ್ನಲ್ಲಿರುವ ಬಳಪಗಳು	7	6	
ರಾಮನಿಗೆ ಕೊಟ್ಟುವು	3	4	
ನನ್ನಲ್ಲುಳಿದುವು	4	2	ಬಳಪಗಳು

76 ಬಳಪಗಳು–34 ಬಳಪಗಳು=42 ಬಳಪಗಳು.

34 ಬಳಪಗಳು+42 ಬಳಪಗಳು ಎಷ್ಟು?

34 ಬಳಪಗಳಿಗೆ ಎಷ್ಟು ಬಳಪಗಳನ್ನು ಸೇರಿಸಿದರೆ 76 ಬಳಪಗಳು ಆಗುತ್ತವೆ?

II. ಎತ್ತಿಗೂ ಬಂಡಿಗೂ ಸೇರಿ 92 ರೂಪಾಯಿಗಳು. ಬಂಡಿಗೆ 27 ರೂ. ಗಳಾದರೆ ಎತ್ತಿಗೆ ಎಷ್ಟು?

	ಹ.	ಒಂ.	ಹ.	ಒಂ.
ಎತ್ತಿಗೂ ಬಂಡಿಗೂ	9	2 ರೂ.	8	12
ಬಂಡಿಗೆ	2	7 ರೂ.	2	7
ಎತ್ತಿಗೆ	6	5	6	5

92 ರೂ.—27 ರೂ.=65 ರೂ.

27 ರೂ.+65 ರೂ. ಎಷ್ಟು?

27 ರೂ.+ಎಷ್ಟು ರೂ.? =92 ರೂ.

22 ನೆಯ ಅಭ್ಯಾಸ.

(1) ಒಂದು ಪಾಠಶಾಲೆಯಲ್ಲಿ 54 ಹುಡುಗರಿದ್ದಾರೆ. ಅವರಲ್ಲಿ 32 ಹುಡುಗರು ಬಂದಿದ್ದರು. ಎಷ್ಟು ಹುಡುಗರು ಬರಲಿಲ್ಲ?

(2) ಒಂದು ತರಗತಿಯಲ್ಲಿ 45 ಹುಡುಗರಿದ್ದಾರೆ. 16 ಹುಡುಗರು ಹೊತ್ತುವಿಾರಿ ಬಂದರು. ಎಷ್ಟು ಹುಡುಗರು ಕಾಲಕ್ಕೆ ಸರಿಯಾಗಿ ಬಂದರು?

(3) ನನ್ನ ವಯಸ್ಸು ಈಗ 54 ವರ್ಷಗಳು. 10 ವರ್ಷಗಳ ಹಿಂದೆ ನನ್ನ ವಯಸ್ಸೆಷ್ಟು ? 12 ವರ್ಷಗಳ ಹಿಂದೆ ಎಷ್ಟು ? 15 ವರ್ಷಗಳ ಹಿಂದೆ ಎಷ್ಟು ?

(4) ಒಂದು ಹಸುವಿಗೂ ಒಂದು ಆಡಿಗೂ ಒಟ್ಟು 54 ರೂ. ಬೆಲೆ. ಹಸುವಿಗೆ 46 ರೂ. ಬೆಲೆಯಾದರೆ ಆಡಿಗೆ ಎಷ್ಟು ?

(5) ನನ್ನಲ್ಲಿ 86 ರೂ. ಗಳಿವೆ. ರಾಮುನಿಗೆ 47 ರೂ. ಗಳನ್ನು ಕೊಟ್ಟಮೇಲೆ ನನ್ನಲ್ಲಿ ಉಳಿಯುವುದೆಷ್ಟು ?

(6) ಒಂದು ಬಿಂದಿಗೆ ಅದರಲ್ಲಿರುವ ನೀರು ಇವುಗಳ ತೂಕವು 75 ಸೇರುಗಳು. ಬಿಂದಿಗೆಯತೂಕ 14 ಸೇರುಗಳಾದರೆ ನೀರಿನ ತೂಕವೆಷ್ಟು ?

(7) ಒಂದು ಬಂಡಿ ರಾಗಿಗೆ ಈ ಹೊತ್ತು 55 ರೂ. ಬೆಲೆ. ನೆನ್ನೆ 12 ರೂ. ಕಡಿಮೆಯಾಗಿದ್ದರೆ ಬೆಲೆ ಎಷ್ಟು ?

(8) ಒಂದು ನೋಟು ಬುಕ್ಕಿನಲ್ಲಿ 64 ಹಾಳೆಗಳಿವೆ. 35 ಹಾಳೆಗಳನ್ನು ಹರಿದುಬಿಟ್ಟರೆ ಎಷ್ಟು ಹಾಳೆಗಳು ನಿಲ್ಲುತ್ತವೆ ?

(9) 100 ಪುಸ್ತಕಗಳನ್ನು 67 ರೂ ಗಳಿಗೆ ಕೊಂಡು ಕೊಂಡು 92 ರೂ. ಗಳಿಗೆ ಮಾರುತ್ತೇನೆ. ಹಾಗಾದರೆ ನನಗೆ ಎಷ್ಟು ರೂ. ಗಳು ಹೆಚ್ಚಾಗಿ ಬಂದುವು ?

(10) ಒಂದು ಗಾರೆ ತೊಟ್ಟಿಯು 90 ಕೊಡ ನೀರನ್ನು ಹಿಡಿಯುತ್ತದೆ. ರಾಮುನು 35 ಕೊಡ ನೀರನ್ನು ತುಂಬುತ್ತಾನೆ. ಕೃಷ್ಣನು 20 ಕೊಡ ನೀರನ್ನು ತುಂಬುತ್ತಾನೆ ಹಾಗಾದರೆ ತೊಟ್ಟಿಯು ಇನ್ನೆಷ್ಟು ಕೊಡ ನೀರನ್ನು ಹಿಡಿಯುತ್ತದೆ?

ಈ ಕಳೆಯುವ ಲೆಕ್ಕವನ್ನು ಮಾಡು:—

(11)	45	52	64	73	82	92	92	74	81
	23	24	48	36	28	16	63	58	24

(12)	93–19=	73–14=	95–46=
	93–25=	73–28=	86–36=
	93–36=	73–45=	75–26=

ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ.

(13)

(1)	(2)	(3)	(4)
83—19=	80—35=	61—37=	76—39=
19+ =83	35+ =80	37+ =61	39+ =76

ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ.

(14) i. ಮೂರು ಸಂಖ್ಯೆಗಳನ್ನು ಕೂಡಿದರೆ ಅವುಗಳ ಒಟ್ಟು 23 ಆಗುತ್ತದೆ. ಅವುಗಳಲ್ಲಿ ಎರಡು ಸಂಖ್ಯೆಗಳನ್ನು ಕೂಡಿದರೆ ಅವುಗಳ ಒಟ್ಟು 18 ಆಗುತ್ತದೆ. ಮೂರನೆಯ ಸಂಖ್ಯೆ ಎಷ್ಟು ?

ii. ಈ ಕೂಡುವ ಲೆಕ್ಕಗಳಲ್ಲಿ * ಕ್ಕೆ ಬದಲಾಗಿ ಯಾವ ಸಂಖ್ಯೆಗಳನ್ನು ಬರೆಯಬೇಕು ?

10	22	34	21	32
8	12	15	14	18
*	*	*	18	20
			**	**
23	38	52	63	100

(15) 9+6+5—3 ಎಷ್ಟು ?

9—3+6+5 ಎಷ್ಟು ? 6—3+5+9 ಎಷ್ಟು ? 5—3+9+6 ಎಷ್ಟು ?

ನನ್ನಲ್ಲಿ 264 ಮಣಿಗಳಿವೆ. ಅವುಗಳಲ್ಲಿ 175 ನ್ನು ಮಾರಿಬಿಡುತ್ತೇನೆ. ಆಮೇಲೆ ನನ್ನಲ್ಲಿ ಎಷ್ಟು ಮಣಿಗಳು ಉಳಿಯುತ್ತವೆ ?

ನನ್ನಲ್ಲಿದ್ದ ಮಣಿಗಳು	2	6	4	1	15	14
ಮಾರಿದುವು	1	7	5	1	7	5
ಉಳಿದುವು		8	9		8	9

264 ಮಣಿಗಳು—175 ಮಣಿಗಳು=89 ಮಣಿಗಳು.

175 ಮಣಿಗಳು+89 ಮಣಿಗಳು ಎಷ್ಟು ?

23 ನೆಯ ಅಭ್ಯಾಸ.

(1) ಒಂದು ಸರಕ್ಕೆ 108 ಮಣಿಗಳು ಬೇಕಾಗುತ್ತವೆ. ನನ್ನಲ್ಲಿ 95 ಮಣಿಗಳು ಇವೆ. ಆ ಸರಕ್ಕೆ ಇನ್ನೆಷ್ಟು ಮಣಿಗಳು ಬೇಕಾಗುತ್ತವೆ ?

(2) ಒಂದು ಪೆಟ್ಟಿಗೆಯಲ್ಲಿ 191 ಬಳಪಗಳಿವೆ. ಇದರಲ್ಲಿ 179 ಬಳಗಳನ್ನು ಬೇರೆಯಾಗಿ ತೆಗೆದಿಟ್ಟರೆ ಇನ್ನು ಎಷ್ಟು ಬಳಪಗಳು ಉಳಿಯುತ್ತವೆ?

(3) ಎರಡು ಪುಸ್ತಕಗಳಲ್ಲಿ ಒಟ್ಟು 432 ಪುಟಗಳಿವೆ. ಅವುಗಳಲ್ಲಿ ಒಂದರಲ್ಲಿ 264 ಪುಟಗಳಿವೆ. ಇನ್ನೊಂದರಲ್ಲಿ ಎಷ್ಟು ಇವೆ.

(4) ಒಂದು ಎತ್ತಿಗೂ ಒಂದು ಹಸುವಿಗೂ 121 ರೂ. ಗಳು ಎತ್ತಿಗೆ 78 ರೂ. ಗಳಾದರೆ ಹಸುವಿಗೆ ಎಷ್ಟು ಖರೀದಿ ?

(5) ಒಂದು ಕುದುರೆ ಅದರ ಜೀನು ಇವೆರಡಕ್ಕೂ 175 ರೂ. ಗಳು ಜೀನಿನ ಬೆಲೆಯು 38 ರೂ. ಗಳಾದರೆ ಕುದುರೆಯ ಬೆಲೆ ಎಷ್ಟು ?

(6) ನಾನು ಒಂದು ಅಂಗಡಿಯಲ್ಲಿ 398 ರೂ. ಗಳ ಸಾಮಾನನ್ನು ತೆಗೆದುಕೊಂಡು 500 ರೂಪಾಯಿಗಳ ನೋಟನ್ನು ಕೊಟ್ಟರೆ ನನಗೆ ಹಿಂದಿರುಗಿ ಎಷ್ಟು ರೂಪಾಯಿಗಳು ಬರಬೇಕು ?

(7) ಒಂದು ಬುಟ್ಟಿಯಲ್ಲಿ 75 ಸೇಬಿನಹಣ್ಣುಗಳಿವೆ. ಇನ್ನೊಂದರಲ್ಲಿ 45 ಹಣ್ಣುಗಳಿವೆ. 96 ಹಣ್ಣುಗಳನ್ನು ಮಾರಿಬಿಟ್ಟರೆ ಇನ್ನು ಎಷ್ಟು ಹಣ್ಣುಗಳು ಉಳಿಯುತ್ತವೆ ?

(8) ನನ್ನಲ್ಲಿ 150 ರೂ ಗಳಿವೆ. 22 ರೂ. ಗಳಿಗೆ 1 ಹಸುವನ್ನೂ, 55 ರೂ. ಗಳಿಗೆ 1 ಎಮ್ಮೆಯನ್ನೂ ಕೊಂಡುಕೊಳ್ಳುತ್ತೇನೆ. ಇವೆರಡನ್ನೂ ಕೊಂಡುಕೊಂಡ ಮೇಲೆ ನನ್ನಲ್ಲೆಷ್ಟು ರೂ. ಗಳು ಉಳಿಯುತ್ತವೆ ?

(9) ಬ್ಯಾಂಕಿನಲ್ಲಿ ನನ್ನ ಹೆಸರಿನಲ್ಲಿ 520 ರೂ. ಗಳಿವೆ. ನಾನು ಒಂದು ತಿಂಗಳು 160 ರೂ., ಇನ್ನೊಂದು ತಿಂಗಳು 115 ರೂ., ಮತ್ತೊಂದು ತಿಂಗಳು 30 ರೂ., ಹಿಂದಿರುಗಿ ತೆಗೆದುಕೊಂಡರೆ ಇನ್ನೆಷ್ಟು ರೂ. ಗಳು ನನ್ನ ಹೆಸರಿನಲ್ಲಿ ಉಳಿದಿವೆ ?

(10) ನಾನು ಒಂದುವರ್ಷ 458 ರೂ. ಗಳನ್ನು ಸಂಪಾದಿಸಿದೆನು. ಈ ಕೆಳಗೆ ಹೇಳಿರುವಂತೆ ವೆಚ್ಚ ಮಾಡಿದೆನು.

ಜನವರಿ ತಿಂಗಳಲ್ಲಿ	40 ರೂ.	ಜುಲೈ	49 ರೂ.
ಫೆಬ್ರುವರಿ	30 ರೂ.	ಆಗಸ್ಟು	22 ರೂ.
ಮಾರ್ಚಿ	17 ರೂ.	ಸೆಪ್ಟಂಬರು	32 ರೂ.
ಏಪ್ರಿಲ್	28 ರೂ.	ಅಕ್ಟೋಬರು	11 ರೂ.
ಮೇ	15 ರೂ.	ನವೆಂಬರು	21 ರೂ.
ಜೂನ್	22 ರೂ.	ಡಿಸೆಂಬರು	10 ರೂ.

ಹಾಗಾದರೆ ಆ ವರ್ಷದಲ್ಲಿ ನನ್ನ ವೆಚ್ಚವೆಷ್ಟು ? ಮತ್ತು ಎಷ್ಟು ರೂ. ಗಳನ್ನು ಉಳಿಸಿದೆನು ?

(11) ಈ ಕಳೆಯುವ ಲೆಕ್ಕಗಳನ್ನು ಮಾಡು:—

(1)	(2)	(3)	(4)	(5)	(6)	(7)	(8)	(9)	(10)
231	238	256	468	506	608	745	803	935	918
112	142	178	279	323	329	547	308	792	639

(12) ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ:—

325—201=	663—476=	427—238=
432—135=	792—627=	613—228=
534—268=	901—658=	741—256=
493—295=	366—175=	935—662=

(13) ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ:—

(1)	(2)	(3)
225—142=	238—125=	493—264=
142+ =225	125+ =238	264+ =493

(4)

350—218=

218+ =350.

(14) i ಮೂರು ಸಂಖ್ಯೆಗಳನ್ನು ಕೂಡಿದರೆ ಅವುಗಳ ಒಟ್ಟು 300 ಬರುತ್ತದೆ. ಅವುಗಳಲ್ಲಿ ಎರಡು ಸಂಖ್ಯೆಗಳನ್ನು ಕೂಡಿದರೆ ಅವುಗಳ ಒಟ್ಟು 157 ಆಗುತ್ತದೆ. ಮೂರನೆಯ ಸಂಖ್ಯೆ ಎಷ್ಟು?

ii. ಈ ಕೂಡುವ ಲೆಕ್ಕಗಳಲ್ಲಿ (*) ಕ್ಕೆ ಬದಲಾಗಿ ಯಾವ ಸಂಖ್ಯೆಗಳನ್ನು ಬರೆಯಬೇಕು?

(1)	(2)	(3)	(4)
142	112	314	218
15	115	457	152
***	18	***	67
	***		***
300	467	800	664

(15) 125—22+117—37 ಎಷ್ಟು?

125—37+117—22 ಎಷ್ಟು?

117—22+125—37 ಎಷ್ಟು?

125+117—22—37 ಎಷ್ಟು?

I. 1234 ರಲ್ಲಿ 987 ನ್ನು ಕಳೆ.

1234	14—7=7
987	12—8=4
247	11—5=2

II. 7030 ರಲ್ಲಿ 3142 ನ್ನು ಕಳೆ.

7030	10—2=8
3142	12—4=8
3888	9—1=8
	6—3=3

24 ನೆಯ ಅಭ್ಯಾಸ

(1) ಶ್ರೀ ಚಾಮುಂಡೇಶ್ವರಿಯ ಬೆಟ್ಟಕ್ಕೆ 1000 ಮೆಟ್ಟಲುಗಳಿವೆ. 938 ಮೆಟ್ಟಲುಗಳನ್ನು ಹತ್ತಿದ ಮೇಲೆ ಇನ್ನೆಷ್ಟು ಮೆಟ್ಟಲುಗಳನ್ನು ಹತ್ತಬೇಕು ?

(2) ಒಬ್ಬನಿಗೆ 2315 ರೂಪಾಯಿ ಸಾಲವಿದೆ 1936 ರೂಪಾಯಿಗಳನ್ನು ತೀರಿಸಿದಮೇಲೆ ಇನ್ನೆಷ್ಟು ಸಾಲ ಉಳಿದಿರುವುದು ?

(3) ಒಂದು ತೋಟದಲ್ಲಿ 2212 ಮರಗಳಿವೆ. ಇನ್ನೊಂದರಲ್ಲಿ 1976 ಮರಗಳಿವೆ. ಎರಡನೆಯದರಲ್ಲಿ ಎಷ್ಟು ಕಡಿಮೆ ?

(4) ನಾನು ಹೋದವರ್ಷ 3213 ರೂಪಾಯಿಗಳನ್ನು ಸಂಪಾದಿಸಿದೆನು. ಈ ವರ್ಷ 3302 ರೂ. ಗಳನ್ನು ಸಂಪಾದಿಸಿದರೆ ಎಷ್ಟು ರೂ. ಗಳನ್ನು ಹೆಚ್ಚಾಗಿ ಸಂಪಾದಿಸಿದ ಹಾಗಾಯಿತು ?

(5) ನಾನು 2575 ರೂ. ಗಳನ್ನು ಸಾಲವಾಗಿ ತೆಗೆದುಕೊಂಡೆನು. ಮೂರು ವರ್ಷಗಳನಂತರ ಬಡ್ಡಿಯೂ ಸೇರಿ 2800 ರೂ. ಗಳಾದರೆ ಬಡ್ಡಿಯು ಎಷ್ಟಾಯಿತು ?

(6) ಮನೆಕಟ್ಟುವುದಕ್ಕೆ ನನಗೆ 3250 ಕಲ್ಲುಗಳು ಬೇಕಾಗುತ್ತವೆ. ಆದರೆ ನನ್ನಲ್ಲಿ 2089 ಕಲ್ಲುಗಳುಮಾತ್ರ ಇವೆ. ಹಾಗಾದರೆ ಎಷ್ಟು ಕಲ್ಲುಗಳು ಸಾಲುವುದಿಲ್ಲ ?

(7) ನನಗೆ 3897 ರೂ. ಬಾಳುವ ಆಸ್ತಿಯು ಇದೆ. ನನ್ನ ಸಾಲವು 5000 ರೂ. ಗಳಾಗುತ್ತದೆ. ಹಾಗಾದರೆ ನನ್ನ ಆಸ್ತಿಗಿಂತ ಸಾಲವು ಎಷ್ಟು ಹೆಚ್ಚಾಗಿದೆ ?

(8) ಒಂದು ಸೈನ್ಯದಲ್ಲಿ ಕುದುರೆ ಸವಾರರೂ ಮತ್ತು ಕಾಲಾಳುಗಳೂ ಸೇರಿ 23,546 ಜನರಿದಾರೆ. ಇವರಲ್ಲಿ 14,789 ಜನಗಳು ಕುದುರೆ ಸವಾರರು. ಹಾಗಾದರೆ, ಕಾಲಾಳುಗಳು ಎಷ್ಟು ಜನರಿದಾರೆ?

(9) ಒಬ್ಬನು ಬೊಂಬಾಯಿಯಲ್ಲಿ 19,246 ರೂ.ಗಳ ಜವಳಿಯನ್ನು ಕೊಂಡುಕೊಂಡು ಮೈಸೂರಿನಲ್ಲಿ 21,125 ರೂ ಗಳಿಗೆ ಮಾರಿದನು. ಹಾಗಾದರೆ ಎಷ್ಟು ರೂ. ಗಳು ಹೆಚ್ಚಾಗಿ ಬಂದುವು.

(10) ಬೆಂಗಳೂರು ಪೇಟೆಯಲ್ಲಿ 69,500 ಜನಗಳಿದಾರೆ. ಮೈಸೂರಿನಲ್ಲಿ 68,012 ಜನಗಳಿದಾರೆ. ಹಾಗಾದರೆ ಬೆಂಗಳೂರು ಪೇಟೆಯಲ್ಲಿ ಮೈಸೂರಿಗಿಂತ ಎಷ್ಟು ಜನಗಳು ಹೆಚ್ಚಾಗಿದಾರೆ?

(11) ಒಂದು ತೋಟದಲ್ಲಿ ಒಬ್ಬನಿಗೆ ಒಂದು ವರ್ಷ 20,000 ರೂಪಾಯಿ ಬಂತು. ಮಾರನೆಯವರ್ಷ 19,813 ರೂಪಾಯಿ ಬಂದರೆ ಎಷ್ಟು ಕಡಿಮೆಯಾಯಿತು?

(12) ಮೈಸೂರು ಸೀಮೆಯಲ್ಲಿ ಒಂದು ವರ್ಷ 72,970 ವಿದ್ಯಾರ್ಥಿಗಳಿದ್ದರು. ಇವರಲ್ಲಿ 62,945 ವಿದ್ಯಾರ್ಥಿಗಳು ಗಂಡಸರು. ಹಾಗಾದರೆ ಹೆಂಗಸರು ಎಷ್ಟು ವಿದ್ಯಾರ್ಥಿಗಳು?

(13) ನನ್ನ ಬಳಿ 2000 ರೂ. ಗಳಿವೆ. ಇದರಲ್ಲೊಬ್ಬನಿಗೆ 510 ರೂ. ಗಳನ್ನೂ, ಇನ್ನೊಬ್ಬನಿಗೆ 590 ರೂ. ಗಳನ್ನೂ ಸಾಲವಾಗಿ ಕೊಡುತ್ತೇನೆ. ಹಾಗಾದರೆ

i. ನಾನು ಒಟ್ಟು ಎಷ್ಟು ರೂ. ಸಾಲವಾಗಿ ಕೊಟ್ಟೆನು? ii. ಸಾಲ ಕೊಟ್ಟನಂತರ ನನ್ನಲ್ಲೆಷ್ಟು ಉಳಿದಿದೆ?

(14) ಒಂದು ಗದ್ದೆ, ಒಂದು ಹೊಲ, ಒಂದು ತೋಟ ಸೇರಿ 7016 ರೂಪಾಯಿ ಬೆಲೆಯಾಗುವುವು. ಗದ್ದೆ 2,137 ರೂ. ಬಾಳುತ್ತದೆ. ಹೊಲ 984 ರೂ. ಬಾಳುತ್ತದೆ. ಹಾಗಾದರೆ i. ಗದ್ದೆ ಮತ್ತು ಹೊಲ ಸೇರಿ ಎಷ್ಟು ರೂ. ಬಾಳುತ್ತದೆ? ii. ತೋಟವು ಎಷ್ಟು ರೂ. ಬಾಳುತ್ತದೆ?

(15) ಒಂದು ಮಳಿಗೆಯಲ್ಲಿ 2,500 ಚೀಲ ಸಕ್ಕರೆ ಇದೆ. ಒಂದು ತಿಂಗಳಲ್ಲಿ 715 ಚೀಲ, ಇನ್ನೊಂದು ತಿಂಗಳಲ್ಲಿ 522 ಚೀಲ, ಮತ್ತೊಂದು ತಿಂಗಳಲ್ಲಿ 599 ಚೀಲ, ಸಕ್ಕರೆ ವೆಚ್ಚವಾದಮೇಲೆ ಇನ್ನೆಷ್ಟು ಚೀಲ ಸಕ್ಕರೆ ಉಳಿದಿದೆ?

(16) ಒಂದು ಮನೆಯ ಕ್ರಯ, ಆ ಮನೆಯಲ್ಲಿರುವ ಸಾಮಾನು ಗಳ ಕ್ರಯ, ಮನೆ ಯಜಮಾನನಲ್ಲಿರುವ ನಗದು ಹಣ ಇವೆಲ್ಲಾ ಸೇರಿ 4,466 ರೂ. ಗಳಾಗುವುವು. ಮನೆ ಯಜಮಾನನಲ್ಲಿರುವುದು, 2,000 ರೂ. ಸಾಮಾನುಗಳ ಕ್ರಯ 547 ರೂ. ಆದರೆ ಮನೆಯ ಕ್ರಯವೆಷ್ಟು?

ಈ ಕಳೆಯುವ ಲೆಕ್ಕಗಳನ್ನು ಮಾಡು :—

(17)

(1) 1000	(2) 1000	(3) 2231	(4) 2231	(5) 4003
546	849	242	1777	1019
(6) 5010	(7) 6204	(8) 6204	(9) 7312	(10) 8093
873	976	5137	1025	2457

(18) 8129 ರಲ್ಲಿ 1231, 1372, 2433, 3567, 4679, 5092, 6124, 7550, 7755, 8059 ಗಳನ್ನು ಕಳೆ.

(19) ಈ ಕಳೆಯುವ ಲೆಕ್ಕಗಳನ್ನು ಮಾಡು :—

(1) 10,031	(2) 10,101	(3) 10,101	(4) 22,314
1,374	4,212	5,344	5,615
(5) 26,705	(6) 30,981	(7) 10,026	(8) 50,003
5,919	6,768	7,213	2,398
(9) 65,432	(10) 71,987		
29,217	57,204		

(20) 91,430 ರಲ್ಲಿ 34,001, 39,078, 49,876, 49,543, 52,009 ಗಳನ್ನು ಕಳೆ.

ಮಿಶ್ರೋದಾಹರಣೆಗಳು.

25 ನೆಯ ಅಭ್ಯಾಸ.

A

(1) ಮುನ್ನೂರತೊಂಬತ್ತುಮೂರನ್ನು ಒಂಬತ್ತುಸಾವಿರದಾರು ನೂರರಲ್ಲಿ ಕಳೆ.

(2) ಎಂಬತ್ತುಸಾವಿರದೇಳುನೂರನ್ನು ಎಂಬತ್ತೆರಡುಸಾವಿರದೆಂಟುನೂರ ಮೂವತ್ತೆಂಟರಿಂದ ಕಳೆ.

(3) ಹತ್ತುಸಾವಿರದ ನೂರೊಂದರಲ್ಲಿ ಒಂಬೈನೂರೆಂಬತ್ತನ್ನು ಕಳೆದರೆ ಉಳಿಯುವುದೆಷ್ಟು ?

(4) ತೊಂಬತ್ತುಸಾವಿರದೊಂಬೈನೂರೆರಡಕ್ಕಿಂತ ಲಕ್ಷದ ಹತ್ತು ಸಾವಿರದ ಹನ್ನೊಂದು ಎಷ್ಟು ಹೆಚ್ಚು ?

(5) ಮೂವತ್ತುಸಾವಿರದೊಂದಕ್ಕಿಂತ ಹತ್ತೊಂಬತ್ತುಸಾವಿರದ ಹತ್ತೊಂಬತ್ತು ಎಷ್ಟು ಕಡಿಮೆ ?

(6) ಎರಡು ಸಂಖ್ಯೆಗಳನ್ನು ಕೂಡಿಸಿದರೆ ಎಪ್ಪತ್ತೆಂಟು ಬರುತ್ತದೆ. ಇವುಗಳಲ್ಲಿ ಒಂದು ಸಂಖ್ಯೆಯು ಹತ್ತೊಂಬತ್ತು ; ಇನ್ನೊಂದು ಸಂಖ್ಯೆಯು ಯಾವುದು ?

(7) ಎರಡು ಸಂಖ್ಯೆಗಳ ಒಟ್ಟು ಐನೂರು. ಅವುಗಳಲ್ಲಿ ಒಂದು ಸಂಖ್ಯೆಯು ನೂರಹನ್ನೊಂದು. ಮತ್ತೊಂದು ಸಂಖ್ಯೆ ಎಷ್ಟು ?

(8) ಮೂರು ಸಂಖ್ಯೆಗಳ ಒಟ್ಟು ಒಂದುಸಾವಿರ ; ಅವುಗಳಲ್ಲಿ ಎರಡು ಸಂಖ್ಯೆಗಳ ಒಟ್ಟು ಐನೂರೈದು. ಮೂರನೆಯದೆಷ್ಟು ?

(9) ನಾಲ್ಕು ಸಂಖ್ಯೆಗಳನ್ನು ಕೂಡಿದರೆ ಎಂಟುನೂರಮೂವತ್ತೇಳಾಗುತ್ತದೆ. ಅವುಗಳಲ್ಲಿ ಮೂರು ಸಂಖ್ಯೆಗಳು ಯಾವುವೆಂದರೆ :— ಎಪ್ಪತ್ತೈದು, ನೂರೈವತ್ತೈದು, ಇನ್ನೂರೆಪ್ಪತ್ತು. ನಾಲ್ಕನೆಯ ಸಂಖ್ಯೆ ಯಾವುದು ?

(10) ರಾಮ, ಗೋವಿಂದ, ಕೃಷ್ಣ ಇವರುಗಳಲ್ಲಿ ಒಂದು ಸಾವಿರ ರೂಪಾಯಿಗಳಿವೆ.

i. ರಾಮ, ಗೋವಿಂದ ಇವರುಗಳಲ್ಲಿ ನಾನೂರತೊಂಬತ್ತು ನಾಲ್ಕು ರೂ. ಗಳಿವೆ. ಕೃಷ್ಣನಲ್ಲೆಷ್ಟು ರೂ. ಗಳಿವೆ?

ii. ರಾಮ, ಕೃಷ್ಣ ಇವರುಗಳಲ್ಲಿ ಐನೂರ ಎಂಬತ್ತೈದು ರೂ. ಗಳಿವೆ. ಗೋವಿಂದನಲ್ಲೆಷ್ಟು ರೂ. ಗಳಿವೆ?

iii. ರಾಮನಲ್ಲೆಷ್ಟು ರೂ. ಗಳಿವೆ?

B.

(1) ಒಂದು ಗಾರೆಯ ತೊಟ್ಟಿಯು 75 ಬಿಂದಿಗೆ ನೀರನ್ನು ಹಿಡಿಯುತ್ತದೆ. ಈಗ ಅದರಲ್ಲಿ 24 ಬಿಂದಿಗೆ ನೀರಿದೆ. ಹಾಗಾದರೆ ಇನ್ನೆಷ್ಟು ಬಿಂದಿಗೆ ನೀರು ಹಾಕಿದರೆ ತೊಟ್ಟಿಯು ತುಂಬುತ್ತದೆ ?

(2) ತುಪ್ಪ ಹಾಕಿರುವ ಒಂದು ಪಾತ್ರೆಯು 79 ತೊಲ ತೂಗು

ತ್ತದೆ. ಪಾತ್ರೆಯು 19 ತೊಲ ತೂಗಿದರೆ ತುಪ್ಪದ ತೂಕವೆಷ್ಟು ?

(3) ಪೋಸ್ಟಾಫೀಸಿನಿಂದ ಹೊರಡುವಾಗ ಅಂಚೆ ಜವಾನನ ಹತ್ತಿರ 125 ರೂ. ಗಳು ಇದ್ದುವು. ಅವನು ಹಿಂದಿರುಗಿ ಆಫೀಸಿಗೆ ಬಂದಾಗ ಅವನಲ್ಲಿ 38 ರೂ.ಗಳು ಇದ್ದುವು. ಹಾಗಾದರೆ ಅವನು ಎಷ್ಟು ರೂ. ಗಳನ್ನು ಜನರಿಗೆ ಕೊಟ್ಟನು?

(4) ನನ್ನಲ್ಲಿ 1250 ರೂ. ಗಳಿವೆ. 350 ರೂ ಗಳಿಗೆ ಬೆಳ್ಳಿಯನ್ನೂ 267 ರೂ. ಗಳಿಗೆ ಚಿನ್ನವನ್ನೂ ಕೊಂಡುಕೊಂಡಮೇಲೆ ಇನ್ನೆಷ್ಟು ರೂ. ಗಳು ಉಳಿಯುತ್ತವೆ?

(5) ಬ್ಯಾಂಕಿಗೆ ಹಣ ಹಾಕಿದುದು, ಹಿಂದಕ್ಕೆ ತೆಗೆದುಕೊಂಡುದು

	ಬ್ಯಾಂಕಿಗೆ ಹಣ ಹಾಕಿದುದು, ರೂ. ಆ. ಪೈ.	ಹಿಂದಕ್ಕೆ ತೆಗೆದುಕೊಂಡುದು ರೂ. ಆ. ಪೈ.
1/6/1915	25—0—0	
8/6/1915	45—0—0	
15/6/1915		32—0—0
22/6/1915	41—0—0	
26/6/1915		29—0—0
29/6/1915	68—0—0	

ಹಾಗಾದರೆ 1915 ನೆಯ ಜೂನ್ ತಿಂಗಳಲ್ಲಿ ನಾನು ಎಷ್ಟು ಹಣವನ್ನು ಬ್ಯಾಂಕಿಗೆ ಹಾಕಿದೆನು? ಎಷ್ಟು ಹಣವನ್ನು ವಾಪಸು ತೆಗೆದುಕೊಂಡೆನು? ತಿಂಗಳ ಕೊನೆಯಲ್ಲಿ ಎಷ್ಟು ಹಣವು ನನ್ನ ಲೆಕ್ಕದಲ್ಲಿ ಉಳಿದಿದೆ?

(6) ಈ ಕಳೆಯುವ ಲೆಕ್ಕಗಳನ್ನು ಮಾಡು.

(1) 909 − 727
(2) 1,010 − 876
(3) 4,870 − 3,905
(4) 10,002 − 1,000
(5) 95,659 − 85,768
(6) 1,23,456 − 34,567

(1) 15 − . = 9
(2) 78 − . . = 33
(3) 215 − . . = 125
(4) 1,002 − . . . = 868
(5) 1,253 − . .

ಈ ಕಳೆಯುವ ಲೆಕ್ಕಗಳಲ್ಲಿ ಚುಕ್ಕೆಗಳನ್ನು ಹಾಕಿರುವ ಸ್ಥಳಗಳಲ್ಲಿ ಯಾವ ಸಂಖ್ಯೆಗಳನ್ನು ಬರೆಯಬೇಕು ?

(8) 9—2+8—4 ಎಷ್ಟು ?

28—12+19—7 ಎಷ್ಟು ?

115+126—63 ಎಷ್ಟು ?

(9) ಈ ಕೆಳಗೆ ಬರೆದಿರುವ ಕೂಡುವ ಲೆಕ್ಕಗಳಲ್ಲಿ ಬಿಟ್ಟಿರುವ ಸಂಖ್ಯೆಗಳನ್ನು ಬರೆ:—

(1)	(2)	(3)	(4)	(5)
5	65	65	193	2,147
8	82	82	347	3,556
9	35	192	469	......
4	44	264		4,734
.	..	365	1235	8,888
		....		
31	283	1748	2959	19,359

(10) ಈ ಕೆಳಗೆ ಕೊಟ್ಟಿರುವ ಮನೆಗಳಲ್ಲಿ ಬಿಟ್ಟುಹೋದ ಸಂಖ್ಯೆಗಳನ್ನು ಸೇರಿಸಿ, ಅಡ್ಡಲಾಗಿ ಕೂಡಿದರೂ ನಿಲುವಾಗಿ ಕೂಡಿದರೂ ಮೂಲೆಮುಮ್ಮೋಲೆ ಕೂಡಿದರೂ ಒಂದೇ ಮೊತ್ತವು ಬರುತ್ತವೆ. ಹಾಗಾದರೆ ಬಿಟ್ಟುಹೋಗಿರುವ ಸಂಖ್ಯೆಗಳನ್ನು ಕಂಡುಹಿಡಿ:—

1

6		8
	5	
		4

2

3	7	5
	5	

3

1	16	11	6
13	14		10
	9	14	
12		12	15

ನಾಲ್ಕನೆಯ ಅಧ್ಯಾಯ

ಗುಣಾಕಾರ.

26 ನೆಯ ಅಭ್ಯಾಸ.

7 ರೂ. + 7 ರೂ. + 7 ರೂ. + 7 ರೂ. + 7 ರೂ. ಎಷ್ಟು? ಇದನ್ನೇ ಸಂಕ್ಷೇಪವಾಗಿ 5 ಸಲ 7 ರೂ. ಎಂದು ಹೇಳುತ್ತೇವೆ. ಮತ್ತು 7 ರೂ. × 5 ಎಂದು ಬರೆಯುತ್ತೇವೆ (×) ಈ ಗುರುತನ್ನು ಉಪಯೋಗಿಸಿದಾಗಲೆಲ್ಲಾ ಇದರ ಎಡಗಡೆ ಇರುವುದನ್ನು ಬಲಗಡೆ ಯಾವ ಸಂಖ್ಯೆ ಇದೆಯೋ ಅದರಷ್ಟು ಸಲ ಕೂಡಬೇಕೆಂದು ಅರ್ಥ.
7 ರೂ. + 7 ರೂ. + 7 ರೂ. + 7 ರೂ. + 7 ರೂ. = 7 × 5 = 35 ರೂ.

(1) i. 5 ರೂ. + 5 ರೂ. + 5 ರೂ. + 5 ರೂ. + 5 ರೂ. = 5. ರೂ. × ಎಷ್ಟು ?

ii. 4 ಆ. + 4 ಆ. + 4 ಆ. + 4 ಆ. + 4 ಆ. + 4 ಆ. = 4 ಆ. × ಎಷ್ಟು ?

iii. 8 ಕಾ. + 8 ಕಾ. + 8 ಕಾ. = 8 ಕಾ. × ಎಷ್ಟು?

iv. 9 ದಶಕ + 9 ದ. + 9 ದ. + 9 ದ. = 9 ದ. × ಎಷ್ಟು

v. 19 + 19 + 19 + 19 + 19 = 19 × ಎಷ್ಟು ?

ಮೊತ್ತವನ್ನೂ ಕಂಡುಹಿಡಿ.

(2) ಈ ಲೆಕ್ಕಗಳನ್ನು (×) ಈ ಗುರುತು ಉಪಯೋಗಿಸಿ ಬೇರೆ ವಿಧವಾಗಿ ಬರೆ ಮತ್ತು ಮೊತ್ತವನ್ನೂ ಕಂಡು ಹಿಡಿ :—

i. 12 ಗೋಲಿ + 12 ಗೋಲಿ + 12 ಗೋಲಿ + 12 ಗೋಲಿ.

ii. 14 ಚಿತ್ರ + 14 ಚಿತ್ರ + 14 ಚಿತ್ರ.

iii. 11 ಶತಕ + 11 ಶತಕ + 11 ಶತಕ + 11 ಶತಕ + 11 ಶತಕ.


iv 32+32+32+32+32.

v. 25+25+25+25+25+25.


(3) ಕೂಡುವ ಗುರುತನ್ನು ಉಪಯೋಗಿಸಿ ಈ ಲೆಕ್ಕಗಳನ್ನು ಬೇರೆ ವಿಧವಾಗಿ ಬರೆ ಮತ್ತು ಉತ್ತರವನ್ನು ಕಂಡುಹಿಡಿ :—
13 × 5, 15 × 6, 16 × 8, 21 × 4, 25 × 3.

ಸಂಕ್ಷೇಪವಾಗಿ ಮೊತ್ತವನ್ನು ಕಂಡುಹಿಡಿಯುವ ರೀತಿಗೆ ಗುಣಾಕಾರವೆಂದು ಹೆಸರು. (×) ಈ ಗುರುತು ಗುಣಾಕಾರದ ಗುರುತು.

$7\times5=5\times7=35$ ಎನ್ನುವುದು ಸರಿಯಷ್ಟೆ? ಇದನ್ನೇ ನಕ್ಷೆಯ ಮೂಲಕವಾಗಿಯೂ ತೋರಿಸಬಹುದು.



$7\times5=35$



$5\times7=35$

(4) ನಕ್ಷೆಯ ಮೂಲಕವಾಗಿ $8\times6=6\times8=48$, $6\times5=5\times6=30$, $4\times7=7\times4=28$, $9\times4=4\times9=36$, $2\times8=8\times2=16$ ಎಂದು ತೋರಿಸು.

(5) ಹಿಂದಿನ ಪ್ರಶ್ನೆಯಿಂದ ತಿಳಿಯುವುದೇನು?

ಗುಣಾಕಾರದ ಗುರುತಿನ ಬಲಗಡೆ ಇರುವ ಸಂಖ್ಯೆಯನ್ನು ಎಡಗಡೆಗೂ, ಎಡಗಡೆ ಇರುವ ಸಂಖ್ಯೆಯನ್ನು ಬಲಗಡೆಗೂ ಹಾಕಿಕೊಂಡು ಲೆಕ್ಕಮಾಡಿದರೆ ಉತ್ತರವು ಬದಲಾಯಿಸುವುದೇ?

ಗುಣಾಕಾರದ ಗುರುತಿನ ಎಡಗಡೆ ಇರುವುದಕ್ಕೆ **ಗುಣ್ಯ**ವೆಂದೂ, ಬಲಗಡೆ ಇರುವುದಕ್ಕೆ **ಗುಣಕ**ವೆಂದೂ, ಗುಣಾಕಾರಮಾಡಿಬಂದ ಉತ್ತರಕ್ಕೆ **ಫಲ**ವೆಂದೂ ಹೆಸರು. $7\times5=35$ ಎಂಬಲ್ಲಿ 7 ಗುಣ್ಯ, 5 ಗುಣಕ, 35 ಫಲ. ಗುಣ್ಯಗುಣಕಗಳಲ್ಲಿ ಒಂದಕ್ಕೊಂದನ್ನು ಬದಲಾಯಿಸಿ ಹಾಕಿಕೊಳ್ಳಬಹುದು. ಆದರೆ ಫಲವು ಬದಲಾಯಿಸುವುದಿಲ್ಲ.

$7\times5=35$ ಎಂಬುದನ್ನು, 7 ನ್ನು 5 ಸಲ ಕೂಡಿದರೆ 35 ಬರುತ್ತದೆ ಎಂದಾಗಲಿ, 7 ನ್ನು 5 ರಿಂದ ಗುಣಿಸಿದರೆ 35 ಬರುತ್ತದೆ ಎಂದಾಗಲಿ ಹೇಳಬಹುದು.

(6) 12 ನ್ನು 2 ಸಲ, 3 ಸಲ, 4 ಸಲ,....16 ಸಲ ಕೂಡಿದರೆ ಬರುವ ಮೊತ್ತಗಳನ್ನು ಗುಣಾಕಾರದ ಗುರುತನ್ನು ಉಪಯೋಗಿಸಿ ಬರೆ.

(7) ಹೀಗೆಯೇ 11, 13, 14 15, 16 ರ ಮಗ್ಗಿಗಳನ್ನು ಬರೆ.

7×5=35 ಸರಿಯಷ್ಟೆ? 35 ಕ್ಕೆ 7, 5 ಈ ಸಂಖ್ಯೆಗಳು ಅಪ-ವರ್ತನಗಳು ಎಂದು ಹೆಸರು.

(8) ಯಾವಯಾವ ಸಂಖ್ಯೆಗಳನ್ನು ಗುಣಿಸಿದರೆ 9, 15, 21, 36 49, 56, 63, 81 ಗಳು ಬರುತ್ತವೆ?

(9) ಮೇಲೆ ಕೊಟ್ಟಿರುವ ಸಂಖ್ಯೆಗಳಿಗೆ ಅಪವರ್ತನಗಳನ್ನು ಹೇಳು.

ಒಂದು ಕಟ್ಟಿನಲ್ಲಿ 7 ಬಳಪಗಳಿದ್ದರೆ 8 ಕಟ್ಟುಗಳಲ್ಲಿ 8 ಸಲ 7 ಬಳಪಗಳು ಎಂದರೆ 56 ಬಳಪಗಳಿವೆ. ಇದನ್ನೇ 7 ಬಳಪಗಳು ×8=56 ಬಳಪಗಳು ಎಂದು ಬರೆಯುತ್ತೇವೆ.

(10) ಈ ಲೆಕ್ಕಗಳನ್ನು ಗುಣಾಕಾರದ ಗುರುತನ್ನು ಉಪಯೋಗಿಸಿ ಬರೆ. ಮತ್ತು ಉತ್ತರಗಳನ್ನು ಕಂಡುಹಿಡಿ:—

i. 1 ಗಾಡಿಯ ಕ್ರಯವು 35 ರೂ. ಗಳಾದರೆ 8 ಗಾಡಿಗಳ ಕ್ರಯ ಎಷ್ಟು?

ii. ಒಂದು ಪೆಟ್ಟಿಗೆಯಲ್ಲಿ 25 ಪುಸ್ತಕಗಳಿವೆ. 3 ಪೆಟ್ಟಿಗೆಯಲ್ಲಿ ಎಷ್ಟಿವೆ?

1 ರಿಂದ 16 ರ ವರೆಗೆ ಇರುವ ಮಗ್ಗಿಗಳನ್ನು ಕೆಳಗೆ ಕೊಟ್ಟಿದೆ.

ಅಡ್ಡಸಾಲುಗಳು:—ಮೊದಲನೆಯ ಸಾಲಿನಲ್ಲಿ 1 ರ ಮಗ್ಗಿ ಇದೆ. 2 ನೆಯ ಸಾಲಿನಲ್ಲಿ 2 ರ ಮಗ್ಗಿಯಿದೆ. 3 ನೆಯ ಸಾಲಿನಲ್ಲಿ 3ರ ಮಗ್ಗಿ ಇದೆ. ಇತ್ಯಾದಿ.

ಉದ್ದಸಾಲುಗಳು—ಮೊದಲನೆಯ ಸಾಲಿನಲ್ಲಿ 1 ರ ಮಗ್ಗಿ ಇದೆ. 2 ನೆಯ ಸಾಲಿನಲ್ಲಿ 2 ರ ಮಗ್ಗಿ ಇದೆ. 3 ನೆಯ ಸಾಲಿನಲ್ಲಿ 3 ರ ಮಗ್ಗಿ ಇದೆ. ಇತ್ಯಾದಿ.

6 ರ ಮಗ್ಗಿಯನ್ನು ಓದುವ ವಿಧಾನ:—6 ಒಂದಲು 6, 6 ಎರಡಲು 12, 6 ಮೂರಲು 18,.........6 ಹದಿನಾರಲು 96.

ಮಿಕ್ಕ ಮಗ್ಗಿಗಳನ್ನು ಓದುವುದೂ ಹೀಗೆಯೇ. ಈ ಮಗ್ಗಿಗಳನ್ನು ಚೆನ್ನಾಗಿ ಬಾಯಿಪಾಠಮಾಡಿಸಬೇಕು.

1 ರಿಂದ 16 ರ ವರೆಗೆ ಇರುವ ಮಗ್ಗಿಗಳು.

1	2	3	4	5	6	7	8	9	10	11	12	13	14	15	16
2	4	6	8	10	12	14	16	18	20	22	24	26	28	30	32
3	6	9	12	15	18	21	24	27	30	33	36	39	42	45	48
4	8	12	16	20	24	28	32	36	40	44	48	52	56	60	64
5	10	15	20	25	30	35	40	45	50	55	60	65	70	75	80
6	12	18	24	30	36	42	48	54	60	66	72	78	84	90	96
7	14	21	28	35	42	49	56	63	70	77	84	91	98	105	112
8	16	24	32	40	48	56	64	72	80	88	96	104	112	120	128
9	18	27	36	45	54	63	72	81	90	99	108	117	126	135	144
10	20	30	40	50	60	70	80	90	100	110	120	130	140	150	160
11	22	33	44	55	66	77	88	99	110	121	132	143	154	165	176
12	24	36	48	60	72	84	96	108	120	132	144	156	168	180	192
13	26	39	52	65	78	91	104	117	130	143	156	169	182	195	208
14	28	42	56	70	84	98	112	126	140	154	168	182	196	210	224
15	30	45	60	75	90	105	120	135	150	165	180	195	210	225	240
16	32	48	64	80	96	112	128	144	160	176	192	208	224	240	256

i. 1 ರಿಂದ 10 ರವರೆಗೆ ಇರುವ ಸಂಖ್ಯೆಗಳಿಂದ ಗುಣಿಸುವುದು.

ಗುಣಕ 1.

ಯಾವ ಸಂಖ್ಯೆಯನ್ನಾಗಲಿ ಅದನ್ನು 1 ರಿಂದ ಗುಣಿಸಿದರೆ ಫಲವು ಅದೇ ಸಂಖ್ಯೆಯಾಗಿರುತ್ತದೆ.

ಗುಣಕ 2.

ಒಂದು ಪುಸ್ತಕದಲ್ಲಿ 68 ಪುಟಗಳಿವೆ. 2 ಪುಸ್ತಕಗಳಲ್ಲಿ ಎಷ್ಟು ಪುಟಗಳಿವೆ ?

68×2 ಪುಟಗಳಿವೆ.

ಕೂಡುವ ಲೆಕ್ಕದಲ್ಲಿ ಸಂಖ್ಯೆಗಳನ್ನು ಬರೆಯುವಹಾಗೆ ಗುಣಕವನ್ನು ಗುಣ್ಯದ ಕೆಳಗೆ ಎಂದರೆ 2 ನ್ನು 68 ರ ಕೆಳಗೆ ಬರೆ. ಈ ಸಂಖ್ಯೆಗಳ ಕೆಳಗೆ ಒಂದು ಗೀಟನ್ನು ಹಾಕು. ಇದರ ಕೆಳಗೆ ಗುಣಿಸಿ ಬಂದ ಫಲವನ್ನು ಏಕಸ್ಥಾನದಲ್ಲಿರುವ ಸಂಖ್ಯೆಯು ಏಕಸ್ಥಾನದಲ್ಲಿಯೂ ದಶಕಸ್ಥಾನದಲ್ಲಿರುವ ಸಂಖ್ಯೆಯು ದಶಕಸ್ಥಾನದಲ್ಲಿಯೂ, ಹೀಗೆಯೇ ಪ್ರತಿಯೊಂದು ಸಂಖ್ಯೆಯೂ ಅದರದರ ಸ್ಥಾನದಲ್ಲಿ ಬರುವಹಾಗೆ ಬರೆ.

ಹ. ಒಂ.		
6 8	ಗುಣ್ಯ	8 ಒಂ.×2=16 ಒಂ=1 ಹ. 6 ಒಂ.
2	ಗುಣಕ	6 ಹ. ×2=12 ಹ.
1 3 6	ಫಲ	12 ಹ.+1 ಹ. =13 ಹ.=1 ನೂ. 3 ಹ.

68 ಪುಸ್ತಕಗಳು×2=136 ಪುಸ್ತಕಗಳು.

27 ನೆಯ ಅಭ್ಯಾಸ.

(1) ಒಂದು ಪೆಟ್ಟಿಗೆಯಲ್ಲಿ 74 ಬಳಪಗಳಿವೆ. ಇನ್ನೊಂದರಲ್ಲೂ ಅಷ್ಟೇ ಇದೆ. ಎರಡರಿಂದ ಎಷ್ಟು ಬಳಪಗಳಿವೆ ?

(2) 1 ಸಲಾಕಿಯಲ್ಲಿ 88 ಅಂಗುಲಗಳ ಉದ್ದವಿದ್ದು 2 ಸಲಾಕಿಗಳಾದರೆ ಸಲಾಕಿಯ ಉದ್ದವೆಷ್ಟು ?

(3) ಮೈಸೂರಿನಿಂದ ಬೆಂಗಳೂರಿಗೆ 86 ಮೈಲಿಗಳು. ಒಂದು ಸಲ ಹೋಗಿ ಹಿಂದಕ್ಕೆ ಬಂದರೆ ಎಷ್ಟು ಮೈಲಿಗಳನ್ನು ಪ್ರಯಾಣಮಾಡಿದ ಹಾಗಾಯಿತು ?


(4) A ಎಂಬವನು ಉತ್ತರದಿಕ್ಕಿಗೆ 12 ಮೈಲಿ ಹೋಗುತ್ತಾನೆ. B ದಕ್ಷಿಣಕ್ಕೂ ಅಷ್ಟೇ ದೂರಹೋಗುತ್ತಾನೆ. ಇವರಿಬ್ಬರಿಗೂ ಮಧ್ಯದಲ್ಲಿ ಎಷ್ಟು ದೂರವಿದೆ?

(5) ಒಂದು ಚೀಲದಲ್ಲಿ 128 ರೂ. ಗಳಿವೆ. ಇನ್ನೊಂದರಲ್ಲೂ ಅಷ್ಟೇ ಇವೆ. ಈ ಎರಡು ಚೀಲಗಳಿಂದ ಒಟ್ಟು ಎಷ್ಟು ರೂ. ಗಳಿವೆ?

(6) ರಾಮನಿಗೆ ಇಬ್ಬರು ಮಕ್ಕಳು. ಒಬ್ಬೊಬ್ಬನಿಗೆ 225 ರೂ. ಗಳನ್ನು ಕೊಟ್ಟರೆ ಒಟ್ಟು ಎಷ್ಟು ರೂ. ಗಳನ್ನು ರಾಮನು ಕೊಟ್ಟ ಹಾಗಾಯಿತು?

(7) 262 ರ ಎರಡರಷ್ಟು ಇರುವ ಸಂಖ್ಯೆ ಯಾವುದು?

(8) i. ಒಂದು ಕೊಳದ ಆಕಾರವನ್ನು ಪಕ್ಕದಲ್ಲಿ ಕೊಟ್ಟಿದೆ. A B=55 ಅಡಿಗಳು, C D=55 ಅಡಿಗಳು, A D=66 ಅಡಿಗಳು, B C=66 ಅಡಿಗಳು, AB, CD ಗಳ ಒಟ್ಟಳತೆ ಎಷ್ಟು? AD, BC ಗಳ ಒಟ್ಟಳತೆ ಎಷ್ಟು? ಕೊಳದ ಸುತ್ತಳತೆ ಎಷ್ಟು?



ii. 55×2+66×2 ಎಷ್ಟು?

ಈ ಸಂಖ್ಯೆಗಳನ್ನು 2 ರಿಂದ ಗುಣಿಸು:—

(9) 98. (10) 123. (11) 456. (12) 1234.
(13) 2134. (14) 4312. (15) 12,345.

ಗುಣಕ 3.

1 ರೂಪಾಯಿಗೆ 48 ದುಡ್ಡುಗಳು ಬರುತ್ತವೆ. 3 ರೂ. ಗಳಿಗೆ ಎಷ್ಟು ದುಡ್ಡುಗಳು ಬರುತ್ತವೆ?

48×3 **ದುಡ್ಡುಗಳು ಬರುತ್ತವೆ.**

48	8 ಒಂ.×3=24 ಒಂ.=2 ಹ. 4 ಒಂ.
3	4 ಹ.×3=12 ಹ.
144	12 ಹ.+2 ಹ.=14 ಹ.=1 ನೂ. 4 ಹ.

48 **ದುಡ್ಡುಗಳು** ×3=144 **ದುಡ್ಡುಗಳು.**

28 ನೆಯ ಅಭ್ಯಾಸ.

1 ರೂಪಾಯಿಗೆ 48 ದುಡ್ಡುಗಳು; 1 ರೂಪಾಯಿಗೆ 64 ಕಾಲಾಣೆಗಳು.

(1) ಒಂದು ಮನೆಯ ಅಂಗಳದಲ್ಲಿ 18 ಅಡಿಗಳ ಎತ್ತರವುಳ್ಳ 3 ಕಂಬಗಳಿವೆ. ಈ ಕಂಬಗಳ ಒಟ್ಟು ಎತ್ತರವೆಷ್ಟು?

(2) ಒಂದು ಗುಡ್ಡೆಯಲ್ಲಿ 55 ನಿಂಬೆಹಣ್ಣುಗಳಿವೆ. ಇಂತಹ 3 ಗುಡ್ಡೆಗಳಲ್ಲಿ ಎಷ್ಟು ಹಣ್ಣುಗಳಿವೆ?

(3) ಒಂದು ರೂ. ಗೆ 64 ಕಾಲಾಣೆಗಳು. 3 ರೂ. ಗಳಿಗೆಷ್ಟು ಕಾಲಾಣೆಗಳು?

(4) ಒಂದು ನೋಟುಬುಕ್ಕಿನಲ್ಲಿ 125 ಪೇಜುಗಳಿವೆ. ಇಂತಹ 3 ನೋಟುಬುಕ್ಕುಗಳಲ್ಲಿ ಎಷ್ಟು ಪೇಜುಗಳಿವೆ?

(5) 208 ರ ಮೂರರಷ್ಟು ಇರುವ ಸಂಖ್ಯೆಯಾವುದು?

(6) ಒಂದೊಂದು ಬುಟ್ಟಿಗೆ 225 ರಂತೆ ತುಂಬಿದರೆ 3 ಬುಟ್ಟಿಗಳಿಗೆ ಎಷ್ಟು ನಿಂಬೆಹಣ್ಣುಗಳನ್ನು ತುಂಬಬಹುದು?

(7) ಒಬ್ಬೊಬ್ಬನಿಗೆ 75 ರೂ. ಗಳಂತೆ 3 ಜನಗಳಿಗೆ ಕೊಟ್ಟಮೇಲೆ ನನ್ನಲ್ಲಿ 25 ರೂ. ಗಳು ಉಳಿದುವು. ನನ್ನಲ್ಲೆಷ್ಟು ರೂ. ಗಳಿದ್ದುವು?

(8) ನನ್ನಲ್ಲಿ 165 ರೂ. ಗಳಿವೆ. ರಾಮನಲ್ಲಿ ನನ್ನಲ್ಲಿರುವ ಹಣದ ಮೂರರಷ್ಟಿದೆ. ನಮ್ಮಿಬ್ಬರಿಂದ ಎಷ್ಟು ರೂ. ಗಳಿವೆ?

ಇವುಗಳನ್ನು 3 ರಿಂದ ಗುಣಿಸು:—

(9) 365 (10) 1009 (11) 2028 (12) 5321
(13) 6543 (14) 12,354 (14) 54,321

ಗುಣಕ 4.

ಒಂದು ಪೆಟ್ಟಿಗೆಯಲ್ಲಿ 144 ಲೇಖನಿಯ ಟಾಕುಗಳಿವೆ. 4 ಪೆಟ್ಟಿಗೆಗಳಲ್ಲಿ ಎಷ್ಟು ಲೇಖನಿಯ ಟಾಕುಗಳಿವೆ?

144×4 ಲೇಖನಿಯ ಟಾಕುಗಳಿವೆ.

144	16, 1 ;
4	17, 1 ;
576	5.

144×4=576

ಲೇಖನಿಯ ಟಾಕುಗಳು.


29 ನೆಯ ಅಭ್ಯಾಸ.

1 ವರ್ಷ=52 ವಾರಗಳು. 1 ಫರ್ಲಾಂಗ್=220 ಗಜಗಳು.

1 ದಿನ=24 ಗಂಟೆಗಳು.

(1) ಒಂದು ದಿನಕ್ಕೆ 24 ಗಂಟೆಗಳಾದರೆ 4 ದಿನಗಳಿಗೆ ಎಷ್ಟು ಗಂಟೆಗಳು ?

(2) ಒಂದು ವರ್ಷಕ್ಕೆ 52 ವಾರಗಳಾದರೆ 4 ವರ್ಷಗಳಿಗೆಷ್ಟು ವಾರಗಳು ?



(3) ABCD ಎಂಬುದು ಒಂದು ಪಟ್ಟದ ಚೌಕಟ್ಟು. ಪಟ್ಟಿಗಳ ಅಳತೆಗಳನ್ನು ಪಕ್ಕದಲ್ಲಿ ಕೊಟ್ಟಿದೆ. ಈ ಚೌಕಟ್ಟನ್ನು ಮಾಡಬೇಕಾದರೆ ಎಷ್ಟು ಉದ್ದ ಪಟ್ಟಿ ಬೇಕು ?

(4) ಒಂದು ನೋಟುಬುಕ್ಕಿನಲ್ಲಿ 128 ಪುಟಗಳಿದ್ದರೆ 4 ನೋಟುಬುಕ್ಕುಗಳಲ್ಲಿ ಎಷ್ಟು ಪುಟಗಳಿವೆ?

(5) ಒಂದು ಫರ್ಲಾಂಗಿಗೆ 220 ಗಜಗಳಾದರೆ 4 ಫರ್ಲಾಂಗುಗಳಿಗೆ ಎಷ್ಟು ಗಜಗಳು ?

(6) ಒಂದು ಖಂಡುಗಕ್ಕೆ 240 ಸೇರುಗಳಾದರೆ 4 ಖಂಡುಗಗಳಿಗೆ ಎಷ್ಟು ಸೇರುಗಳು ?

(7) ಒಂದು ಮನೆಯ ಬೆಲೆಯು 1225 ರೂ. ಗಳಾದರೆ ಇಂತಹ 4 ಮನೆಗಳಿಗೆ ಎಷ್ಟು ರೂ. ಗಳ ಬೆಲೆ ?

(8) ಒಂದು ಪುಟದಲ್ಲಿ 2253 ಅಕ್ಷರಗಳಿದ್ದರೆ ಇಂತಹ 4 ಪುಟಗಳಲ್ಲಿ ಎಷ್ಟು ಅಕ್ಷರಗಳಿವೆ ?

ಇವುಗಳನ್ನು 4 ರಿಂದ ಗುಣಿಸು:—

(9) 236. (10) 326. (11) 623. (12) 1246.
(13) 6435. (14) 45,678. (15) 36 471.

30 ನೆಯ ಅಭ್ಯಾಸ.

ಗುಣಕ 5.

1 ರೂಪಾಯಿ=192 ಕಾಸುಗಳು. 1 ರೂಪಾಯಿ=32 ಅರ್ಧಾಣೆಗಳು. 1 ವರ್ಷ=365 ದಿನಗಳು.

(1) ಒಂದು ರೂಪಾಯಿಗೆ 32 ಅರ್ಧಾಣೆಗಳಾದರೆ 5 ರೂ. ಗಳಿಗೆ ಎಷ್ಟು ಅರ್ಧಾಣೆಗಳು?

(2) ಒಂದು ಪೆಟ್ಟಿಗೆಯಲ್ಲಿ 144 ಟಾಕುಗಳಿದ್ದರೆ 5 ಪೆಟ್ಟಿಗೆಗಳಲ್ಲಿ ಎಷ್ಟು ಇವೆ?

(3) ಒಂದು ರೂಪಾಯಿಗೆ 192 ಕಾಸುಗಳಾದರೆ 5 ರೂ. ಗಳಿಗೆ ಎಷ್ಟು ಕಾಸುಗಳು?

(4) ಒಂದು ವರ್ಷಕ್ಕೆ 365 ದಿನಗಳಾದರೆ 5 ವರ್ಷಗಳಿಗೆ ಎಷ್ಟು ದಿನಗಳು?

(5) ಒಬ್ಬನಿಗೆ ಒಂದು ತೋಟದಲ್ಲಿ ವರ್ಷಕ್ಕೆ 479 ರೂಪಾಯಿಗಳ ಪ್ರಕಾರ ಲಾಭ ಸಿಕ್ಕಿದರೆ 5 ವರ್ಷಗಳಲ್ಲೆಷ್ಟು ಸಿಕ್ಕುವುದು?

(6) ಒಂದು ಪುಸ್ತಕದಲ್ಲಿ 578 ಪುಟಗಳಿವೆ. ಇಂತಹ 5 ಪುಸ್ತಕಗಳಲ್ಲಿ ಎಷ್ಟು ಪುಟಗಳಿವೆ?

(7) ಒಂದು ಮನೆಗೆ 1225 ರೂ. ಗಳಾದರೆ ಇಂತಹ 5 ಮನೆಗಳಿಗೆ ಎಷ್ಟು ರೂ. ಗಳು?

(8) ಒಂದು ದೇವಸ್ಥಾನಕ್ಕೆ 2925 ರೂ. ಗಳ ತಸ್ತೀಕು ಇದೆ. 5 ದೇವಸ್ಥಾನಗಳಿಗೆ ಇದೇ ಮೇರೆ ತಸ್ತೀಕುಗಳಿದ್ದರೆ ಒಟ್ಟು ಎಷ್ಟು ರೂ. ಗಳಾದುವು?

ಇವುಗಳನ್ನು 5 ರಿಂದ ಗುಣಿಸು:—

(9) 253. (10) 412. (11) 978. (12) 3015.
(13) 6293. (14) 79,609. (15) 97,096.

ಗುಣಕ 6.

31 ನೆಯ ಅಭ್ಯಾಸ.

1 ವರ್ಷ=12 ತಿಂಗಳು. 1 ಮೈಲಿ=1760 ಗಜಗಳು.


(1) ಒಂದೊಂದು ಸರದಲ್ಲಿ 108 ಮಣಿಗಳಿದ್ದರೆ 6 ಸರಗಳಲ್ಲಿ ಒಟ್ಟು ಎಷ್ಟು ಮಣಿಗಳಿವೆ ?

(2) ತಿಂಗಳಿಗೆ 125 ರೂ. ಗಳಂತೆ ಮೊದಲು 6 ತಿಂಗಳೂ, 148 ರೂ. ಗಳಂತೆ ಮಿಕ್ಕ 6 ತಿಂಗಳೂ ವೆಚ್ಚವಾದರೆ ವರ್ಷದಲ್ಲಿ ಎಷ್ಟು ರೂ. ಗಳು ವೆಚ್ಚವಾದುವು ?

(3) ಒಂದು ಪಟದಲ್ಲಿ 144 ತಗಡಿನ ಗುಂಡಿಗಳಿವೆ. 6 ಪಟಗಳಲ್ಲಿ ಎಷ್ಟು ಗುಂಡಿಗಳಿವೆ ?

(4) ಒಂದು ಸಂಸಾರಕ್ಕೆ ತಿಂಗಳಿಗೆ 175 ರೂ. ಗಳು ಬೇಕು. 6 ತಿಂಗಳಿಗೆ ಎಷ್ಟು ಬೇಕಾಗುವುದು ?

(5) i. ಪಕ್ಕದಲ್ಲಿ ಒಂದು ಮನೆಯ ನಕ್ಷೆ ಇದೆ. ಅಳತೆಗಳನ್ನು ಅಡಿಗಳಲ್ಲಿ ಕೊಟ್ಟಿದೆ. ಆ ಮನೆಯ ಸುತ್ತಳತೆ ಎಷ್ಟು ಅಡಿಗಳು.



ii. ನೀರು ಹೋಗುವ ಪಕ್ಕ ಮನೆಯ ಸುತ್ತಲೂ ದೋಣಿಗಳನ್ನು ಹಾಕಲು ಅಡಿ ಒಂದಕ್ಕೆ 6 ಕಾಸುಗಳು ಇದ್ದರೆ ಎಷ್ಟು ಕಾಸುಗಳು ಬೇಕಾಗುತ್ತವೆ?

(6) ಒಂದು ಮೈಲಿಗೆ 1,760 ಗಜಗಳಾದರೆ 6 ಮೈಲಿಗಳಿಗೆ ಎಷ್ಟು ಗಜಗಳು ?

(7) ಒಂದು ಪಾಠಶಾಲೆಗೆ ವರ್ಷಕ್ಕೆ 4,386 ರೂ. ಗಳು ಬೇಕಾದರೆ 6 ವರ್ಷಗಳಿಗೆ ಎಷ್ಟು ಬೇಕಾಗುವುದು ?

ಇವುಗಳನ್ನು 6 ರಿಂದ ಗುಣಿಸು :—

(8) 405 (9) 4105 (10) 5104 (11) 5234 (12) 12,345 (13) 30,405 (14) 54,321 (15) 98,765.

ಗುಣಕ 7.

32 ನೆಯ ಅಭ್ಯಾಸ.

1 ವಾರ=7 ದಿನಗಳು.

(1) 1ದಿನಕ್ಕೆ 24 ಗಂಟೆಗಳಾದರೆ 1 ವಾರಕ್ಕೆ ಎಷ್ಟು ಗಂಟೆಗಳು?

(2) ಚಕ್ರ ಒಂದು ಬಾರಿ ಉರುಳಲು ಬಂಡಿ 38 ಅಡಿಗಳ ದೂರ ಸಾಗುವುದು. ಚಕ್ರವು 7 ಬಾರಿ ಉರುಳಿದರೆ ಬಂಡಿಯು ಎಷ್ಟು ಅಡಿಗಳ ದೂರ ಸಾಗುವುದು ?

(3) ಒಂದು ಮರದ ಪೆಟ್ಟಿಗೆಗೆ 55 ರೂ. ಗಳಾದರೆ ಅಂತಹ 7 ಪೆಟ್ಟಿಗೆಗಳಿಗೆ ಎಷ್ಟು ?

(4) ನನ್ನಲ್ಲಿ 125 ರೂ. ಗಳಿವೆ ರಾಮುನಲ್ಲಿ ನನ್ನಲ್ಲಿರುವುದರ 7 ರಷ್ಟು ಇದೆ. ನಮ್ಮಿಬ್ಬರಲ್ಲಿ ಒಟ್ಟು ಎಷ್ಟು ರೂ. ಗಳಿವೆ ?

(5) ಒಂದೊಂದು ಬೀರುವಿನಲ್ಲಿ 193 ಪುಸ್ತಕಗಳಂತೆ 7 ಬೀರುಗಳಲ್ಲಿ ಪುಸ್ತಕಗಳನ್ನಿಟ್ಟರೆ ಒಟ್ಟು ಎಷ್ಟು ಪುಸ್ತಕಗಳಾದುವು ?

(6) i. ಒಂದೊಂದು ಹುಲ್ಲುಗಾವಲಿನಲ್ಲಿ 225 ಹಸುಗಳಿವೆ. ಈ ಮೇರೆ 7 ಹುಲ್ಲುಗಾವಲುಗಳಲ್ಲಿ ಎಷ್ಟು ಹಸುಗಳಿವೆ ?

ii. ಒಂದೊಂದು ಹಸು 6 ಸೇರು ಹಾಲನ್ನು ಕೊಡುತ್ತಿದ್ದರೆ ಒಟ್ಟಿಗೆಷ್ಟು ಸೇರು ಹಾಲು ಆಗುವುದು ?

(7) ಒಂದು ದಿನಕ್ಕೆ 1440 ಮಿನಿಟುಗಳಾದರೆ 7 ದಿನಗಳಿಗೆಷ್ಟು ಮಿನಿಟ್ಟುಗಳು ?

ಇವುಗಳನ್ನು 7 ರಿಂದ ಗುಣಿಸು.

(8) 112 (9) 898 (10) 1,122 (11) 2,021 (12) 5,487 (13) 20,465 (14) 31,987 (15) 91,919.

ಗುಣಕ 8.

33 ನೆಯ ಅಭ್ಯಾಸ.

1 ಮೈಲಿ=8 ಫರ್ಲಾಂಗುಗಳು.

(1) ಒಂದು ಕಂಬಳಿಗೆ 23 ರೂ. ಗಳು. ಇಂತಹ 8 ಕಂಬಳಿಗಳಿಗೆ ಎಷ್ಟು ರೂ. ಗಳು?

(2) ಒಂದು ಆಣೆಗೆ 84 ಸಂಪಗೆಹೂವುಗಳು ಬಂದರೆ 8 ಆಣೆಗಳಿಗೆ ಎಷ್ಟು ಹೂವುಗಳು ಬರುತ್ತವೆ?

(3) ಒಂದು ಗಣಿತದಲ್ಲಿ 208 ಪುಟಗಳಿವೆ. 8 ಗಣಿತಗಳಲ್ಲಿ ಎಷ್ಟು ಪುಟಗಳಿವೆ?

(4) ಒಂದು ಫರ್ಲಾಂಗಿಗೆ 220 ಗಜಗಳಾದರೆ 1 ಮೈಲಿಗೆ ಎಷ್ಟು ಗಜಗಳು?

(5) ಒಂದು ಸೇರು ಬಂಗಾರಕ್ಕೆ 772 ರೂ. ಗಳಾದರೆ 8 ಸೇರುಗಳಿಗೆ ಎಷ್ಟು ರೂ. ಗಳು?

(6) ಒಂದು ಆನೆಗೆ 995 ರೂ. ಗಳಂತೆ 8 ಆನೆಗಳನ್ನು ಕೊಂಡುಕೊಳ್ಳಬೇಕಾದರೆ ಎಷ್ಟು ರೂ. ಗಳು ಬೇಕು?

(7) ಒಂದು ಮುತ್ತಿನ ಸರಕ್ಕೆ 1225 ರೂ. ಗಳಾದರೆ ಇಂತಹ 8 ಸರಗಳಿಗೆ ಎಷ್ಟು?

ಇವುಗಳನ್ನು 8 ರಿಂದ ಗುಣಿಸು:—

(8) 625 (9) 736 (10) 1207 (11) 2345 (12) 4053 (13) 5678 (14) 31,987 (15) 67,776.

ಗುಣಕ 9.

34 ನೆಯ ಅಭ್ಯಾಸ.

1 ಗಂಟೆ=3600 ಸೆಕಂಡುಗಳು. 1 ಮೈಲು=5280 ಅಡಿಗಳು.

(1) ಒಂದು ಸರದಲ್ಲಿ 64 ಮಣಿಗಳಿವೆ. ಇಂತಹ 9 ಸರಗಳಲ್ಲಿ ಎಷ್ಟು ಮಣಿಗಳಿವೆ?

(2) ಒಂದು ಕೊಳದಲ್ಲಿ 9 ಸಾಲು ಮೆಟ್ಟಲುಗಳಿವೆ. ಒಂದೊಂದು ಸಾಲಿಗೆ 75 ಕಲ್ಲುಗಳಿವೆ. ಹಾಗಾದರೆ ಒಟ್ಟೆಷ್ಟು ಕಲ್ಲುಗಳಿವೆ?

(3) ಒಂದು ರಾಶಿಯಲ್ಲಿ 225 ತೆಂಗಿನಕಾಯಿಗಳಿವೆ. ಇಂತಹ 9 ರಾಶಿಗಳಲ್ಲಿ ಎಷ್ಟು ಕಾಯಿಗಳಿವೆ?

(4) ಒಂದು ಪುಟದಲ್ಲಿ 841 ಅಕ್ಷರಗಳಿದ್ದರೆ 9 ಪುಟಗಳಲ್ಲೆಷ್ಟು?

(5) ಒಂದು ಕೆರೆಯ ಸುತ್ತಳತೆ 3568 ಗಜಗಳಾದರೆ ಆ ಕೆರೆಯನ್ನು 9 ಜಾರಿ ಸುತ್ತಿದರೆ ಎಷ್ಟು ನಡೆದಂತಾಗುವುದು?

(6) ಒಂದು ಗಂಟೆಗೆ 360 ಸೆಕೆಂಡುಗಳಾದರೆ 9 ಗಂಟೆಗಳಿಗೆಷ್ಟು ಸೆಕಂಡುಗಳು?

(7) ಒಂದು ಮೈಲಿಗೆ 5280 ಅಡಿಗಳಾದರೆ 9 ಮೈಲಿಗೆಷ್ಟು ಅಡಿ?

ಇವುಗಳನ್ನು 9 ರಿಂದ ಗುಣಿಸು;—

(8) 810, (9) 1,819 (10) 2,345, (11) 8,765 (12) ೪,378 (13) 19,293 (14) 88.888 (15) 97,634

ಗುಣಕ 10.

1 23×10 ಎಷ್ಟು ?

123	30, 3,
10	23, 2,
1230	12
	123×10=1230.

35 ನೆಯ ಅಭ್ಯಾಸ

(1) ಸಾಲಿಗೆ 75 ಹುಡುಗರಂತೆ ನಿಲ್ಲಿಸಿದರೆ 10 ಸಾಲುಗಳಲ್ಲಿ ಎಷ್ಟು ಹುಡುಗರಿದಾರೆ ?

(2) ನನ್ನಲ್ಲಿ 134 ಹತ್ತು ರೂ. ನೋಟುಗಳಿವೆ. ಇವುಗಳಲ್ಲಿ ಎಷ್ಟು ರೂ. ಗಳು ಬರುತ್ತವೆ ?

(3) ಒಂದು ಬಿಸಿಕ್ಲಿ 225 ಮೈಲಿಗಳಂತೆ 10 ದಿನಗಳು ರೈಲಿನಲ್ಲಿ ಪ್ರಯಾಣವಾಡಿದರೆ ಎಷ್ಟು ಮೈಲಿ ಪ್ರಯಾಣವಾಡಿದಂತಾಯಿತು ?

(4) ಒಂದು ಚೀಲದಲ್ಲಿ 750 ರೂ. ಗಳಿವೆ. ಇಂತಹ 10 ಚೀಲಗಳಲ್ಲಿ ಎಷ್ಟಿರುವುವು ?

(5) ಒಂದು ಅಗ್ರಹಾರದಲ್ಲಿ 10 ಮನೆಗಳಿವೆ. ಮನೆಗೆ 1345 ರೂ. ಗಳ ಪ್ರಕಾರ ವೆಚ್ಚವಾಗಿದ್ದರೆ ಒಟ್ಟಿಗೆಷ್ಟಾಗಿದೆ ?

(6) ಒಂದು ಪೆಟ್ಟಿಗೆಯಲ್ಲಿ 7682 ದಸ್ತು ಕಾಗದವಿದ್ದರೆ 10 ಪೆಟ್ಟಿಗೆಗಳಲ್ಲೆಷ್ಟು ?

(7) ಒಬ್ಬ ವರ್ತಕನು ವರ್ಷ ಒಂದಕ್ಕೆ 12,345 ರೂ. ಗಳಂತೆ 10 ವರ್ಷಗಳು ಸಂಪಾದಿಸಿದನು. ಹಾಗಾದರೆ ಒಟ್ಟು ಎಷ್ಟು ಸಂಪಾದಿಸಿದನು?

ಇವುಗಳನ್ನು 10 ರಿಂದ ಗುಣಿಸು :—

(8) 284 (9) 678 (10) 4567 (11) 7654 (12) 21 345 (13) 51,234 (14) 71,707 (15) 91,909

ಗುಣ್ಯದ ಮುಂದೆ ಒಂದು ಸೊನ್ನೆಯನ್ನು ಸೇರಿಸಿದರೆ ಬರುವ ಸಂಖ್ಯೆಯು 10 ರಿಂದ ಗುಣಿಸಿದ ಫಲವು ಆಗುವುದು.

ಮಿಶ್ರೋದಾಹರಣೆಗಳು.

36 ನೆಯ ಅಭ್ಯಾಸ.

A

(1) i. 13+13+13+13+13+13+13+13+13 =13× ಎಷ್ಟು?

25+25+25+25+25+25+25=25× ಎಷ್ಟು?

36+36+36+36+36+36+36+36= 36× ಎಷ್ಟು?

ii. ಮೊತ್ತವನ್ನೂ ಬರೆಯಿರಿ.

(2) 87 ನ್ನು 8 ರಿಂದ ಗುಣಿಸು. ಬಂದ ಫಲಕ್ಕೆ 78 ನ್ನು ಸೇರಿಸು.

(3) 73 ನ್ನು 3 ರಿಂದ ಗುಣಿಸು. 37 ನ್ನು 4 ರಿಂದ ಗುಣಿಸು. ಬಂದ ಫಲಗಳನ್ನು ಕೂಡು. ಎಷ್ಟು ಬರುವುದು?

48×5 ಮತ್ತು 76×3 ರಲ್ಲಿ ಯಾವುದು ದೊಡ್ಡದು? ಇವುಗಳ ವ್ಯತ್ಯಾಸವೆಷ್ಟು?

(5) 67×9 ಕ್ಕೂ ಮತ್ತು 76×9 ಕ್ಕೂ ಇರುವ ವ್ಯತ್ಯಾಸವೆಷ್ಟು? ಈ ವ್ಯತ್ಯಾಸವನ್ನು 4 ರಿಂದ ಗುಣಿಸು.

(6) i. 73+37 ಎಷ್ಟು? 73-37 ಎಷ್ಟು? ಈ ಮೊತ್ತವನ್ನೂ ಮತ್ತು ವ್ಯತ್ಯಾಸವನ್ನೂ ಗುಣಿಸು.

ii. ಬಂದ ಫಲವನ್ನು 7 ರಿಂದ ಗುಣಿಸು.

(7) 13 ಆಣೆ×2+13 ಆ. ×5=13 ಆ. ×7,

27 ಕಾಸು×4+27 ಕಾ. ×3=27 ಕಾ. ×7,

32×3+32×5=32×8,

45×4+45×6=45×10 ಎಂದು ತೋರಿಸು.

(8) 9×4+9×3=9× ಎಷ್ಟು?

11×6+11×4=11× ಎಷ್ಟು?

12×5+12×3=12× ಎಷ್ಟು?

14×4+14×5=14× ಎಷ್ಟು ?
16×2+16×8=16× ಎಷ್ಟು ?

(9) 99×4=(100×4)–4,
99×5=(100×5)–5,
99×6=(100×6)–6,
99×8=(100×8)–8 ಎಂದು ತೋರಿಸು.

(10) 999×4=(1000×4)–4,
9999×7=(10,000×7)–7,
99,999×9=(1,00,000×9)–9 ಎಂದು ತೋರಿಸು.

ಗುಣ್ಯದಲ್ಲಿ ಎಲ್ಲಾ 9 ಗಳೇ ಇದ್ದರೆ ಈ ರೀತಿಯಲ್ಲಿ ಸುಲಭವಾಗಿ ಫಲವನ್ನು ಕಂಡು ಹಿಡಿಯಬಹುದು:—ಗುಣ್ಯದಲ್ಲಿ ಎಷ್ಟು 9 ಗಳು ಇವೆಯೋ ಅಷ್ಟು ಸೊನ್ನೆಗಳನ್ನು ಗುಣಕದ ಮುಂದೆ ಹಾಕುವುದು. ಆಮೇಲೆ ಹೀಗೆ ಬಂದ ಸಂಖ್ಯೆಯಲ್ಲಿ ಗುಣಕವನ್ನು ಕಳೆಯುವುದು. ಬರುವ ಶೇಷವೇ ಫಲ.

B

(1) i. 345+345+345+345+345+345=345× ಎಷ್ಟು ?
1234+1234+1234+1234+1234=1234× ಎಷ್ಟು ?
12,345+12,345+12,345+12,345+12,345× 12 345=12,345× ಎಷ್ಟು ?

ii. ಮೊತ್ತವನ್ನೂ ಬರೆ.

(2) 38 ರೂ. ×2+83 ರೂ. =ಎಷ್ಟು ?
125×5+75×6=ಎಷ್ಟು ?
325×8–128=ಎಷ್ಟು ?
426×9–208×8=ಎಷ್ಟು ?

(3) 18ರೂ. ×6+18ರೂ. ×9=18 ರೂ. ×10+18ರೂ.×5.
75 ಆ. ×9+75 ಆ. ×8=75 ಆ. ×10+75 ಆ.×7.

$117 \times 7 + 117 \times 6 = 117 \times 10 + 117 \times 3.$
$225 \times 6 + 225 \times 9 = 225 \times 10 + 225 \times 5$ ಎಂದು
ತೋರಿಸು.

(4) 14 ರೂ. × 6–11 ರೂ. × 3=ಎಷ್ಟು?
18 ಆ. × 5–12 ಆ. × 4=ಎಷ್ಟು?
$75 \times 9 - 62 \times 8 =$ ಎಷ್ಟು ?
$123 \times 7 - 26 \times 6 =$ ಎಷ್ಟು?

(5) $75 \times 3 + 75 \times 4 = 75 \times 7,$
$125 \times 6 + 125 \times 4 = 125 \times 10,$
$225 \times 4 + 225 \times 5 = 225 \times 9$ ಎಂದು ತೋರಿಸು.

(6) $25 \times 4 + 25 \times 3 = 25 \times$ ಎಷ್ಟು ?
$125 \times 5 + 125 \times 4 = 125 \times$ ಎಷ್ಟು ?
$225 \times 6 + 225 \times 3 = 225 \times$ ಎಷ್ಟು ?

ಬಂದ ಸಂಖ್ಯೆಯು ಸರಿ ಎನ್ನುವದನ್ನು ಗುಣಾಕಾರಮಾಡಿ ತೋರಿಸು.


(7) $(9 \times 9) — (2 \times) 2 = (9 + 2) \times (9 - 2)$
$(8 \times 8) — (3 \times) 3 = (8 + 3) \times (8 - 3)$
$(7 \times 7) — (4 \times) 4 = (7 + 4) \times (7 - 4)$ ಎಂದು ತೋರಿಸು.

(8) $1 + 2 + 3 + 4 + 5 = 5 \times 3,$
$1 + 2 + 3 + 4 + 5 + 6 + 7 = 7 \times 4,$
$1 + 2 + 3 + 4 + 5 + 6 + 7 + 8 + 9 = 9 \times 5,$
$1 + 2 + 3 + 4 + 5 + 6 + 7 + 8 + 9 \times 10 + 11$
$= 11 \times 6$ ಎಂದು ತೋರಿಸು.

(9) $1 + 3 + 5 + 7 = 4 \times 4,$
$1 + 3 + 5 + 7 + 9 = 5 \times 5,$
$1 + 3 + 5 + 7 + 9 + 11 = 6 \times 6,$
$1 + 3 + 5 + 7 + 9 + 11 + 13 = 7 \times 7$ ಎಂದು ತೋರಿಸು.

(10) $102 \times 6 = 100 \times 6 + 2 \times 6,$
$1004 \times 7 = 1000 \times 7 + 4 \times 7,$
$10,008 \times 9 = 10,000 \times 9 + 8 \times 9$ ಎಂದು ತೋರಿಸು.


ಗುಣಿಸಿ ಬಂದ ಫಲವು ಪ್ರಾಯಶಃ ಸರಿಯೋ ಎನ್ನುವುದನ್ನು ನೋಡುವ ಬಗೆ :—ಗುಣಾಕಾರದ ಲೆಕ್ಕವನ್ನು ಮಾಡಿದಮೇಲೆ ಬಂದಿರುವ ಉತ್ತರವು ಪ್ರಾಯಶಃ ಸರಿಯೋ ಇಲ್ಲವೆ ಎಂಬುದನ್ನು ಈಕೆಳಗೆ ಹೇಳಿರುವ ರೀತಿಯಿಂದ ತಿಳಿದುಕೊಳ್ಳಬಹುದು.



ಪಕ್ಕದಲ್ಲಿ ಹಾಕಿರುವ ಹಾಗೆ ಎರಡು ಗೀಟುಗಳನ್ನು ಹಾಕು. ಗುಣ್ಯದ ಅಂಕಗಳಲ್ಲಿ 9 ಗಳು ಇದ್ದರೆ ಬಿಟ್ಟುಬಿಟ್ಟು ಮಿಕ್ಕ ಅಂಕಗಳನ್ನು ಕೂಡು. ಹೀಗೆ ಕೂಡುವಾಗ ಯಾವಯಾವಾಗ ಮೊತ್ತವು 8 ಕ್ಕಿಂತ ಹೆಚ್ಚಾಗಿ ಆಗುತ್ತದೆಯೋ ಆಗ 9 ನ್ನು ಕಳೆ. ಹಾಗೆ ಕಳೆದಮೇಲೆ ಉಳಿದುದನ್ನು ಮೇಲ್ಗಡೆ (A) ಎಂಬ ಕಡೆಯಲ್ಲಿ ಬರೆ. ಅಂಕಗಳ ಒಟ್ಟು 9 ಕ್ಕಿಂತ ಕಡಿಮೆಯಾಗಿದ್ದರೆ ಅದನ್ನೇ ಅಲ್ಲಿ ಬರೆ. ಹೀಗೆಯೇ ಗುಣಕದಲ್ಲಿರುವ ಅಂಕಗಳಿಗೂ ಮಾಡಿ ಬಂದುದನ್ನು ಕೆಳಗೆ (B) ಎಂಬ ಕಡೆ ಬರೆ. ಇವೆರಡನ್ನೂ ಗುಣಿಸಿ ಬಂದ ಫಲಕ್ಕೂ ಮೇಲಿನ ರೀತಿಯಾಗಿ ಶೇಷವನ್ನು ಕಂಡುಹಿಡಿ. ಎಡಗಡೆ (D) ಎಂಬ ಕಡೆಯಲ್ಲಿ ಅದನ್ನು ಬರೆ. ಕೊಟ್ಟಿರುವ ಗುಣಾಕಾರ ಲೆಕ್ಕದ ಫಲಕ್ಕೂ ಮೇಲೆ ಹೇಳಿದ ಹಾಗೆಯೇ ಶೇಷವನ್ನು ಕಂಡುಹಿಡಿ. ಬಲಗಡೆ ಅದನ್ನು (C) ಎಂಬ ಕಡೆಯಲ್ಲಿ ಬರೆ. ಈಗ (C), (D) ಎಂಬ ಕಡೆಗಳಲ್ಲಿರುವ ಅಂಕಗಳು ಸಮವಾಗಿದ್ದರೆ ಬಂದಿರುವ ಉತ್ತರವು **ಪ್ರಾಯಶಃ ಸರಿ**. ಹಾಗೆ ಸಮವಾಗಿಲ್ಲದೆ ಇದ್ದರೆ **ಖಂಡಿತವಾಗಿಯೂ ತಪ್ಪು.**

ಈಗ 1765×7=12,355.

ಮೇಲೆ ಹೇಳಿದಹಾಗೆ ಗುಣ್ಯದಿಂದ ಬಂದ ಶೇಷ 1, ಗುಣಕದಿಂದ ಬಂದುದು 7, ಇವುಗಳ ಫಲದಿಂದ ಬಂದುದು 7; 12,355 ರಿಂದ ಬಂದುದು 7.



ಉತ್ತರವು ಪ್ರಾಯಶಃ ಸರಿ.

37 ನೆಯ ಅಭ್ಯಾಸ.

ಮೇಲೆ ಹೇಳಿದ ರೀತಿಯಾಗಿ ಈ ಕೆಳಗಿನ ಲೆಕ್ಕಗಳ ಫಲಗಳು ಸರಿಯೋ ಎನ್ನುವದನ್ನು ನೋಡು: —

(1) 12,345×5	(6) 6789×10
(2) 23,451×4	(7) 3009×3
(3) 3456×7	(8) 90,901×2
(4) 4567×8	(9) 40,503×6
(5) 5778×9	(10) 4680×10

ಗುಣಕ 11.

1135×11 ಎಷ್ಟು ?

1135	55, 5 ;
11	38, 3 ;
12,485	14, 1 ;
	12

1135 × 11 = 12,485.

38 ನೆಯ ಅಭ್ಯಾಸ.

(1) ಒಂದು ಗೋಡೆಯಲ್ಲಿ ಕಲ್ಲುಗಳ ಸಾಲು 11 ಇವೆ. ಒಂದೊಂದು ಸಾಲಿನಲ್ಲಿ 45 ಕಲ್ಲುಗಳಿದ್ದರೆ ಒಟ್ಟಿಷ್ಟು ಕಲ್ಲುಗಳಿವೆ ?

(2) ಒಂದು ರೂಪಾಯಿಗೆ 48 ದುಡ್ಡುಗಳಾದರೆ 11 ರೂ.ಗಳಿಗೆ ಎಷ್ಟು ದುಡ್ಡುಗಳು ?

(3) ಒಂದು ಪುಟದಲ್ಲಿ 145 ಅಕ್ಷರಗಳಿದ್ದರೆ, 11 ಪುಟಗಳಲ್ಲಿ ಎಷ್ಟು ಅಕ್ಷರಗಳಿವೆ?

(4) ಒಂದು ಬೀರುವಿನಲ್ಲಿ 195 ಪುಸ್ತಕಗಳಿವೆ. ಇಂಥ 11 ಬೀರುಗಳಲ್ಲಿ ಎಷ್ಟು ಪುಸ್ತಕಗಳಿವೆ?

(5) ಒಂದು ವರ್ಷಕ್ಕೆ 365 ದಿನಗಳಾದರೆ 11 ವರ್ಷಗಳಿಗೆ ಎಷ್ಟು ದಿನಗಳು ?

(6) ಒಂದು ಕಟ್ಟಿನಲ್ಲಿ 480 ಗಜಗಳು ಕಾಗದವಿದ್ದರೆ, 11 ಕಟ್ಟುಗಳಲ್ಲಿ ಎಷ್ಟು ಗಜಗಳು ಕಾಗದವಿದೆ?

ಇವುಗಳನ್ನು 11 ರಿಂದ ಗುಣಿಸು :—

(7) 121 (8) 498 (9) 1331 (10) 10,203 (11) 19198 (12) 91,912

ಗುಣಕ 12.

39 ನೆಯ ಅಭ್ಯಾಸ.

1 ವರ್ಷ=12 ತಿಂಗಳು, 1 ಡಜನ್=12.

1 ಮೈಲು=1760 ಗಜಗಳು.

(1) ದುಡ್ಡಿಗೆ 25 ಬೆಂಡೆ ಬಿತ್ತಗಳು ಬಂದರೆ, 12 ದುಡ್ಡುಗಳಿಗೆ ಎಷ್ಟು ಬಿತ್ತಗಳು ಬರುತ್ತವೆ?

(2) ಒಂದು ಬುಟ್ಟಿಯಲ್ಲಿ 72 ಹಣ್ಣುಗಳಿವೆ. 1 ಡಜನ್ ಬುಟ್ಟಿಗಳಲ್ಲಿ ಎಷ್ಟು ಹಣ್ಣುಗಳಿವೆ?

(3) ಒಂದು ದಾರದ ಉಂಡೆಯಲ್ಲಿ 115 ಅಂಗುಲಗಳ ಉದ್ದ ದಾರವಿದೆ. 12 ಉಂಡೆಗಳಲ್ಲಿ ಎಷ್ಟು ಉದ್ದ ದಾರವಿದೆ?

(4) 1 ತಿಂಗಳಿಗೆ ಒಬ್ಬನಿಗೆ 225 ರೂ. ಬಂದರೆ, 1 ವರ್ಷದಲ್ಲಿ ಎಷ್ಟು ಬರುತ್ತದೆ?

(5) 1 ಸೇರು ಚಿನ್ನಕ್ಕೆ 672 ರೂ. ಗಳಾದರೆ, 12 ಸೇರುಗಳಿಗೆ ಎಷ್ಟು?

(6) 1 ಮೈಲಿಗೆ 1760 ಗಜಗಳಾದರೆ, 12 ಮೈಲಿಗಳಿಗೆ ಎಷ್ಟು ಗಜಗಳು?

ಇವುಗಳನ್ನು 12 ರಿಂದ ಗುಣಿಸು :—

(7) 125 (8) 395 (9) 909

(10) 1234 (11) 7098 (12) 19,786

ಗುಣಕ 13.

40 ನೆಯ ಅಭ್ಯಾಸ.

(1) ಒಂದು ತರಗತಿಯಲ್ಲಿ 13 ಹುಡುಗರಿದ್ದಾರೆ. ಒಬ್ಬೊಬ್ಬನಿಗೆ 35 ಗಜಗಳಂತೆ ಪರೀಕ್ಷೆಗೆ ಕಾಗದ ಬೇಕಾದರೆ ಒಟ್ಟಿಷ್ಟು ಗಜಗಳು ಕಾಗದ ಬೇಕು ?

(2) ಬೆಂಗಳೂರು ಸೀರೆ ಒಂದಕ್ಕೆ 42 ರೂ. ಗಳಾದರೆ, 13 ಸೀರೆಗಳಿಗೆ ಎಷ್ಟು ?

(3) ಒಂದು ತೋಟದಲ್ಲಿ ಸಾಲಿಗೆ 45 ತೆಂಗಿನ ಮರಗಳಂತೆ 13 ಸಾಲುಗಳು ಇವೆ. ಒಟ್ಟು ಎಷ್ಟು ಮರಗಳಿವೆ?

(4) ಒಂದು ಟೆಲಿಗ್ರಾಫ್ ಕಂಬದಿಂದ ಮತ್ತೊಂದಕ್ಕೆ 132 ಅಡಿ ದೂರವಿದೆ. 14 ಕಂಬಗಳ ಮಧ್ಯೆ ಎಷ್ಟು ದೂರವಿದೆ ?

(5) ಒಂದು ಕಬ್ಬಿಣದ ಪೆಟ್ಟಿಗೆಗೆ 215 ರೂ. ಗಳಾದರೆ, ಇಂತಹ 13 ಪೆಟ್ಟಿಗೆಗಳಿಗೆ ಎಷ್ಟು ?

(6) ಒಂದು ದಿನಕ್ಕೆ 1440 ಮಿನಿಟುಗಳಾದರೆ, 13 ದಿನಗಳಿಗೆ ಎಷ್ಟು ಮಿನಿಟುಗಳು ?

ಇವುಗಳನ್ನು 13 ರಿಂದ ಗುಣಿಸು :—

(7) 346 (8) 5294 (9) 7685

(10) 9873 (11) 14,578 (12) 57,863.

ಗುಣಕ 14.

41 ನೆಯ ಅಭ್ಯಾಸ.

1 ವಾರ=7 ದಿನಗಳು.

(1) 1 ದಿನಕ್ಕೆ 24 ಗಂಟೆಗಳಾದರೆ 2 ವಾರಗಳಿಗೆ ಎಷ್ಟು ಗಂಟೆಗಳು ?

(2) 1 ದಿನಕ್ಕೆ 65 ಸೇರಿನಂತೆ ಬತ್ತವನ್ನು ಕುಟ್ಟಿದರೆ, 2 ವಾರಗಳಲ್ಲಿ ಎಷ್ಟು ಸೇರು ಬತ್ತವನ್ನು ಕುಟ್ಟಬಹುದು ?

(3) ಮೈಸೂರಿನಿಂದ ಬೆಂಗಳೂರಿಗೆ 86 ಮೈಲಿಗಳು. 7 ಸಲ ಹೋಗಿ ಬಂದರೆ ಎಷ್ಟು ಮೈಲಿಗಳನ್ನು ಪ್ರಯಾಣಮಾಡಿದ ಹಾಗಾಯಿತು?

(4) ಒಂದು ಕಬ್ಬಿಣದ ಗಾಣಕ್ಕೆ 116 ರೂ. ಗಳಾದರೆ, 14 ಗಾಣಗಳಿಗೆ ಎಷ್ಟು ರೂ. ಗಳು ?

(5) ಒಂದು ಪೆಟ್ಟಿಗೆಯಲ್ಲಿ 144 ಟಾಕುಗಳಂತೆ, 14 ಪೆಟ್ಟಿಗೆಗಳಲ್ಲಿ ಎಷ್ಟು ಟಾಕುಗಳಿವೆ ?

(6) ಒಂದು ಹೋರಿಗೆ 255 ರೂ. ಗಳಂತೆ 14 ಹೋರಿಗಳನ್ನು ಕೊಂಡುಕೊಳ್ಳಬೇಕಾದರೆ ಎಷ್ಟು ರೂ. ಗಳು ಬೇಕು ?

ಇವುಗಳನ್ನು 14 ರಿಂದ ಗುಣಿಸು :—

(7) 456	(8) 895	(9) 1216
(10) 4795	(11) 23,456	(12) 67,893.

ಗುಣಕ 15.

42 ನೆಯ ಅಭ್ಯಾಸ.

(1) ಒಂದು ಪುಸ್ತಕದಲ್ಲಿ 164 ಪುಟಗಳಿವೆ? ಇಂತಹ 15 ಪುಸ್ತಕಗಳಲ್ಲಿ ಎಷ್ಟು ಪುಟಗಳಿವೆ ?

(2) ಒಂದು ಗುಣಿಯಲ್ಲಿ 225 ಸೇರು ರಾಗಿ ಹಿಡಿದರೆ 15 ಗುಣಿಗಳಲ್ಲಿ ಎಷ್ಟು ಸೇರು ರಾಗಿ ಹಿಡಿಯುತ್ತದೆ ?

(3) ಒಬ್ಬನು ತಿಂಗಳಿಗೆ 345 ರೂ. ಗಳಂತೆ 15 ತಿಂಗಳು ಕೊಟ್ಟರೆ ಅವನ ಸಾಲವು ತೀರುತ್ತದೆ. ಹಾಗಾದರೆ ಅವನ ಸಾಲವೆಷ್ಟು?

(4) ಒಬ್ಬನಿಗೆ 1 ತಿಂಗಳಿಗೆ 734 ರೂ. ಬಂದರೆ 15 ತಿಂಗಳಿಗೆಷ್ಟು ಬರುವುದು?

(5) ಒಂದು ಎಕರೆ ಗದ್ದೆಗೆ 975 ರೂ. ಗಳಂತೆ 15 ಎಕರೆ ಜಮೀನನ್ನು ಕೊಂಡುಕೊಳ್ಳಬೇಕಾದರೆ ಎಷ್ಟು ರೂ. ಬೇಕು?

(6) ಒಂದು ಅಗ್ರಹಾರದಲ್ಲಿ 15 ಮನೆಗಳಿವೆ. ಒಂದೊಂದು ಮನೆಗೆ 1225 ರೂ. ಗಳಂತೆ ವೆಚ್ಚವಾಗಿದ್ದರೆ ಈ 15 ಮನೆಗಳಿಗೆ ಎಷ್ಟು ರೂ. ವೆಚ್ಚವಾಗಿದೆ?

ಇವುಗಳನ್ನು 15 ರಿಂದ ಗುಣಿಸು:—

(7) 792	(8) 7092	(9) 8761
(10) 30,101	(11) 42,043	(12) 50,759

ಗುಣಕ 16.

43 ನೆಯ ಅಭ್ಯಾಸ.

(1) 1 ನೋಟು ಬುಕ್ಕಿನಲ್ಲಿ 68 ಪುಟಗಳಿದ್ದರೆ ಇಂತಹ 16 ನೋಟು ಬುಕ್ಕುಗಳಲ್ಲಿ ಎಷ್ಟು ಪುಟಗಳಿವೆ?

(2) ಬೆಂಗಳೂರಿನಿಂದ ಸಂಜನಗೂಡಿಗೆ 101 ಮೈಲಿಗಳು. 8 ಸಲ ಹೋಗಿಬಂದರೆ ಎಷ್ಟು ಮೈಲಿಗಳ ಪ್ರಯಾಣಮಾಡಿದ ಹಾಗಾಯಿತು?

(3) ಒಂದು ಮನೆಯ ಅಂಗಳಕ್ಕೆ ಚದರಬಿಲ್ಲೆಗಳನ್ನು ಹಾಸಿದೆ. 1 ಸಾಲಿಗೆ 95 ಬಿಲ್ಲೆಗಳಂತೆ 16 ಸಾಲುಗಳಿದ್ದರೆ ಒಟ್ಟೆಷ್ಟು ಬಿಲ್ಲೆಗಳಿವೆ?

(4) 1 ರೂ. ಗೆ 192 ಕಾಸುಗಳಾದರೆ 16 ರೂ. ಗಳಿಗೆ ಎಷ್ಟು ಕಾಸುಗಳು?

(5) ಒಂದೊಂದು ಬಾವಿತೋಡಿಸಲು 475 ರೂ. ಗಳಾದರೆ 16 ಬಾವಿಗಳನ್ನು ತೋಡಿಸಲು ಎಷ್ಟು ರೂ. ಗಳಾಗುವುವು?

(6) ಪ್ರತಿಯೊಂದು ವರ್ಷವೂ 1875 ರೂ. ಗಳು ನನಗೆ ಬಂದರೆ 16 ವರ್ಷಗಳಲ್ಲಿ ಎಷ್ಟು ಬರುತ್ತದೆ?

ಇವುಗಳನ್ನು 16 ರಿಂದ ಗುಣಿಸು :—

(7) 378	(8) 1234	(9) 3475
(10) 20,212	(11) 45,678	(12) 78,789

II ಗುಣಕದಲ್ಲಿ 16 ಕ್ಕಿಂತ ಹೆಚ್ಚಾದ ಎರಡಂಕಗಳುಳ್ಳ ಸಂಖ್ಯೆಗಳಿದ್ದರೆ ಗುಣಾಕಾರವನ್ನು ಮಾಡುವುದು.

ಹತ್ತುಗಳಿಂದ ಗುಣಿಸುವುದು.

ಗುಣಕ 20.

18 ಗುಣ್ಯವಾಗಿರಲಿ. ಈ ಕೆಳಗಿನ ನಕ್ಷೆಯಲ್ಲಿ ಒಂದೊಂದು ಉದ್ದ ಸಾಲಿನಲ್ಲಿ 18 ಮನೆಗಳಿವೆ. ಇಂಥ ಉದ್ದ ಸಾಲುಗಳು 20 ಇವೆ. ಒಟ್ಟು 18×20 ಮನೆಗಳಿವೆ.

ಪ್ರತಿಯೊಂದು ಭಾಗದಲ್ಲೂ ಎರಡೆರಡು ಉದ್ದ ಸಾಲುಗಳು ಇರುವಹಾಗೆ ಈ 20 ಉದ್ದ ಸಾಲುಗಳನ್ನು 10 ಭಾಗಮಾಡಬಹುದು. ಪ್ರತಿಯೊಂದು ಭಾಗದಲ್ಲೂ 18×2 ಮನೆಗಳಿವೆ. 10 ಭಾಗಗಳಲ್ಲಿ (18×2)×10 ಮನೆಗಳಿವೆ.

ಆದುದರಿಂದ $18\times20=(18\times2)\times10.$



20 ರಿಂದ ಗುಣಿಸಿದರೆ ಬರುವ ಫಲವೂ, ಮತ್ತು ಮೊದಲು 2 ರಿಂದ ಗುಣಿಸಿ ಬಂದ ಫಲವನ್ನು 10 ರಿಂದ ಗುಣಿಸಿದರೆ ಬರುವ ಫಲವೂ ಒಂದೇ.

ಹೀಗೆಯೇ ಗುಣ್ಯ ×30=(ಗುಣ್ಯ×3)×10

ಗುಣ್ಯ ×40=(ಗುಣ್ಯ×4)×10

ಗುಣ್ಯ ×50=(ಗುಣ್ಯ×5)×10

ಗುಣ್ಯ ×90=(ಗುಣ್ಯ×9)×10

ಹತ್ತುಗಳಿಂದ ಗುಣಿಸಿದರೆ ಬರುವ ಫಲವನ್ನು ಕಂಡುಹಿಡಿಯುವ ರೀತಿ ಯಾವುದೆಂದರೆ :—ಗುಣ್ಯವನ್ನು ಗುಣಕದ ದಶಕಸ್ಥಾನದಲ್ಲಿರುವ ಅಂಕದಿಂದ ಗುಣಿಸುವುದು. ಬಂದ ಫಲದ ಮುಂದೆ ಬಲಗಡೆ ಒಂದು ಸೊನ್ನೆಯನ್ನು ಹಾಕುವುದು. ಬರುವ ಸಂಖ್ಯೆಯೇ ಫಲ.

೪೪ ನೆಯ ಅಭ್ಯಾಸ.

1 ಗಂಟೆ=60 ಮಿನಿಟುಗಳು. 1 ಮಿನಿಟು=60 ಸೆಕಂಡುಗಳು.

(1) 1 ದಸ್ತಿನಲ್ಲಿ 24 ಗಜಗಳ ಕಾಗದವಿದೆ. 20 ದಸ್ತುಗಳಲ್ಲಿ ಎಷ್ಟು ಗಜ ಕಾಗದವಿದೆ?

(2) ಒಂದು ರೈಲುಬಂಡಿಯು ಗಂಟೆಗೆ 25 ಮೈಲಿಗಳಂತೆ ಹೋದರೆ 30 ಗಂಟೆಗಳಿಗೆ ಎಷ್ಟು ಮೈಲಿ ಹೋಗುತ್ತದೆ?

(3) 1 ಮಿನಿಟ್ಟಿಗೆ 60 ಸೆಕಂಡುಗಳು. 1 ಗಂಟೆಯಲ್ಲಿ ಎಷ್ಟು ಸೆಕಂಡುಗಳು?

(4) ಒಂದು ಸರದಲ್ಲಿ 108 ಮಣಿಗಳಿವೆ. 50 ಸರದಲ್ಲಿ ಎಷ್ಟು ಮಣಿಗಳಿವೆ?

(5) ಒಂದು ಚೀಲದಲ್ಲಿ 225 ರೂ. ಗಳಿವೆ. 60 ಚೀಲಗಳಲ್ಲಿ ಎಷ್ಟು ರೂ. ಗಳಿವೆ?

ಇವುಗಳ ಫಲಗಳನ್ನು ಬರೆ:—

(6) 9071×30

(7) 1234×40

(8) 4567×50

(9) 4050×60

(10) 30,301×70

(11) 89,129×80

(12) 9993×90

123×23 ಎಷ್ಟು ?

```
 123
  23
 ---
 369        123×3=369
246         123×20=246 ಹ.
----
2829
```

123×23=2829

45 ನೆಯ ಅಭ್ಯಾಸ.

A

(1) ಒಂದು ಕಟ್ಟಿನಲ್ಲಿ 24 ಸೀಸದ ಕಡ್ಡಿಗಳಿವೆ. i. 3 ಕಟ್ಟುಗಳಲ್ಲೆಷ್ಟಿವೆ? ii. 20 ಕಟ್ಟುಗಳಲ್ಲೆಷ್ಟಿವೆ? iii. 23 ಕಟ್ಟುಗಳಲ್ಲೆಷ್ಟಿವೆ?

(2) ಒಂದು ಪೊಟ್ಟಣದಲ್ಲಿ 75 ಚಿತ್ರಗಳಿವೆ. 37 ಪೊಟ್ಟಣಗಳಲ್ಲಿ ಎಷ್ಟಿವೆ?

(3) ಒಂದು ಚೀಲದಲ್ಲಿ 65 ಸೇರು ಅಕ್ಕಿ ಇದೆ. 48 ಚೀಲಗಳಲ್ಲಿ ಎಷ್ಟು ಸೇರು ಅಕ್ಕಿ ಇದೆ?

(4) ಒಂದು ಮಿನಿಟ್ಟಿಗೆ 47 ಹೆಜ್ಜೆಗಳನ್ನು ಹಾಕಿದರೆ 42 ಮಿನಿಟ್ಟುಗಳಲ್ಲಿ ಎಷ್ಟು ಹೆಜ್ಜೆಗಳನ್ನು ಹಾಕಬಹುದು?

(5) ಒಂದು ಡಬ್ಬದಲ್ಲಿ 24 ಸೀಸೆ ಸೀಮೆಯೆಣ್ಣೆ ಇದೆ. 55 ಡಬ್ಬಗಳಲ್ಲಿ ಎಷ್ಟು ಸೀಸೆ ಸೀಮೆಯೆಣ್ಣೆ ಇದೆ?

(6) ಒಂದು ಪಙ್ಕ್ತಿಯಲ್ಲಿ 37 ಅಕ್ಷರಗಳಂತೆ ಬರೆದರೆ 47 ಪಙ್ಕ್ತಿಗಳಲ್ಲಿ ಎಷ್ಟಕ್ಷರಗಳನ್ನು ಬರೆಯಬಹುದು?

(7) 1 ರೂ. ಗೆ 23 ಸೇರು ರಾಗಿ ಬರುತ್ತದೆ. 68 ರೂ. ಗಳಿಗೆ ಎಷ್ಟು ಸೇರು ರಾಗಿ ಬರುತ್ತದೆ?

(8) 1 ರೂ. ಗೆ 64 ಬಳ್ಳ ತೌಡು ಬಂದರೆ, 45 ರೂ. ಗಳಿಗೆ ಎಷ್ಟು ಬಳ್ಳ ಬರುತ್ತದೆ?

(9) 1 ರೈಲಿನಲ್ಲಿ 19 ಬಂಡಿಗಳಿವೆ. ಪ್ರತಿಯೊಂದು ಬಂಡಿಯಲ್ಲೂ 64 ಜನರು ಕುಳಿತುಕೊಳ್ಳಬಹುದು. ಹಾಗಾದರೆ ಒಟ್ಟು ಎಷ್ಟು ಜನಗಳು ಕುಳಿತುಕೊಳ್ಳಬಹುದು?

(10) ನಾನು ಒಬ್ಬೊಬ್ಬ ಹುಡುಗನಿಗೆ 23 ಸೀಬೆಹಣ್ಣುಗಳಂತೆ 39 ಹುಡುಗರಿಗೆ ಹಂಚಿದರೆ ಒಟ್ಟು ಎಷ್ಟು ಹಣ್ಣುಗಳನ್ನು ಹಂಚಿದಹಾಗಾಯಿತು ?

(11) ಒಂದು ಗಂಟೆಗೆ 3600 ಸೆಕಂಡುಗಳು. 1 ದಿನಸಕ್ಕೆ ಎಷ್ಟು ಸೆಕಂಡುಗಳು ?

1 ದಿವಸಕ್ಕೆ = 24 ಗಂಟೆಗಳು.

(12) ಒಂದು ಫರ್ಲಾಂಗಿಗೆ 220 ಗಜಗಳು. 28 ಫರ್ಲಾಂಗುಗಳಿಗೆ ಎಷ್ಟು ಗಜಗಳು ?

(13) ಒಂದು ಅಗ್ರಹಾರದಲ್ಲಿ 19 ಮನೆಗಳಿವೆ. ಮನೆಗೆ 1345 ರೂ. ಗಳ ಪ್ರಕಾರ ಬೆಲೆ ಆದರೆ ಒಟ್ಟಿಗೆಷ್ಟಾಗಿದೆ ?

(14) ಒಂದು ಮೇಜಿಗೂ ಒಂದು ಕುರ್ಚಿಗೂ 17 ರೂ. ಗಳಾದರೆ 97 ಕುರ್ಚಿಗೂ 97 ಮೇಜಿಗೂ ಎಷ್ಟಾಗುವುದು ?

(15) ನಾನು ದಿವಸಕ್ಕೆ 34 ಮೈಲಿಗಳಂತೆ 28 ದಿವಸಗಳು ಬೈಸಿಕಲ್ಲಿನಲ್ಲಿ ಪ್ರಯಾಣಮಾಡಿದರೆ ಒಟ್ಟಿಷ್ಟು ಮೈಲಿ ಪ್ರಯಾಣಮಾಡಿದಹಾಗಾಯಿತು ?

B

ಇವುಗಳ ಫಲಗಳನ್ನು ಕಂಡು ಹಿಡಿ :—

(1) 23 × 27	(6) 576 × 37	(11) 7089 × 63
(2) 91 × 19	(7) 711 × 41	(12) 9845 × 67
(3) 83 × 23	(8) 1071 × 43	(13) 12,345 × 78
(4) 125 × 29	(9) 1235 × 47	(14) 23,456 × 87
(5) 238 × 31	(10) 3245 × 59	(15) 71,117 × 97.

46 ನೆಯ ಅಭ್ಯಾಸ.

(1) i. 43 × 21 ಎಷ್ಟು ?

ii. 21 ರ ಅಪವರ್ತನಗಳೇನು ?

43 ನ್ನು ಮೊದಲು 3 ರಿಂದ ಗುಣಿಸಿ ಬಂದ ಫಲವನ್ನು 7 ರಿಂದ ಗುಣಿಸಿದರೆ ಫಲವೆಷ್ಟು ಬರುತ್ತದೆ ?

43 ನ್ನು ಮೊದಲು 7 ರಿಂದ ಗುಣಿಸಿ ಬಂದ ಫಲವನ್ನು 3 ರಿಂದ ಗುಣಿಸಿದರೆ ಫಲವೆಷ್ಟು ಬರುತ್ತದೆ?

ಉತ್ತರಗಳಲ್ಲಿ ಏನಾದರೂ ವ್ಯತ್ಯಾಸವಿದೆಯೋ?

$$43 \times 21 = (43 \times 3) \times 7 = (43 \times 7) \times 3.$$

(2) 33 ರ ಅಪವರ್ತನಗಳೇನು?

$73 \times 33 = (73 \times 11) \times 3 = (73 \times 3) \times 11$ ಎಂದು ಗುಣಾಕಾರಮಾಡಿ ತೋರಿಸು.

(3) 35 ರ ಅಪವರ್ತನಗಳೇನು?

$115 \times 35 = (115 \times 7) \times 5 = (115 \times 5) \times 7$ ಎಂದು ಗುಣಾಕಾರಮಾಡಿ ತೋರಿಸು.

ಕೆಳಗೆ ಕೊಟ್ಟಿರುವ ಗುಣಾಕಾರಲೆಕ್ಕಗಳನ್ನು i. ಅಪವರ್ತನಗಳನ್ನು ಉಪಯೋಗಿಸಿಯೂ, ii. ಉಪಯೋಗಿಸದೆಯೂ ಮಾಡು.

(4) 61×28	(7) 78×49	(10) 436×65
(5) 112×32	(8) 123×81	(11) 349×91
(6) 96×48	(9) 321×77	(12) 646×25

ಗುಣಕಕ್ಕೆ ಅಪವರ್ತನಗಳಿದ್ದರೆ ಅವುಗಳಲ್ಲಿ ಯಾವುದಾದರೊಂದನ್ನು ತೆಗೆದುಕೊಂಡು ಗುಣ್ಯವನ್ನು ಗುಣಿಸುವುದು. ಬಂದ ಫಲವನ್ನು ಮತ್ತೊಂದು ಅಪವರ್ತನದಿಂದ ಗುಣಿಸುವುದು. ಹೀಗೆ ಬಂದ ಫಲವನ್ನು ಇನ್ನೊಂದು ಅಪವರ್ತನದಿಂದ ಗುಣಿಸುವುದು. ಅಪವರ್ತನಗಳೆಲ್ಲವೂ ಮುಗಿಯುವವರೆಗೂ ಹೀಗೆಯೇ ಮಾಡುವುದು. ಕೊನೆಗೆ ಬಂದ ಫಲವೇ ಉತ್ತರವು.

III. ಗುಣಕದಲ್ಲಿ ಮೂರಂಕಗಳುಳ್ಳ ಸಂಖ್ಯೆಗಳಿದ್ದರೆ ಗುಣನವನ್ನು ಮಾಡುವುದು.

ನೂರುಗಳಿಂದ ಗುಣಿಸುವುದು.

ಗುಣಕ 100.

ಗುಣ್ಯವು 26 ಆಗಿರಲಿ.

26×100 = 1 ನೂರು $\times$ 26 = 26 ನೂರುಗಳು = 2600.

ಯಾವ ಗುಣ್ಯವೇ ಆಗಿರಲಿ 100 ರಿಂದ ಗುಣಿಸಿದರೆ, ಫಲವು ಅಷ್ಟು ಸೂರುಗಳಾಗುತ್ತದೆ. ಮತ್ತು ಗುಣ್ಯದ ಮುಂದೆ ಬಲಗಡೆ 2 ಸೊನ್ನೆಗಳನ್ನು ಹಾಕಿದರೆ ಬರುವ ಸಂಖ್ಯೆಯೇ ಫಲವು.

ಗುಣಕ 200.

26 × 200 ಎಷ್ಟು ?

$200 = 2 \times 100$

$26 \times 200 = (26 \times 2) \times 100$

ಹೀಗೆಯೇ

$26 \times 300 = (26 \times 3) \times 100$

$26 \times 400 = (26 \times 4) \times 100$

$26 \times 500 = (26 \times 5) \times 100$

$26 \times 900 = (26 \times 9) \times 100$

ಆದುದರಿಂದ ಸೂರುಗಳಿಂದ ಗುಣಿಸಿದರೆ ಬರುವ ಫಲವನ್ನು ಕಂಡುಹಿಡಿಯುವ ರೀತಿ ಯಾವುದೆಂದರೆ:—ಗುಣ್ಯವನ್ನು ಗುಣಕದ ನೂರರ ಸ್ಥಾನದಲ್ಲಿರುವ ಅಂಕದಿಂದ ಗುಣಿಸುವುದು. ಬಂದ ಫಲದ ಮುಂದೆ 2 ಸೊನ್ನೆಗಳನ್ನು ಹಾಕುವುದು. ಹೀಗೆ ಬಂದ ಸಂಖ್ಯೆಯೇ ಫಲವು.

47 ನೆಯ ಅಭ್ಯಾಸ.

1 ಶತಮಾನ = 100 ವರ್ಷಗಳು.

(1) ಒಂದು ವರ್ಷಕ್ಕೆ 365 ದಿನಗಳಾದರೆ 1 ಶತಮಾನಕ್ಕೆ ಎಷ್ಟು ದಿನಗಳು ?

2, 3, 4 ಶತಮಾನಗಳಿಗೆ ಎಷ್ಟು ದಿನಗಳು ?

(2) ನನ್ನಲ್ಲಿ 125 ಐನೂರು ರೂಪಾಯಿ ನೋಟುಗಳು ಇವೆ. ಹಾಗಾದರೆ ಒಟ್ಟೆಷ್ಟು ರೂ. ಗಳಿವೆ ?

(3) ಒಂದು ಚೀಲದಲ್ಲಿ 750 ರೂ. ಗಳಂತೆ 200 ಚೀಲಗಳಲ್ಲಿ ಎಷ್ಟು ರೂ. ಗಳನ್ನು ಹಾಕಬಹುದು ?

ಇವುಗಳ ಫಲಗಳನ್ನು ಕಂಡುಹಿಡಿ :—

(4) 123 × 100	(7) 1023 × 400	(10) 2013 × 700
(5) 456 × 200	(8) 4567 × 500	(11) 4567 × 800
(6) 789 × 300	(9) 8913 × 600	(12) 8901 × 900

789 × 432 ಎಷ್ಟು ?

```
      789
      432
    ------
     1578        789 × 2 = 1478, 2 ರ ಫಲ
    2367         789 × 30 = 2268 ಹ., 30 ರ ಫಲ
   3156          789 × 400 = 3176 ನೂ., 400 ರ ಫಲ
   --------
   3,40,848 = 789 × 432
   --------
          789 × 432 = 3,40,848
```

48 ನೆಯ ಅಭ್ಯಾಸ.

(1) ಒಂದು ಬುಟ್ಟಿಯಲ್ಲಿ 125 ಹಣ್ಣುಗಳಿವೆ. 268 ಬುಟ್ಟಿಗಳಲ್ಲೆಷ್ಟಿವೆ ?

(2) ಒಂದು ಸರದಲ್ಲಿ 108 ಮಣಿಗಳಿವೆ. 137 ಸರಗಳಲ್ಲೆಷ್ಟಿವೆ ?

(3) ಒಂದು ಪೊಟ್ಟಣದಲ್ಲಿ 144 ಬಿತ್ತಗಳಿದ್ದರೆ 125 ಪೊಟ್ಟಣಗಳಲ್ಲೆಷ್ಟಿವೆ ?

(4) ಒಂದೊಂದು ಪುಟದಲ್ಲಿ 168 ಅಕ್ಷರಗಳಂತೆ 245 ಪುಟಗಳಲ್ಲಿ ಎಷ್ಟು ಅಕ್ಷರಗಳಿವೆ ?

(5) ಒಂದು ಚೀಲದಲ್ಲಿ 95 ಸೇರು ರಾಗಿ ಇದೆ. ಇಂಥ 128 ಚೀಲಗಳಲ್ಲಿ ಎಷ್ಟು ಸೇರು ರಾಗಿ ಇದೆ ?

(6) ಒಂದೊಂದು ಸಾಲಿನಲ್ಲಿ 125 ಹೆಂಚುಗಳಿದ್ದರೆ 125 ಸಾಲುಗಳಲ್ಲಿ ಎಷ್ಟು ಹೆಂಚುಗಳಿವೆ ?

(7) ಒಂದೊಂದು ಹೆಂಚಿನ ಮನೆಗೆ 527 ರೂ. ಮೇರೆಗೆ 138 ಮನೆಗಳನ್ನು ಕಟ್ಟಿಸಲು ಎಷ್ಟಾಗುವುವು ?

(8) ಒಂದು ಟೆಲಿಗ್ರಾಫ್ ಕಂಬದಿಂದ ಮತ್ತೊಂದಕ್ಕೆ 132 ಅಡಿ ದೂರವಿದೆ. 137 ಕಂಬಗಳನ್ನು ಒಬ್ಬನು ದಾಟಿದರೆ ಎಷ್ಟುದೂರ ನಡೆದಂತಾಗುವುದು ?

ಇವುಗಳ ಫಲಗಳನ್ನು ಕಂಡು ಹಿಡಿ:—

(9) 345×127	(13) 981×459	(17) 1207×253
(10) 604×136	(14) 1111×167	(18) 7201×728
(11) 789×145	(15) 1991×173	(19) 4567×846
(12) 843×199	(16) 9119×191	(20) 7678×958

49 ನೆಯ ಅಭ್ಯಾಸ.

A

(1) 15 ರೂ. × 7 + 7 ರೂ. × 7 = 22 ರೂ. × 7

9 ರೂ. × 7 + 13 ರೂ. × 7 = 22 ರೂ. × 7

4 ರೂ. × 7 + 18 ರೂ. × 7 = 22 ರೂ. × 7 ಎಂದು ತೋರಿಸು.

(2) i. $5 \times 6 + 3 \times 6 = \quad \times 6$

$2 \times 6 + 6 \times 6 = \quad \times 6$

ii. $11 \times 14 + 4 \times 14 = \quad \times 14$

$10 \times 14 + 5 \times 14 = \quad \times 14$

$9 \times 14 + 6 \times 14 = \quad \times 14$

ಮೇಲೆ ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ.

(3) $16 \times 16 = (16 + 6) \times (16-6) + 6 \times 6$,

$19 \times 19 = (19 + 9) \times (19-9) + 9 \times 9$,

$28 \times 28 = (28 + 8) \times (28-8) + 8 \times 8$,

$45 \times 45 = (45 + 5) \times (45-5) + 5 \times 5$,

$67 \times 67 = (67 + 7) \times (67-7) + 7 \times 7$, ಎಂದು ತೋರಿಸು.

(4) i. $99 \times 75 = (100 \times 75) - 75$,
$999 \times 34 = (1000 \times 34) - 34$,
$9999 \times 65 = (10000 \times 65) - 65$ ಎಂದು ತೋರಿಸು.

ii. 999×16, 9999×25, 9999×48, 99×13…
999×216— ಇವುಗಳ ಫಲಗಳನ್ನು ಕಂಡು ಹಿಡಿ.

(5) i. $108 \times 18 = (100 \times 18) + (8 \times 18)$,
$1006 \times 25 = (1000 \times 25) + (6 \times 25)$,
$107 \times 125 = (100 \times 125) + (7 \times 125)$
ಎಂದು ತೋರಿಸು.

ii. 1009×7, 1012×15 1025×23 ಎಷ್ಟು ?

B

(1) $19 \times 10 + 19 \times 6 = 19 \times 16$,
$35 \times 20 + 35 \times 7 = 35 \times 27$,
$48 \times 30 + 48 \times 9 = 48 \times 39$,
$57 \times 40 + 57 \times 5 = 57 \times 45$ ಎಂದು ತೋರಿಸು.

(2) $22 \times 10 + 22 \times 9 = 22 \times$ ಎಷ್ಟು ?
$45 \times 20 + 45 \times 8 = 45 \times$ ಎಷ್ಟು ?
$68 \times 30 + 68 \times 9 = 68 \times$ ಎಷ್ಟು ?

(3) $137 \times 100 + 137 \times 20 + 137 \times 8 = 137 \times 128$
$258 \times 200 + 258 \times 30 + 258 \times 4 = 258 \times 234$,
$315 \times 300 + 315 \times 8 = 315 \times 308$
ಎಂದು ತೋರಿಸು.

(4) $129 \times 300 + 129 \times 40 + 129 \times 5 = 129 \times$ ಎಷ್ಟು ?
$145 \times 400 + 145 \times 70 + 145 \times 6 = 145 \times$ ಎಷ್ಟು ?
$175 \times 200 + 175 \times 7 = 175 \times$ ಎಷ್ಟು ?

(5) $124 \times 124 = (124+4) \times (124-4) + 4 \times 4$,
$136 \times 136 = (136+6 \times (136-6) + 6 \times 6$,
$145 \times 145 = (145+5) \times (145-5) + 5 \times 5$
ಎಂದು ತೋರಿಸು.

ಐದನೆಯ ಅಧ್ಯಾಯ.

ಭಾಗಹಾರ.

50 ನೆಯ ಅಭ್ಯಾಸ.

(1) ಒಂದೊಂದು ಗುಡ್ಡೆಯಲ್ಲೂ ಸಮನಾಗಿರುವಹಾಗೆ 35 ರೂ. ಗಳನ್ನು 7 ಗುಡ್ಡೆಗಳನ್ನಾಗಿ ಇಟ್ಟರೆ ಒಂದೊಂದು ಗುಡ್ಡೆಯಲ್ಲಿ ಎಷ್ಟು ರೂ. ಗಳಿವೆ ?

35 ರೂ. ಗಳನ್ನು 7 ಜನಗಳಿಗೆ ಸಮನಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ರೂ. ಗಳು ಬರುತ್ತವೆ ?

ಒಂದೇ ಬೆಲೆಯುಳ್ಳ 7 ಪದಾರ್ಥಗಳಿಗೆ 35 ರೂ. ಗಳಾದರೆ ಒಂದೊಂದು ಪದಾರ್ಥಕ್ಕೆ ಏನು ಬೆಲೆ ?

ಈ ಲೆಕ್ಕಗಳನ್ನೆಲ್ಲಾ 35 ರೂ ÷ 7 = 5 ರೂ. ಎಂದು ಬರೆಯುತ್ತೇವೆ.

(2) ಒಬ್ಬನಲ್ಲಿ 35 ಗಜಗಳು ಕಾಗದವಿದೆ. ಎಷ್ಟು ಸಲ 5 ಗಜಗಳ ಕಾಗದದಂತೆ ಅವನಿಂದ ತೆಗೆದುಕೊಳ್ಳಬಹುದು ?

ಒಂದೊಂದು ನೋಟುಬುಕ್ಕಿಗೆ 5 ಗಜಗಳ ಕಾಗದವನ್ನು ಉಪಯೋಗಿಸಿದರೆ 35 ಗಜಗಳಿಗೆ ಎಷ್ಟು ನೋಟುಬುಕ್ಕುಗಳನ್ನು ಹಾಕಬಹುದು ?

35 ಗಜಗಳಲ್ಲಿ ಎಷ್ಟು 5 ಗಜಗಳು ಇವೆ ?

ಈ ಲೆಕ್ಕಗಳನ್ನೂ 35 ಗಜಗಳು ÷ 5 ಗಜಗಳು = 7 ಎಂದು ಬರೆಯುತ್ತೇವೆ

(÷) ಈ ಚಿಹ್ನೆಯನ್ನು ಉಪಯೋಗಿಸಿದಾಗಲೆಲ್ಲಾ ಇದರ ಎಡಗಡೆ ಇರುವ ವಸ್ತುಗಳನ್ನು ಬಲಗಡೆ ಇರುವ ಸಂಖ್ಯೆಯಷ್ಟು ಸಲಸಮ

ಭಾಗಮಾಡಬೇಕು ಎಂದಾಗಲಿ, ಇಲ್ಲವೆ ಇದರ ಎಡಗಡೆ ಇರುವ ವಸ್ತುಗಳಲ್ಲಿ ಬಲಗಡೆ ಇರುವ ವಸ್ತುಗಳು ಎಷ್ಟು ಸಲವಿವೆ ಎಂದಾಗಲಿ ಅರ್ಥ. ಇವುಗಳನ್ನು ಕಂಡು ಹಿಡಿಯುವುದಕ್ಕೆ ಭಾಗಹಾರವೆಂದು ಹೆಸರು ಮತ್ತು (÷) ಈ ಚಿಹ್ನೆಯು ಭಾಗಹಾರಚಿಹ್ನೆಯು.

35÷5=7 ರಲ್ಲಿ 35 ಕ್ಕೆ **ಭಾಜ್ಯ**ವೆಂದೂ, 5 ಕ್ಕೆ **ಭಾಜಕ**ವೆಂದೂ 7 ಕ್ಕೆ **ಭಾಗಲಬ್ಧ**ವೆಂದೂ ಹೆಸರು.

(3) ಮಗ್ಗಿಗಳ ಸಹಾಯದಿಂದ ಉತ್ತರಗಳನ್ನು ಹೇಳು.

25 ರೂ÷5,	48÷8,	8 ಸೂ÷2,
25 ರೂ÷5 ರೂ.,	54÷6,	20 ಹ÷4,
49 ರೂ.÷7,	72÷9,	20 ಹ÷4 ಹ.
36 ಆ. ÷3,	105÷15,	32 ಸಾ ÷8,
36 ಆ. ÷3 ಆ.	128÷16,	32 ಸಾ.÷8 ಸಾ.,

25÷5 ಎಂಬುದನ್ನು $\frac{25}{5}$ ಎಂದೂ ಬರೆಯುವುದುಂಟು.

(4) ಉತ್ತರಗಳನ್ನು ಹೇಳು :—

$\frac{30\ \text{ರೂ.}}{5}$,	$\frac{77}{11}$,	$\frac{112}{14}$,
$\frac{8\ \text{ಹ.}}{4}$,	$\frac{88}{8}$,	$\frac{126}{9}$,
$\frac{15\ \text{ಸಾ.}}{3}$,	$\frac{108}{9}$,	$\frac{75}{5}$,
$\frac{15\ \text{ಸಾ.}}{5\ \text{ಸಾ.}}$,	$\frac{117}{13}$	$\frac{135}{15}$,

(5) i. ಒಬ್ಬೊಬ್ಬನಿಗೆ 3 ಆಣೆಗಳಂತೆ ಕೂಲಿಕೊಟ್ಟರೆ 15 ಆಣೆಗಳನ್ನು ಎಷ್ಟು ಜನಗಳಿಗೆ ಕೊಡಬಹುದು?

ii. ನನ್ನಲ್ಲಿ 1 ರೂ. ಇದೆ. 3 ಆಣೆಗಳಂತೆ ಒಬ್ಬೊಬ್ಬನಿಗೆ ಕೂಲಿಯನ್ನು ಕೊಟ್ಟರೆ ಎಷ್ಟು ಜನಗಳಿಗೆ ಕೊಡಬಹುದು? ಮತ್ತು ನನ್ನಲ್ಲಿ ಉಳಿಯುವುದೆಷ್ಟು?

(6) 55 ರೂ. ಗಳಿಗೆ 10 ರೂ. ಗಳ ನೋಟುಗಳು ಎಷ್ಟು ಬರುತ್ತವೆ? ಮತ್ತು ಎಷ್ಟು ರೂ. ಗಳು ಉಳಿಯುತ್ತವೆ?

(7) ನನ್ನಲ್ಲಿ 80 ಗೋಲಿಗಳಿವೆ. ಇವುಗಳನ್ನು ಸಮವಾಗಿ 9 ಹುಡುಗರಿಗೆ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ಗೋಲಿಗಳು ಬರುತ್ತವೆ? ಮತ್ತು ಹಂಚುವುದಕ್ಕಾಗದೆ ಎಷ್ಟು ಗೋಲಿಗಳು ಉಳಿಯುತ್ತವೆ?

ಹೀಗೆ ಉಳಿದುದಕ್ಕೆ ಶೇಷವೆಂದು ಹೆಸರು.

ಭಾಗಹಾರ ಲೆಕ್ಕಗಳಲ್ಲಿ

ಭಾಜಕ×ಭಾಗಲಬ್ಧ+ಶೇಷ=ಭಾಜ್ಯ.

ಈ ಕೆಳಗಿನ ಲೆಕ್ಕಗಳನ್ನು ಭಾಗಹಾರ ಚಿಹ್ನೆಯನ್ನು ಉಪಯೋಗಿಸಿ ಬರೆ ಮತ್ತು ಉತ್ತರಗಳನ್ನು ಹೇಳು.

(8) 84 ರೂ. ಗಳನ್ನು ಇಬ್ಬರಿಗೆ ಸಮನಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ರೂ. ಗಳು ಬರುತ್ತವೆ?

(9) i. 600 ರೂ. ಗಳನ್ನು ಇಬ್ಬರಿಗೆ, ಮೂವರಿಗೆ, ಆರು ಜನಗಳಿಗೆ ಸಮನಾಗಿ ಹಂಚು. ಒಬ್ಬೊಬ್ಬನಿಗೆ ಎಷ್ಟು ಬರುತ್ತದೆ?

ii. 684 ರೂ. ಗಳನ್ನು ಇಬ್ಬರಿಗೆ, ಮೂವರಿಗೆ, ಆರು ಜನಗಳಿಗೆ ಸಮನಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ಬರುತ್ತದೆ?

(10) 279 ರೂ. ಗಳನ್ನು ಮೂರು ಜನಗಳಿಗೆ, ಒಂಬತ್ತು ಜನಗಳಿಗೆ ಸಮನಾಗಿ ಹಂಚು.

(11) i. 8 ಹ. $\div 2 =$ ಎಷ್ಟು? $6 \div 2 =$ ಎಷ್ಟು?
$86 \div 2 =$ ಎಷ್ಟು?

ii. $88 \div 4$, $105 \div 5$, $246 \div 6$, $357 \div 7$, $480 \div 8$ ಎಷ್ಟು?

(12) i. 8 ಹ. $\div 2 =$ ಎಷ್ಟು? $12 \div 2 =$ ಎಷ್ಟು?
$92 \div 2 =$ ಎಷ್ಟು?

ii. $76 \div 4$, $95 \div 5$, $102 \div 6$, $119 \div 7$, $152 \div 8$, $171 \div 9$ ಎಷ್ಟು?

I. 16 ರ ವರೆಗೆ ಇರುವ ಸಂಖ್ಯೆಗಳು ಭಾಜಕಗಳಾಗಿದ್ದರೆ ಭಾಗಹಾರ ಮಾಡುವ ಕ್ರಮ.

ಭಾಜಕ 2.

ನನ್ನಲ್ಲಿ 36 ಮೊಳ ಹಗ್ಗವಿದೆ. ಅದನ್ನು ಸಮನಾಗಿ 2 ಭಾಗವಮಾಡಿದರೆ ಒಂದೊಂದು ಭಾಗದಲ್ಲಿ ಎಷ್ಟು ಮೊಳ ಹಗ್ಗವಿದೆ?

36÷2 ಮೊಳ ಹಗ್ಗವಿದೆ.

ಹ. ಒಂ.	
2) 3 6	2) 2 ಹ.+16 ಒಂ.
1 8	1 ಹ.+8 ಒಂ. =18

36 ಮೊಳಗಳು÷2=18 ಮೊಳಗಳು.

51 ನೆಯ ಅಭ್ಯಾಸ.

(1) 64 ಸೀಸದಕಡ್ಡಿಗಳನ್ನು ಪ್ರತಿಕಟ್ಟಿನಲ್ಲೂ ಸಮನಾಗಿರುವ ಹಾಗೆ 2 ಕಟ್ಟುಕಟ್ಟಿದ್ದರೆ, ಒಂದೊಂದು ಕಟ್ಟಿನಲ್ಲಿ ಎಷ್ಟು ಸೀಸದಕಡ್ಡಿಗಳಿವೆ?

(2) 92 ಗೋಲಿಗಳು ಒಂದು ಪೆಟ್ಟಿಗೆಯಲ್ಲಿವೆ. ಇವುಗಳನ್ನು ಸಮವಾಗಿ 2 ಪೆಟ್ಟಿಗೆಗಳಲ್ಲಿ ಹಾಕಿದರೆ ಒಂದೊಂದು ಪೆಟ್ಟಿಗೆಯಲ್ಲಿ ಎಷ್ಟು ಗೋಲಿಗಳಿವೆ?

(3) 108 ಸಂಪಗೆಹೂವುಗಳನ್ನು ನಾನೂ ರಾಮನೂ ಸಮವಾಗಿ ಹಂಚಿಕೊಂಡರೆ ಒಬ್ಬೊಬ್ಬನಿಗೆ ಎಷ್ಟು ಹೂವುಗಳು ಬರುತ್ತವೆ?

(4) ಒಬ್ಬನು ಮೈಸೂರಿಂದ ಬೆಂಗಳೂರಿಗೆ ಹೋಗಿ ಮತ್ತೆ ಮೈಸೂರಿಗೆ ಬಂದಲ್ಲಿ 172 ಮೈಲಿಗಳು ನಡೆದಂತಾಗುವುದು. ಮೈಸೂರಿಗೂ ಬೆಂಗಳೂರಿಗೂ ಎಷ್ಟು ದೂರವಿದೆ?

(5) 288 ರೂ. ಗಳನ್ನು ಇಬ್ಬರಿಗೆ ಹಂಚು. ಒಬ್ಬೊಬ್ಬನಿಗೆ ಎಷ್ಟು ಬರುತ್ತದೆ?

(6) ಎರಡು ವರ್ಷಗಳಿಗೆ 730 ದಿನಗಳಾದರೆ ವರ್ಷಕ್ಕೆಷ್ಟು ದಿನಗಳು?

ಇವುಗಳನ್ನು 2 ರಿಂದ ಭಾಗಿಸು:—

(7) 316 (8) 794 (9) 1234 (10) 2314
(11) 4096 (12) 98,076.

ಭಾಜಕ 3.

3 ಜನಗಳಿಗೆ ಸಮನಾಗಿ 114 ರೂ. ಗಳನ್ನು ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ಬರುತ್ತದೆ?

114÷3 ರೂ. ಬರುತ್ತದೆ.

3) 114 | 3) 11 ಹ.+4 ಒಂ.=3) 9 ಹ.+24 ಒಂ.
38 | 3 ಹ.+ 8 ಒಂ.

114 ರೂ. ÷ 3 = 38 ರೂ.

52 ನೆಯ ಅಭ್ಯಾಸ.

(1) 96 ಬೆಂಡೆಬಿತ್ತಗಳನ್ನು 3 ಮೂರು ಪಾತಿಗಳಲ್ಲಿ ಸಮವಾಗಿ ಬಿತ್ತಿದರೆ ಒಂದೊಂದು ಪಾತಿಯಲ್ಲಿ ಎಷ್ಟು ಬಿತ್ತಗಳಿವೆ?

(2) 3 ಹುಡುಗರು ಒಂದು ತೋಟದಲ್ಲಿ 135 ನಿಂಬೆ ಹಣ್ಣುಗಳನ್ನು ಕೊಯ್ದರು. ಎಲ್ಲರೂ ಸಮವಾಗಿ ಕೊಯ್ದಿದ್ದರೆ ಒಬ್ಬೊಬ್ಬನು ಎಷ್ಟು ಹಣ್ಣುಗಳನ್ನು ಕೊಯ್ದನು?

(3) 147 ಅಡಿ ಉದ್ದವುಳ್ಳ ಒಂದು ಹಗ್ಗವನ್ನು ಸಮವಾಗಿ 3 ತುಂಡುಗಳನ್ನು ಮಾಡಿದರೆ ಒಂದೊಂದು ತುಂಡಿನಲ್ಲಿ ಎಷ್ಟು ಅಡಿ ಹಗ್ಗವಿದೆ?

(4) ರಾಮನಲ್ಲಿ ಎಷ್ಟಿದೆಯೋ ಅದರ ಎರಡರಷ್ಟು ಹಣವು ನನ್ನಲ್ಲಿದೆ. ನಮ್ಮಿಬ್ಬರಲ್ಲಿ 108 ರೂ. ಗಳಿದ್ದರೆ ರಾಮನಲ್ಲೆಷ್ಟಿದೆ? ನನ್ನಲ್ಲೆಷ್ಟಿದೆ?

(5) ಮೂರು ತೋಟಗಳಿಂದ ನನಗೆ ವರ್ಷಕ್ಕೆ 732 ರೂ. ಗಳು ಬಂದರೆ, ಒಂದೊಂದು ತೋಟದಿಂದ ಸರಾಸರಿ ಎಷ್ಟು ಬಂದಿತು?

(6) 3705 ರೂ. ಗಳನ್ನು 3 ಜನ ಅಣ್ಣತಮ್ಮಂದಿರು ಸಮವಾಗಿ ಹಂಚಿಕೊಂಡರೆ ಒಬ್ಬೊಬ್ಬನಿಗೆ ಎಷ್ಟು ಬಂದಿತು?

ಇವುಗಳನ್ನು 3 ರಿಂದ ಭಾಗಿಸು:—

(7) 123 (8) 345 (9) 567 (10) 4332

(11) 23,027 (12) 22,037.

ಭಾಜಕ 4.

1347÷4 ಎಷ್ಟು?

```
4) 1347
   ————
   336 ಶೇಷ 3.
```

ಭಾಗಲಬ್ಧ 336, ಶೇಷ 3.

53 ನೆಯ ಅಭ್ಯಾಸ.

1 ದುಡ್ಡು=4 ಕಾಸುಗಳು.

1 ರೂಪಾಯಿ=192 ಕಾಸುಗಳು.

(1) ಪ್ರತಿ ಸಾಲಿನಲ್ಲೂ ಸಮವಾಗಿರುವ ಹಾಗೆ 96 ಹುಡುಗರನ್ನು 4 ಸಾಲುಗಳಾಗಿ ನಿಲ್ಲಿಸಿದರೆ ಒಂದೊಂದು ಸಾಲಿನಲ್ಲಿ ಎಷ್ಟು ಹುಡುಗರಿದಾರೆ?

(2) ಒಂದು ಚಚ್ಚೌಕವಾದ ಹೊಲದ ಸುತ್ತಳತೆ 168 ಗಜವಾದರೆ ಒಂದು ಪಕ್ಕದಳತೆ ಎಷ್ಟು?

(3) ನಾನು ಒಂದು ಮಹಡಿಯ ಮೆಟ್ಟಲುಗಳನ್ನು 2 ಸಲ ಹತ್ತಿ 2 ಸಲ ಇಳಿಯುತ್ತೇನೆ. ಹತ್ತಿ ಇಳಿದುದು ಒಟ್ಟು 176 ಮೆಟ್ಟಲುಗಳಾದರೆ ಮಹಡಿಗೆ ಎಷ್ಟು ಮೆಟ್ಟಲುಗಳಿವೆ?

(4) ಒಂದು ಪೆಟ್ಟಿಗೆಯಲ್ಲಿ 25 ಪುಸ್ತಕಗಳಿವೆ. ಇನ್ನೊಂದರಲ್ಲಿ 33, ಮೂರನೆಯದರಲ್ಲಿ 58, ನಾಲ್ಕನೆಯದರಲ್ಲಿ 48 ಪುಸ್ತಕಗಳಿವೆ. ಪ್ರತಿಪೆಟ್ಟಿಗೆಯಲ್ಲೂ ಸಮವಾಗಿರುವಹಾಗೆ ಈ ಪುಸ್ತಕಗಳನ್ನು 4 ಪೆಟ್ಟಿಗೆಗಳಲ್ಲಿ ಇಟ್ಟರೆ ಒಂದೊಂದರಲ್ಲಿ ಎಷ್ಟು ಪುಸ್ತಕಗಳಿವೆ?

(5) i. ಒಂದೊಂದು ಕಟ್ಟಿನಲ್ಲಿ 64 ಕಡ್ಡಿಗಳಂತೆ 3 ಕಟ್ಟುಗಳಿವೆ ಒಟ್ಟಿಷ್ಟು ಕಡ್ಡಿಗಳಿವೆ?

ii. ಪ್ರತಿಕಟ್ಟಿನಲ್ಲೂ ಸಮವಾಗಿರುವಹಾಗೆ ಈ ಕಡ್ಡಿಗಳನ್ನು 4 ಕಟ್ಟುಗಳಾಗಿ ಕಟ್ಟಿದರೆ ಒಂದೊಂದರಲ್ಲಿ ಎಷ್ಟು ಕಡ್ಡಿಗಳಿವೆ?

(6) 1 ರೂ. ನಲ್ಲಿ ಎಷ್ಟು ದುಡ್ಡುಗಳಿವೆ.

ಇವುಗಳನ್ನು 4 ರಿಂದ ಭಾಗಿಸು:

(7) 216 (8) 396 (9) 1214 (10) 2831
(22) 10,098 (12) 99,786.

ಭಾಜಕ 5.

54 ನೆಯ ಅಭ್ಯಾಸ.

(1) ಒಂದು ಸಲಾಕಿಯು 165 ಅಂಗುಲಗಳುದ್ದವಿದೆ. ಅದನ್ನು ಸಮವಾಗಿ 5 ತುಂಡುಮಾಡಿದರೆ ಪ್ರತಿಯೊಂದು ತುಂಡಿನ ಉದ್ದವೆಷ್ಟು?

(2) 5 ಮೂಲೆಗಳುಳ್ಳ ಒಂದು ಮಂಟಪಕ್ಕೆ ಒಂದೇ ಎತ್ತರವಾದ 5 ಕಂಬಗಳನ್ನು ನಿಲ್ಲಿಸಿದೆ. ಇವುಗಳ ಒಟ್ಟು ಉದ್ದವು 125 ಅಡಿಗಳಾದರೆ ಒಂದೊಂದು ಕಂಬದ ಉದ್ದವೆಷ್ಟು?

(3) ನನ್ನಲ್ಲಿ 375 ಚಿತ್ರಗಳಿವೆ. ಒಂದೊಂದು ಪೊಟ್ಟಣದಲ್ಲೂ ಸಮವಾಗಿರುವಹಾಗೆ ಈ ಚಿತ್ರಗಳನ್ನು 5 ಪೊಟ್ಟಣಗಳಲ್ಲಿ ಕಟ್ಟಿದರೆ ಒಂದೊಂದು ಪೊಟ್ಟಣದಲ್ಲಿ ಎಷ್ಟು ಚಿತ್ರಗಳಿವೆ?

(4) i. 5 ಸಾವಿರಗಳಲ್ಲಿ ಎಷ್ಟು ಸಾವಿರಗಳಿವೆ?

ii. ಐದು ಸಾವಿರ ಗಿಟಕುಗಳಿಗೆ 325 ರೂ. ಗಳಾದರೆ ಸಾವಿರ ಗಿಟಕುಗಳಿಗೆ ಎಷ್ಟು?

(5) ನನ್ನಲ್ಲಿರುವ 246 ರೂ. ಗಳಿಗೆ 5 ರೂ. ನೋಟುಗಳನ್ನು ತೆಗೆದುಕೊಂಡರೆ ಎಷ್ಟು ನೋಟುಗಳು ಬರುತ್ತವೆ? ಮೇಲೆ ಎಷ್ಟು ರೂ. ಗಳು ಮಿಗುತ್ತವೆ?

(6) 5 ರೂ. ಗಳಿಗೆ ಒಂದು ಚಿನ್ನದ ಕಾಸು ಬಂದರೆ 225 ರೂ. ಗಳಿಗೆ ಎಷ್ಟು ಬರುತ್ತವೆ?

ಇವುಗಳನ್ನು 5 ರಿಂದ ಭಾಗಿಸು :—

(7) 455 (9) 675 (9) 1235 (10) 1347
(11) 92,945 (12) 1,24,055.

ಭಾಜಕ 6.

55 ನೆಯ ಅಭ್ಯಾಸ.

(1) 6 ದಿನಗಳಿಗೆ 144 ಗಂಟೆಗಳಾದರೆ ಒಂದು ದಿನಕ್ಕೆ ಎಷ್ಟು ಗಂಟೆಗಳು?

(2) 6 ಜನಗಳಿಗೆ 288 ರೂ. ಗಳನ್ನು ಸಮನಾಗಿ ಹಂಚು.

(3) ಒಂದು ಹಡಗು 6 ದಿನಗಳಲ್ಲಿ 336 ಮೈಲಿದೂರ ಹೋದರೆ ದಿನಕ್ಕೆಷ್ಟುದೂರ ಹೋದಂತಾಯಿತು?

(4) i. ಒಂದೊಂದು ಚೀಲದಲ್ಲಿ 64 ರೂ. ಗಳಂತೆ 4 ಚೀಲಗಳಲ್ಲಿ ರೂ. ಗಳಿವೆ. ಚೀಲದಲ್ಲಿ 88 ರೂ. ಗಳಂತೆ 2 ಚೀಲಗಳಲ್ಲಿ ರೂ. ಗಳಿವೆ. ಈ 6 ಚೀಲಗಳಲ್ಲಿ ಒಟ್ಟು ಎಷ್ಟು ರೂ. ಗಳಿವೆ?

ii. ಒಂದೊಂದು ಚೀಲದಲ್ಲೂ ಸಮವಾಗಿರುವ ಹಾಗೆ ಈ ರೂ. ಗಳನ್ನು 6 ಚೀಲಗಳಲ್ಲಿ ಹಾಕಿದರೆ ಒಂದೊಂದು ಚೀಲದಲ್ಲಿ ಎಷ್ಟು ರೂ. ಗಳಿವೆ?

(5) ರಾಮನಲ್ಲಿರುವ ಹಣದ 5 ರಷ್ಟು ಹಣವು ನನ್ನಲ್ಲಿದೆ. ನಮ್ಮಿಬ್ಬರಲ್ಲಿರುವ ಹಣವೂ ಸೇರಿ 252 ರೂ. ಗಳಾದರೆ ನನ್ನಲ್ಲೆಷ್ಟಿದೆ? ರಾಮನಲ್ಲೆಷ್ಟಿದೆ?

(6) 6 ಕಾಸುಗಳಿಗೊಂದು ಮಾವಿನಹಣ್ಣು ಬಂದರೆ, 486 ಕಾಸುಗಳಿಗೆ ಎಷ್ಟು ಹಣ್ಣುಗಳು ಬರುತ್ತವೆ?

ಇವುಗಳನ್ನು 6 ರಿಂದ ಭಾಗಿಸು:—

(7) 1236 (8) 2136 (9) 3126 (10) 3621
(11) 2022 (12) 2,09,901.

ಭಾಜಕ 7.

56 ನೆಯ ಅಭ್ಯಾಸ.

(1) ಒಂದು ಉಂಡೆಯಲ್ಲಿ 343 ಅಂಗುಲ ದಾರವಿದೆ. ಪ್ರತಿ ಒಂದು ಉಂಡೆಯಲ್ಲೂ ಸಮವಾಗಿರುವಹಾಗೆ ಈ ದಾರವನ್ನು 7 ಉಂಡೆಗಳನ್ನಾಗಿ ಕಟ್ಟಿದರೆ ಒಂದೊಂದು ಉಂಡೆಯಲ್ಲಿ ಎಷ್ಟು ಅಂಗುಲ ದಾರವಿದೆ?

(2) 7 ಜನಗಳಿಗೆ 406 ರೂ. ಗಳನ್ನು ಸಮವಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ರೂ. ಗಳು ಬರುತ್ತವೆ?

(3) ಒಂದು ಚಕ್ರದ 700 ಸುತ್ತುಗಳು 13,300 ಅಡಿಗಳಾದರೆ, 100 ಸುತ್ತುಗಳ ಅಳತೆ ಎಷ್ಟು?

(4) i. ಕಟ್ಟಿನಲ್ಲಿ 48 ಸೀಸದ ಕಡ್ಡಿಗಳಂತೆ 4 ಕಟ್ಟುಗಳಿವೆ. ಕಟ್ಟಿನಲ್ಲಿ 34 ಸೀಸದಕಡ್ಡಿಗಳಂತೆ 3 ಕಟ್ಟುಗಳಿವೆ. ಹಾಗಾದರೆ ಒಟ್ಟು ಎಷ್ಟು ಸೀಸದಕಡ್ಡಿಗಳಿವೆ?

ii. ಒಂದೊಂದು ಕಟ್ಟಿನಲ್ಲೂ ಸಮವಾಗಿರುವಹಾಗೆ ಈ ಸೀಸದ ಕಡ್ಡಿಗಳನ್ನು 7 ಕಟ್ಟುಗಳಾಗಿ ಕಟ್ಟಿದರೆ ಒಂದೊಂದರಲ್ಲಿ ಎಷ್ಟು ಸೀಸದ ಕಡ್ಡಿಗಳಿವೆ?

(5) ಒಂದು ವಾರಕ್ಕೆ 7 ದಿನಗಳಾದರೆ 364 ದಿನಗಳಿಗೆ ಎಷ್ಟು ವಾರಗಳು?

(6) i. 35 ರಲ್ಲಿ ಎಷ್ಟು 7 ಗಳು ಇವೆ? 119 ರಲ್ಲಿ ಎಷ್ಟು 7 ಗಳು ಇವೆ? 35,119 ಗಳಲ್ಲಿ ಎಷ್ಟು ಸಲ 7 ನ್ನು ಕಳೆಯಬಹುದು?

ii. 168 ರಲ್ಲಿ 7 ನ್ನು ಎಷ್ಟು ಸಲ ಕಳೆಯಬಹುದು?

ಇವುಗಳನ್ನು 7 ರಿಂದ ಭಾಗಿಸು :—

(7) 567	(8) 2835	(9) 11,111
(10) 9999	(11) 99,999	(12) 9,99,909.

ಭಾಜಕ 8.

57 ನೆಯ ಅಭ್ಯಾಸ.

1 ಮೈಲಿ = 8 ಫರ್ಲಾಂಗುಗಳು.

(1) 8 ಮೇಜುಗಳಿಗೆ 176 ರೂ. ಗಳಾದರೆ ಒಂದು ಮೇಜಿಗೆ ಎಷ್ಟು?

(2) 8 ಜನರು ಸೇರಿ ಸಮವಾಗಿ 192 ಹೂವುಗಳನು ಕೊಯ್ದರೆ ಒಬ್ಬೊಬ್ಬನು ಎಷ್ಟು ಹೂವುಗಳನ್ನು ಕೊಯ್ದನು?

(3) 8 ಪೆಟ್ಟಿಗೆಗಳಲ್ಲಿ ಸಮವಾಗಿ ಗೋಲಿಗಳು ತುಂಬಿವೆ. ಒಟ್ಟು 608 ಗೋಲಿಗಳಿದ್ದರೆ ಒಂದೊಂದು ಪೆಟ್ಟಿಗೆಯಲ್ಲಿ ಎಷ್ಟು ಗೋಲಿಗಳು ಇವೆ?

(4) ಒಂದು ಡಬ್ಬದಲ್ಲಿ 8 ಸೇರು ಬೇಳೆ ಹಿಡಿಯುತ್ತದೆ. 752 ಸೇರು ಬೇಳೆಯನ್ನು ಎಷ್ಟು ಡಬ್ಬಗಳಲ್ಲಿ ತುಂಬಬಹುದು?

(5) ಒಬ್ಬನು 1024 ರೂ. ಗಳನ್ನು 8 ವರ್ಷಗಳಲ್ಲಿ ಉಳಿಸಿದನು. ಪ್ರತಿವರ್ಷವೂ ಸರಾಸರಿ ಎಷ್ಟು ರೂ. ಗಳನ್ನು ಉಳಿಸಿದಹಾಗಾಯಿತು?

(6) ಒಂದು ಮೈಲಿಗೆ 1760 ಗಜಗಳಾದರೆ 1 ಫರ್ಲಾಂಗಿಗೆ ಎಷ್ಟು ಗಜಗಳು!

ಇವುಗಳನ್ನು 8 ರಿಂದ ಭಾಗಿಸು:—

(7) 352 (8) 738 (9) 4069 (10) 11,234

(11) 1,20,123 (12) 1,11,111.

ಭಾಜಕ 9.

58 ನೆಯ ಅಭ್ಯಾಸ.

(1) 288 ಮಣಿಗಳಲ್ಲಿ 9 ಸರಗಳನ್ನು ಕಟ್ಟುತ್ತೇನೆ. ಪ್ರತಿಸರದಲ್ಲೂ ಮಣಿಗಳು ಸಮವಾಗಿದ್ದರೆ ಒಂದೊಂದು ಸರದಲ್ಲಿ ಎಷ್ಟು ಮಣಿಗಳಿವೆ?

(2) 9 ಜನರಿಗೆ 675 ರೂ. ಗಳನ್ನು ಸಮವಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ರೂ. ಗಳು ಬರುತ್ತವೆ?

(3) ಸಮವಾಗಿ ನೀರುಹಿಡಿಯುವ ಗಾರೆಯ ತೊಟ್ಟಿಗಳು 9 ಇವೆ. ಇವುಗಳು ಒಟ್ಟು 1017 ಕೊಡಗಳ ನೀರನ್ನು ಹಿಡಿಯುತ್ತವೆ. ಹಾಗಾದರೆ ಪ್ರತಿಯೊಂದು ತೊಟ್ಟಿಯೂ ಎಷ್ಟು ಕೊಡಗಳ ನೀರನ್ನು ಹಿಡಿಯುತ್ತದೆ?

(4) 9 ತಿಂಗಳುಗಳಲ್ಲಿ 1125 ರೂ. ಗಳನ್ನು ನಾನು ಸಂಪಾದಿಸಿದರೆ ತಿಂಗಳಿಗೆ ಎಷ್ಟು ರೂ. ಗಳನ್ನು ಸಂಪಾದಿಸಿದ ಹಾಗಾಯಿತು?

(5) 9 ಗಜ ಗೋಡೆಗೆ 1170 ಇಟ್ಟಿಗೆಗಳು ಬೇಕಾದರೆ 1 ಗಜ ಗೋಡೆಗೆ ಎಷ್ಟು ಬೇಕು?

(6) ನಾನು 3096 ರೂ. ಗಳಿಗೆ 9 ಕುದುರೆಗಳನ್ನು ಕೊಂಡು ಕೊಳ್ಳುತ್ತೇನೆ. ಎಲ್ಲಾ ಕುದುರೆಗಳಿಗೂ ಒಂದೇ ಬೆಲೆಯಾದರೆ ಒಂದೊಂದು ಕುದುರೆಗೆ ಎಷ್ಟು ಬೆಲೆ?

ಇವುಗಳನ್ನು 9 ರಿಂದ ಭಾಗಿಸು :—

(7) 909 (8) 1551 (9) 1738 (10) 4269

(11) 11,006 (12) 88,088.

ಭಾಜಕ 10.

59 ನೆಯ ಅಭ್ಯಾಸ.

(1) ಇವುಗಳನ್ನು 10 ರಿಂದ ಭಾಗಿಸು :—

264, 789, 1235, 2135, 3215, 3450, 48760, 47866.

(2) ಈ ಲೆಕ್ಕಗಳಿಂದ ಗೊತ್ತಾಗುವುದೇನು? ಸಂಖ್ಯೆಯ ಕೊನೆಯ ಅಂಕವು ಏನನ್ನು ತೋರಿಸುತ್ತದೆ? ಅದನ್ನು ಬಿಟ್ಟುಬಿಟ್ಟರೆ ಬರುವ ಸಂಖ್ಯೆಯು ಏನನ್ನು ತೋರಿಸುತ್ತದೆ?

ಒಂದು ಸಂಖ್ಯೆಯನ್ನು 10 ರಿಂದ ಭಾಗಿಸಿದರೆ ಸಂಖ್ಯೆಯ ಕೊನೆಯಂಕವು ಶೇಷವಾಗುವುದು. ಕೊನೆಯಂಕವನ್ನು ಬಿಟ್ಟುಬಿಟ್ಟರೆ ಬರುವ ಸಂಖ್ಯೆಯು ಭಾಗಲಬ್ಧವಾಗುವುದು.

(3) ಈ ಕೆಳಗಿನ ಸಂಖ್ಯೆಗಳನ್ನು 10 ರಿಂದ ಭಾಗಿಸಿದರೆ ಬರುವ ಭಾಗಲಬ್ಧಗಳನ್ನೂ ಮತ್ತು ಶೇಷಗಳನ್ನೂ ಹೇಳು :—

487, 7129, 8906, 99999, 192380, 72460, 78340.

(4) i. ಒಂದು ಸಂಖ್ಯೆಯು 10 ರಿಂದ ಶೇಷವಿಲ್ಲದೆ ಭಾಗವಾಗಬೇಕಾದರೆ ಅದರ ಕೊನೆಯ ಅಂಕವು ಏನಾಗಿರಬೇಕು.

ii. 756, 825, 343, 999, 2347, 8912, 2748, 3205, 4108.

1234—ಈ ಸಂಖ್ಯೆಗಳು 10 ರಿಂದ ಶೇಷವಿಲ್ಲದೆ ಭಾಗವಾಗಬೇಕಾದರೆ ಇವುಗಳಿಗೆ ಒಂದಂಕದ ಯಾವ ಸಂಖ್ಯೆಗಳನ್ನು ಸೇರಿಸಬೇಕು ?

(5) ಇವೇ ಸಂಖ್ಯೆಗಳು 10 ರಿಂದ ಶೇಷವಿಲ್ಲದೆ ಭಾಗವಾಗಬೇಕಾದರೆ ಇವುಗಳಿಂದ ಒಂದಂಕದ ಯಾವ ಸಂಖ್ಯೆಗಳನ್ನು ಕಳೆಯಬೇಕು ?

(6) ಒಂದು ಮೈಲು ಗಂಟೆಗೆ 10 ಮೈಲಿಗಳಂತೆ ಹೋದರೆ 230 ಮೈಲಿಗಳನ್ನು ಎಷ್ಟು ಗಂಟೆಗಳಲ್ಲಿ ಹೋಗುತ್ತದೆ ?

(7) i. ಒಂದು ಕಟ್ಟಿನಲ್ಲಿ 12 ಮೇಣದ ಬತ್ತಿಗಳಂತೆ 35 ಕಟ್ಟುಗಳಿವೆ. ಒಟ್ಟು ಎಷ್ಟು ಬತ್ತಿಗಳಿವೆ ?

ii. ಕಟ್ಟಿಗೆ 10 ರಂತೆ ಇವುಗಳನ್ನು ಹೊಸದಾಗಿ ಕಟ್ಟಿದರೆ ಈಗ ಎಷ್ಟು ಕಟ್ಟುಗಳು ಆಗುತ್ತವೆ ?

(8) ಒಂದು ಕೌಳಿಗೆಗೆ 10 ಬಾಳೆಯ ಎಲೆಗಳಾದರೆ 560 ಎಲೆಗಳಿಗೆ ಎಷ್ಟು ಕೌಳಿಗೆಗಳು ?

(9) i. ನನ್ನಲ್ಲಿ 5 ಅಡಿ ಉದ್ದವುಳ್ಳ ಒಂದು ಕೋಲಿದೆ. 1 ಅಡಿಗೆ 12 ಅಂಗುಲಗಳಾದರೆ ಈ ಕೋಲು ಎಷ್ಟು ಅಂಗುಲಗಳ ಉದ್ದವಿದೆ ?

ii. ನನ್ನಲ್ಲಿ 10 ಅಂಗುಲಗಳ ಉದ್ದವುಳ್ಳ ಮತ್ತೊಂದು ಕೋಲಿದೆ. ಇದರಲ್ಲಿ ಎಷ್ಟು ಸಲ ಮೊದಲನೆಯ ಕೋಲನ್ನು ಅಳೆಯಬಹುದು ?

(10) 100 ಸೇರು ಬೆಳ್ಳಿಗೆ 2400 ರೂ. ಗಳಾದರೆ 10 ಸೇರಿಗೆಷ್ಟು ?

ಭಾಜಕ 11.

11 ರೂ. ಗಳಿಗೆ 2112 ನಿಂಬೆಹಣ್ಣುಗಳಾದರೆ 1 ರೂ. ಗೆ ಎಷ್ಟು ನಿಂಬೆ ಹಣ್ಣುಗಳು ?

2112÷11 ಹಣ್ಣುಗಳು

11) 2112	21 ; 1×11=11, 10 (ಶೇಷ)
192	101 ; 9×11=99, 2 (ಶೇಷ)
	22 ; 2×11=22 ಹಣ್ಣುಗಳು.

2112 ನಿಂಬೆಹಣ್ಣುಗಳು÷11=192 ಹಣ್ಣುಗಳು.

60 ನೆಯ ಅಭ್ಯಾಸ.

(1) 825 ಸೇರು ರಾಗಿಯನ್ನು 11 ಚೀಲಗಳಲ್ಲಿ ತುಂಬುತ್ತೇನೆ. ಎಲ್ಲಾ ಚೀಲಗಳಲ್ಲಿಯೂ ಸಮವಾಗಿ ತುಂಬಿದರೆ ಒಂದೊಂದು ಚೀಲದಲ್ಲಿ ಎಷ್ಟು ಸೇರು ರಾಗಿ ಇದೆ?

(2) ಒಂದು ಗೋಡೆಯಲ್ಲಿ 11 ಸಾಲು ಕಲ್ಲುಗಳಿವೆ. ಪ್ರತಿ ಒಂದು ಸಾಲಿನಲ್ಲೂ ಕಲ್ಲುಗಳು ಸಮವಾಗಿವೆ. 11 ಸಾಲುಗಳಿಂದ ಒಟ್ಟು 1078 ಕಲ್ಲುಗಳಿದ್ದರೆ ಒಂದೊಂದು ಸಾಲಿನಲ್ಲಿ ಎಷ್ಟು ಕಲ್ಲುಗಳಿವೆ?

(3) ಒಂದು ಗುಡ್ಸ್ ರೈಲಿನಲ್ಲಿ 11 ಬಂಡಿಗಳಲ್ಲಿ ಅಕ್ಕಿಮೂಟೆಗಳಿವೆ. ಪ್ರತಿಬಂಡಿಯಲ್ಲೂ ಸಮವಾಗಿ ಮೂಟೆಗಳು ಇವೆ. ಒಟ್ಟು 1375 ಮೂಟೆಗಳಿದ್ದರೆ ಒಂದೊಂದು ಬಂಡಿಯಲ್ಲಿ ಎಷ್ಟು ಮೂಟೆಗಳಿವೆ?

(4) ನನ್ನಲ್ಲಿ 2475 ಟಾಕುಗಳಿವೆ ಇವುಗಳನ್ನು ಸಮವಾಗಿ 11 ಪೊಟ್ಟಣಗಳನ್ನಾಗಿ ಕಟ್ಟಿದರೆ ಒಂದೊಂದು ಪೊಟ್ಟಣದಲ್ಲಿ ಎಷ್ಟು ಟಾಕುಗಳಿವೆ?

(5) ಒಂದು ಪುಸ್ತಕದಲ್ಲಿ 11 ಪುಟಗಳಿವೆ. ಮತ್ತು 4554 ಅಕ್ಷರಗಳಿವೆ. ಪ್ರತಿಯೊಂದು ಪುಟದಲ್ಲೂ ಸಮವಾಗಿ ಅಕ್ಷರಗಳಿದ್ದರೆ ಒಂದೊಂದು ಪುಟದಲ್ಲಿ ಎಷ್ಟು ಅಕ್ಷರಗಳಿವೆ?

(6) ನಾನು ಗಂಟೆಗೆ 11 ಪುಟಗಳನ್ನು ಓದುತ್ತೇನೆ 1331 ಪುಟಗಳನ್ನು ಓದುವುದಕ್ಕೆ ಎಷ್ಟು ಗಂಟೆಗಳು ಬೇಕು?

ಇವುಗಳನ್ನು 11 ರಿಂದ ಭಾಗಿಸು:—

(7) 2233 (8) 9026 (9) 45,678 (10) 70,809
(11) 1,01,010 (12) 1,10,101.

ಭಾಜಕ 12.

61 ನೆಯ ಅಭ್ಯಾಸ.

1 ವರ್ಷ=12 ತಿಂಗಳುಗಳು. ಆಣೆ=12 ಕಾಸುಗಳು

1 ಅಡಿ=12 ಅಂಗುಲಗಳು.

(1) ಪ್ರತಿಯೊಂದು ಬುಟ್ಟಿಯಲ್ಲಿಯೂ ಸಮವಾಗಿರುವಹಾಗೆ 576 ಮಾವಿನ ಹಣ್ಣುಗಳನ್ನು 12 ಬುಟ್ಟಿಗಳಲ್ಲಿ ತುಂಬುತ್ತೇನೆ. ಒಂದೊಂದು ಬುಟ್ಟಿಯಲ್ಲಿ ಎಷ್ಟು ಮಾವಿನ ಹಣ್ಣುಗಳಿವೆ?

(2) 864 ಪುಟಗಳಿರುವ ಒಂದು ಪುಸ್ತಕವನ್ನು 1 ವರುಷದಲ್ಲಿ ಓದಿದರೆ ತಿಂಗಳಿಗೆ ಎಷ್ಟು ಪುಟಗಳನ್ನು ಓದಬೇಕು?

(3) ಒಬ್ಬನಿಗೆ ವರುಷಕ್ಕೆ 1056 ರೂ. ಗಳ ಸಂಬಳ ಬಂದರೆ 1 ತಿಂಗಳಿಗೆ ಎಷ್ಟು?

(4) 1728 ಟಾಕುಗಳನ್ನು 12 ಪೆಟ್ಟಿಗೆಗಳಲ್ಲಿ ಸಮವಾಗಿ ತುಂಬಿದರೆ ಒಂದೊಂದು ಪೆಟ್ಟಿಗೆಯಲ್ಲಿ ಎಷ್ಟು ಟಾಕುಗಳಿವೆ?

(5) 264 ಕಾಸುಗಳಲ್ಲಿ ಎಷ್ಟು ಆಣೆಗಳಿವೆ?

(6) 2124 ಅಂಗುಲಗಳಿಗೆ ಎಷ್ಟು ಅಡಿಗಳು?

ಇವುಗಳನ್ನು 12 ರಿಂದ ಭಾಗಿಸು :—

(7) 1128 (8) 4308 (9) 8845 (10) 9734

(11) 10,732 (12) 70,002.

ಭಾಜಕ 13.

62 ನೆಯ ಅಭ್ಯಾಸ.

(1) 13 ಚಕ್ರಗಳಿಗೆ 182 ರೂ. ಗಳಾದರೆ 1 ಚಕ್ರಕ್ಕೆಷ್ಟು ಬೆಲೆ

(2) 13 ಪಲ್ಲಾ ಅಕ್ಕಿಗೆ 234 ರೂ. ಗಳಾದರೆ 1 ಪಲ್ಲಾ ಅಕ್ಕಿಗೆಷ್ಟು ಬೆಲೆ?

(3) ಗಂಟೆಗೆ 13 ಮೈಲಿಗಳಂತೆ ರೈಲು ಹೋದರೆ 624 ಮೈಲಿಗಳು ಹೋಗುವುದಕ್ಕೆ ಎಷ್ಟು ಗಂಟೆಗಳು ಬೇಕು?

(4) 936 ಕಿತ್ತಿಲೆ ಹಣ್ಣುಗಳನ್ನು ಸಮವಾಗಿ 13 ಬುಟ್ಟಿಗಳಲ್ಲಿ ತುಂಬಿದರೆ ಒಂದೊಂದು ಬುಟ್ಟಿಯಲ್ಲಿ ಎಷ್ಟು ಹಣ್ಣುಗಳಿವೆ?

(5) 1404 ರೂ. ಗಳನ್ನು 13 ಜನಗಳಿಗೆ ಸಮವಾಗಿ ಹಂಚು.

(6) 13 ಪೆಟ್ಟಿಗೆಗಳಲ್ಲಿ 1872 ಬಳಪಗಳಿವೆ. ಪ್ರತಿಯೊಂದು ಪೆಟ್ಟಿಗೆಯಲ್ಲೂ ಸಮವಾಗಿ ಬಳಪಗಳಿದ್ದರೆ ಒಂದೊಂದರಲ್ಲಿ ಎಷ್ಟು ಬಳಪಗಳಿವೆ?

ಇವುಗಳನ್ನು 13 ರಿಂದ ಭಾಗಿಸು :—

(7) 3939	(8) 5343	(9) 8765
(10) 11,345	(11) 22,335	(12) 90,909

ಭಾಜಕ 14.

63 ನೆಯ ಅಭ್ಯಾಸ.

(1) 14 ದಿನಗಳಿಗೆ 336 ಗಂಟೆಗಳಾದರೆ 1 ದಿನಕ್ಕೆ ಎಷ್ಟು ಗಂಟೆಗಳು?

(2) 14 ಹಾರ್ಮೋನಿಯಂಗಳಿಗೆ 756 ರೂ. ಗಳಾದರೆ ಒಂದು ಹಾರ್ಮೋನಿಯಂಗೆ ಏನು ಬೆಲೆ?

(3) 1008 ಗಜಗಳ ಕಾಗದವನ್ನು ಸಮವಾಗಿ 14 ಕಟ್ಟುಗಳನ್ನಾಗಿ ಮಾಡಿದರೆ ಒಂದೊಂದು ಕಟ್ಟಿನಲ್ಲಿ ಎಷ್ಟು ಗಜ ಕಾಗದವಿದೆ?

(4) ಮೈಸೂರಿನಿಂದ ಬೆಂಗಳೂರಿಗೆ 7 ಸಲ ಹೋಗಿ ಬಂದರೆ 1204 ಮೈಲಿಗಳ ದೂರ ಪ್ರಯಾಣಮಾಡಿದಹಾಗಾಯಿತು. ಮೈಸೂರಿನಿಂದ ಬೆಂಗಳೂರಿಗೆ ಎಷ್ಟು ಮೈಲಿಗಳು?

(5) 1 ತುಂಡಿಗೆ 14 ಮಾರುಗಳಂತೆ ತಂತಿಯನ್ನು ಕತ್ತರಿಸಿದರೆ 1554 ಮಾರು ತಂತಿಗೆ ಎಷ್ಟು ತುಂಡುಗಳು ಬರುತ್ತವೆ?

(6) 1 ಪುಟದಲ್ಲಿ 14 ಪಙ್ಕ್ತಿಗಳಿವೆ. ಒಂದು ಪುಸ್ತಕದಲ್ಲಿ 1722 ಪಙ್ಕ್ತಿಗಳಿದ್ದರೆ ಅದರಲ್ಲಿ ಎಷ್ಟು ಪುಟಗಳಿವೆ?

ಇವುಗಳನ್ನು 14 ರಿಂದ ಭಾಗಿಸು :—

(7) 2954 (8) 6478 (9) 9567 (10) 12,896 (11) 13 824 (12) 84,064.

ಭಾಜಕ 15.

64 ನೆಯ ಅಭ್ಯಾಸ.

(1) 375 ರೂ. ಗಳನ್ನು 15 ಜನಗಳಿಗೆ ಸಮವಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ಬರುತ್ತದೆ?

(2) 15 ಹಸುಗಳಿಗೆ 615 ರೂ. ಗಳಾದರೆ ಒಂದು ಹಸುವಿಗೆಷ್ಟು ?

(3) ಒಂದು ಸವರನ್ನಿಗೆ 15 ರೂ. ಗಳಾದರೆ 975 ರೂ. ಗಳಿಗೆ ಎಷ್ಟು ಸವರನ್ನುಗಳಾಗುವುವು ?

(4) ಒಂದು ಪಕ್ಷಕ್ಕೆ 15 ದಿನಗಳಾದರೆ 1095 ದಿನಗಳಿಗೆ ಎಷ್ಟು ಪಕ್ಷಗಳು ?

(5) 15 ರೈಲುಬಂಡಿಗಳು 2955 ಮಣಗಳ ಭಾರವನ್ನು ಹೊರುತ್ತವೆ, 1 ಬಂಡಿಯು ಎಷ್ಟು ಮಣಗಳ ಭಾರವನ್ನು ಹೊರುತ್ತದೆ ?

ಇವುಗಳನ್ನು 15 ರಿಂದ ಭಾಗಿಸು :—

(6) 4875 (7) 5685 (8) 5678 (9) 7564 (10) 9672 (11) 10,101 (12) 11,101.

ಭಾಜಕ 16.

65 ನೆಯ ಅಭ್ಯಾಸ.

1 ರೂಪಾಯಿ=16 ಆಣೆಗಳು.

(1) 304 ಆಣೆಗಳಿಗೆ ಎಷ್ಟು ರೂ. ಗಳು ?

(2) 16 ಕಟ್ಟುಗಳಲ್ಲಿ 384 ಸೀಸದಕಡ್ಡಿಗಳಿದ್ದರೆ ಒಂದೊಂದು ಕಟ್ಟಿನಲ್ಲಿ ಎಷ್ಟು ಸೀಸದಕಡ್ಡಿಗಳಿವೆ ?

(3) 1 ಕಟ್ಟಿಗೆ 16 ಸೀಸದಕಡ್ಡಿಗಳಂತೆ 528 ಸೀಸದಕಡ್ಡಿಗಳಿಗೆ ಎಷ್ಟು ಕಟ್ಟುಗಳು ಆಗುತ್ತವೆ?

(4) 768 ಕೊಳಗ ಬತ್ತವನ್ನು 16 ಬಂಡಿಗಳಲ್ಲಿ ಸಮವಾಗಿ ತುಂಬಿದರೆ ಒಂದೊಂದು ಬಂಡಿಯಲ್ಲಿ ಎಷ್ಟು ಕೊಳಗ ಬತ್ತವಿದೆ?

(5) 864 ಗಜ ಕಾಗದವನ್ನು ಸಮವಾಗಿ 16 ನೋಟುಬುಕ್ಕುಗಳಿಗೆ ಉಪಯೋಗಿಸಿದರೆ ಒಂದೊಂದು ನೋಟುಬುಕ್ಕಿನಲ್ಲಿ ಎಷ್ಟು ಗಜ ಕಾಗದವಿದೆ?

ಇವುಗಳನ್ನು 16 ರಿಂದ ಭಾಗಿಸು:—

(6) 1056 (7) 1408 (8) 1776 (9) 5678
(10) 6765 (11) 11,360 (12) 90,901.

66 ನೆಯ ಅಭ್ಯಾಸ.

A

(1) ಈ ಕೆಳಗೆ ಇರುವ ಭಾಗಹಾರಗಳನ್ನು ಮಾಡು:—

(1) $1284 \div 2$ (5) $8676 \div 6$ (9) $21,345 \div 10$
(2) $2147 \div 3$ (6) $9235 \div 7$
(3) $4753 \div 4$ (7) $8254 \div 8$
(4) $6748 \div 5$ (8) $12,345 \div 9$

(2) ಇವುಗಳನ್ನು ಮಾಡಿ ಸರಿ ಎಂದು ತೋರಿಸು:—

(15 ರೂ. ÷ 3) + (21 ರೂ. ÷ 3) = (15 ರೂ. + 21 ರೂ.) ÷ 3.
(12 ರೂ. ÷ 2) + (36 ರೂ. ÷ 2) = (12 ರೂ. + 36 ರೂ.) ÷ 2.
$(48 \div 6) + (30 \div 6) = (48 + 30) \div 6.$
$(21 \div 7) + (28 \div 7) + (35 \div 7) = (21 + 28 + 35) \div 7.$

(3) (16 ರೂ. ÷ 4) + (28 ರೂ. ÷ 4) = ರೂ ÷ 4.
(10 ಆ. ÷ 5) + (15 ಆ. ÷ 5) + (35 ಆ. ÷ 5) = ಆ. ÷ 5.
$(24 \div 8) + (32 \div 8) + (16 \div 8) = \quad \div 8.$

ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ.

(4) $\frac{462}{2} = \frac{400}{2} + \frac{50}{2} + \frac{12}{2}$

$\frac{825}{3} = \frac{720}{3} + \frac{90}{3} + \frac{15}{3}$

$\frac{924}{4} = \frac{800}{4} + \frac{100}{4} + \frac{24}{4}$

$\frac{1125}{5} = \frac{1000}{5} + \frac{100}{5} + \frac{25}{5}$ ಎಂದು ತೋರಿಸು.

(5) $1+2+3+4+5+6+7 = \frac{7 \times 8}{2}$

$1+2+3+4+5+6+7+8+9 = \frac{9 \times 10}{2}$

$1+2+3+4+5+6+7+8+9+10+11 = \frac{11 \times 12}{2}$

ಎಂದು ತೋರಿಸು.

(6) i. ನಾನು ಕಾಸಿಗೆ 3 ಎಲೆಗಳಂತೆ 432 ಊಟದೆಲೆಗಳನ್ನು ಕೊಂಡುಕೊಳ್ಳುತ್ತೇನೆ. ಹಾಗಾದರೆ ಎಷ್ಟು ಕಾಸು ಬೇಕು?

ii. ಕಾಸಿಗೆ ಎರಡರಂತೆ ಮಾರಿದರೆ ಎಷ್ಟು ಕಾಸುಗಳು ಬರುತ್ತವೆ? ಎಷ್ಟು ಲಾಭವು ಬಂದೀತು?

(7) ನನ್ನಲ್ಲಿ 384 ಚಿತ್ರಗಳು ಇವೆ. ಇವುಗಳನ್ನು ನನ್ನ ಕೊಠಡಿಯ 4 ಗೋಡೆಗಳಿಗೂ ಸಮವಾಗಿ ಹಚ್ಚಿದರೆ ಪ್ರತಿಯೊಂದು ಗೋಡೆಯಲ್ಲೂ ಎಷ್ಟು ಚಿತ್ರಗಳು ಇವೆ?

(8) 315 ಎಳನೀರುಗಳನ್ನು 7 ಬಂಡಿಗಳಲ್ಲಿ ಸಮವಾಗಿ ತುಂಬಿದರೆ ಒಂದೊಂದು ಬಂಡಿಯಲ್ಲಿ ಎಷ್ಟು ಇವೆ?

(9) ನಾನು 288 ಪುಟಗಳುಳ್ಳ ಒಂದು ಪುಸ್ತಕವನ್ನು 9 ದಿವಸಗಳಲ್ಲಿ ಮುಗಿಸಬೇಕಾಗಿದೆ. ಹಾಗಾದರೆ ನಾನು ಪ್ರತಿಯೊಂದು ದಿವಸವೂ ಸರಾಸರಿ ಎಷ್ಟು ಪುಟಗಳನ್ನು ಓದಬೇಕು?

(10) ಒಂದು ಹೊಗೆಬಂಡಿಯು 6 ಮಿನಿಟುಗಳಲ್ಲಿ 2112 ಗಜಗಳ ದೂರ ಹೋದರೆ ಮಿನಿಟಿಗೆ ಎಷ್ಟು ದೂರ ಹೋದಂತಾಗುವುದು?

B

ಈ ಭಾಗಹಾರಗಳನ್ನು ಮಾಡು:—

(1) 7984÷11 (3) 9907÷13 (5) 11,378÷15

(2) 8684÷12 (4) 9955÷14 (6) 11,472÷16

(2) ಇವುಗಳನ್ನು ಮಾಡಿ ಸರಿ ಎಂದು ತೋರಿಸು:—

(i) (44 ರೂ. ÷ 11) + (77 ರೂ. ÷ 11) = (44 ರೂ. + 77 ರೂ.)÷11.

(ii) 36 ರೂ. ÷ 12+48 ರೂ. ÷12+72 ರೂ. ÷ 12=(36 ರೂ. +48 ರೂ. +72ರೂ.)÷12.

(iii) 143 ÷ 13 + 169÷13 + 156÷13 = (143 + 169 + 156)÷13

(3) (22 ರೂ. ÷11) + (33 ರೂ. ÷11) + (44 ರೂ. ÷11)= ರೂ. ÷11.

(i) (30 ÷ 15)+(45 ÷ 15)+(135 ÷ 15) = ÷15.

(ii) (144 ÷ 16)+(256 ÷ 16)+(96 ÷ 16) = ÷16.

ಬಿಟ್ಟಿರುವ ಕಡೆ ಸರಿಯಾದ ಸಂಖ್ಯೆಗಳನ್ನು ಬರೆ.

(4) $\frac{507}{13}+\frac{338}{13}+\frac{676}{13}=\frac{1521}{13}$

$\frac{1331}{11}+\frac{176}{11}-\frac{165}{11}=\frac{1342}{11}$ ಎಂದು ತೋರಿಸು.

(5) i. ನನ್ನಲ್ಲಿ 500 ರೂ. ಗಳಿವೆ. ಜತೆ 1ಕ್ಕೆ 7 ರೂ. ಗಳಂತೆ 2 ಜತೆ ಪಂಚೆಗಳನ್ನೂ, ಕಣ 1ಕ್ಕೆ 2ರೂ. ಗಳಂತೆ 4 ರವಕೆ ಕಣಗಳನ್ನೂ, 11 ರೂ. ಗಳಿಗೆ 1 ಸೀರೆಯನ್ನೂ ಕೊಂಡುಕೊಂಡಮೇಲೆ ನನ್ನಲ್ಲಿ ಎಷ್ಟು ರೂ. ಗಳು ಉಳಿಯುತ್ತವೆ?

ii. ಈ ಉಳಿದ ಹಣಕ್ಕೆ 11 ರೇಶಿಮೆ ಚೌಕಗಳನ್ನು ಕೊಂಡುಕೊಂಡರೆ 1 ಚೌಕಕ್ಕೆ ಎಷ್ಟು ಬೆಲೆ?

(6) 12 ಕಬ್ಬಿಣದ ಪೆಟ್ಟಿಗೆಗಳಿಗೆ 900 ರೂ. ಗಳಾದರೆ ಒಂದು ಪೆಟ್ಟಿಗೆಗೆ ಎಷ್ಟು ಬೆಲೆ?

(7) ಕಾಸಿಗೆ 13ಬೆಂಡೆಕಾಯಿಗಳಾದರೆ 312ಕಾಯಿಗಳಿಗೆ ಎಷ್ಟು?

(8) 1 ರೂ. ಗೆ 14 ಸೇರು ಹುರುಳಿಯಾದರೆ 924 ಸೇರು ಹುರುಳಿಗೆ ಏನು ಬೆಲೆ?

(9) ತಿಂಗಳಿಗೆ 15 ರೂ. ಗಳಂತೆ ನಾನು ವೆಚ್ಚ ಮಾಡಿದರೆ 945 ರೂ. ಗಳು ಎಷ್ಟು ತಿಂಗಳಿಗೆ ಸಾಕಾಗುತ್ತವೆ?

(10) 1 ಪಲ್ಲ ಅಕ್ಕಿಗೆ 16 ರೂ. ಗಳಾದರೆ 384 ರೂ. ಗಳಿಗೆ ಎಷ್ಟು ಪಲ್ಲ ಅಕ್ಕಿ ಬರುತ್ತದೆ?

II. 16ಕ್ಕಿಂತ ಹೆಚ್ಚಾದ ಎರಡಂಕಗಳುಳ್ಳ ಸಂಖ್ಯೆಗಳು ಭಾಜಕದಲ್ಲಿದ್ದರೆ ಭಾಗಾಹಾರ ಮಾಡುವ ಕ್ರಮ.

ಹತ್ತುಗಳಿಂದ ಭಾಗಿಸುವುದು.

ಭಾಜಕ 20.

1234÷20 ಎಷ್ಟು?

1234=123 ಹತ್ತುಗಳು, ಮೇಲೆ 4 ಒಂದುಗಳು.

123 ಹತ್ತುಗಳಲ್ಲಿ ಎಷ್ಟು 2 ಹತ್ತುಗಳು ಇವೆ?

1234 (=123 ಹತ್ತುಗಳು ಮೇಲೆ 4 ಒಂದುಗಳು) ರಲ್ಲಿ ಎಷ್ಟು 2 ಹತ್ತುಗಳು ಇವೆ? ಮೇಲೆ ಎಷ್ಟು ಉಳಿಯುತ್ತವೆ?

ಇದನ್ನು ಹೀಗೆ ಬರೆಯುತ್ತೇವೆ.

20)1234

61, ಮೇಲೆ 1 ಹತ್ತು 4 ಒಂದುಗಳು.

ಭಾಗಲಬ್ಧ 61, ಶೇಷ 14.

30, 40, 50, 60, 70, 80, 90 ಗಳು ಭಾಜಕಗಳಾಗಿದ್ದರೂ ಹೀಗೆಯೇ.

ಹೀಗೆ ಹತ್ತುಗಳಿಂದ ಒಂದು ಸಂಖ್ಯೆಯನ್ನು ಭಾಗಿಸಲು ಅದರ ಕೊನೆಯಂಕವನ್ನು ಬಿಟ್ಟು ಉಳಿದುದನ್ನು ಭಾಜಕದ ದಶಕಸ್ಥಾನದಲ್ಲಿ ರುವ ಅಂಕದಿಂದ ಭಾಗಿಸಿದರೆ ಭಾಗಲಬ್ಧವು ಬರುವುದು. ಏನಾದರೂ ಉಳಿದರೆ ಅದರ ಮುಂದೆ ಸಂಖ್ಯೆಯಲ್ಲಿ ಬಿಟ್ಟ ಕೊನೆಯಂಕವನ್ನು ಬರೆ ಯಲು ಅದು ಶೇಷವಾಗುವುದು. ಹಾಗೆ ಏನೂ ನಿಲ್ಲದಿದ್ದರೆ ಕೊನೆ ಯಂಕವೇ ಶೇಷವಾಗುವುದು.

67 ನೆಯ ಅಭ್ಯಾಸ

60 ಸೆಕೆಂಡುಗಳು = 1 ಮಿನಿಟ್ಟು 60 ಮಿನಿಟ್ಟುಗಳು = 1 ಗಂಟೆ

(1) 98,765—ಇದನ್ನು 10, 20, 30, 40, 50, 60, 70, 80, 90 ರಿಂದ ಬೇರೆಬೇರೆ ಭಾಗಿಸು.

(2) 2400 ಸೆಕೆಂಡುಗಳಲ್ಲಿ ಎಷ್ಟು ಮಿನಿಟುಗಳಿವೆ?

(3) 784 ಸೆಕೆಂಡುಗಳಲ್ಲಿ ಎಷ್ಟು ಮಿನಿಟುಗಳಿವೆ? ಮೇಲೆಷ್ಟು ಸೆಕೆಂಡುಗಳು ಉಳಿಯುತ್ತವೆ?

(4) i. 86,400 ಸೆಕೆಂಡುಗಳಲ್ಲಿ ಎಷ್ಟು ಮಿನಿಟುಗಳಿವೆ?

ii. ಈ ಮಿನಿಟುಗಳಲ್ಲಿ ಎಷ್ಟು ಗಂಟೆಗಳಿವೆ?

iii. 14,400 ಸೆಕೆಂಡುಗಳಿಗೆ ಎಷ್ಟು ಗಂಟೆಗಳು?

(5) 750 ರೂ. ಗಳಿಗೆ 50 ರೂ ನೋಟುಗಳು ಎಷ್ಟು ಬರುತ್ತವೆ?

(6) ಒಂದು ಬುಟ್ಟಿಯಲ್ಲಿ 30 ಹಣ್ಣುಗಳಂತೆ ತುಂಬಿದರೆ 2,400 ಹಣ್ಣುಗಳನ್ನು ತುಂಬುವುದಕ್ಕೆ ಎಷ್ಟು ಬುಟ್ಟಿಗಳು ಬೇಕು?

(7) ಒಂದು ತರಗತಿಯಲ್ಲಿ 20 ಹುಡುಗರೂ, 20 ಹುಡುಗಿಯರೂ ಇದ್ದಾರೆ. ಇವರಿಗೆ 320 ಹಣ್ಣುಗಳನ್ನು ಸಮವಾಗಿ ಹಂಚು.

(8) 1 ಚೀಲಕ್ಕೆ 70 ಸೇರುಗಳಂತೆ ತುಂಬಿದರೆ 490 ಸೇರುಗಳನ್ನು ಎಷ್ಟು ಚೀಲಗಳಲ್ಲಿ ತುಂಬಬಹುದು?

(9) 20 ದಸ್ತುಗಳಿಗೆ 1 ಕಟ್ಟು ಆದರೆ 300 ದಸ್ತುಗಳಿಗೆ ಎಷ್ಟು ಕಟ್ಟುಗಳು?

(10 i. 75 ಸೇರು ಹಿಡಿಯುವ 22 ಚೀಲಗಳಲ್ಲಿ ಅಕ್ಕಿ ತುಂಬಿದೆ. ಹಾಗಾದರೆ ಒಟ್ಟೆಷ್ಟು ಸೇರು ಅಕ್ಕಿ ಇದೆ?

ii. ಇದನ್ನು 50 ಸೇರುಗಳು ಹಿಡಿಯುವ ಚೀಲಗಳಲ್ಲಿ ತುಂಬಿದರೆ ಎಷ್ಟು ಚೀಲಗಳು ಬೇಕು?

61,048 ನ್ನು 23 ರಿಂದ ಭಾಗಿಸು.

```
23)61.048(2654
   46
   ---
   150
   138
   ---
    124
    115      ಲಬ್ಧ = 2654, ಶೇಷ = 6.
    ---
     98
     92
     ---
      6
```

61 ರಲ್ಲಿ 23 ಎರಡು ಸಲ ಇದೆ; 15 ಉಳಿವುದು. 150 ರಲ್ಲಿ 23 ಆರು ಸಲ ಇದೆ; ಶೇಷ 12.

124 ರಲ್ಲಿ 23 ಐದುಸಲ ಇದೆ; 9 ಉಳಿವುದು. 98 ರಲ್ಲಿ 23 ನಾಲ್ಕುಸಲ ಇದೆ; ಕೊನೆಗೆ ಶೇಷ 6.

68 ನೆಯ ಅಭ್ಯಾಸ.

(1) 9139 ನ್ನು 17, 24, 35, 41, 46 ರಿಂದ ಬೇರೆಬೇರೆ ಭಾಗಿಸು.

(2) 6514 ನ್ನು 47, 53, 59 ರಿಂದ ಬೇರೆಬೇರೆ ಭಾಗಿಸು.

(3) 5781 ನ್ನು 61, 63, 65, ರಿಂದ ಬೇರೆಬೇರೆ ಭಾಗಿಸು.

(4) 4328 ನ್ನು 67, 71, 73 ರಿಂದ ಭಾಗಿಸು.

(5) 12,345 ನ್ನು 77, 79, 83 ರಿಂದ ಭಾಗಿಸು.

(6) ಒಂದೇ ಬೆಲೆಯುಳ್ಳ 23 ಮನೆಗಳಿಗೆ 69,207 ರೂ. ಗಳಾದರೆ ಒಂದೊಂದು ಮನೆಯ ಬೆಲೆ ಎಷ್ಟು?

(7) 1008 ಕುಕ್ಕೆಗಳ ಸಣ್ಣ ಜಲ್ಲಿಯನ್ನು 56 ಬಂಡಿಗಳಲ್ಲಿ ಸಮವಾಗಿ ತುಂಬಿದರೆ ಒಂದೊಂದು ಬಂಡಿಯಲ್ಲಿ ಎಷ್ಟು ಕುಕ್ಕೆಗಳ ಜಲ್ಲಿ ಇದೆ?

(8) ಒಂದು ನಡುಮನೆಯ ನೆಲಕ್ಕೆ 1087 ಹಂಚುಗಳನ್ನು ಹರವಿದೆ. 1 ಸಾಲಿನಲ್ಲಿ 47 ಹಂಚುಗಳಿದ್ದರೆ ಎಷ್ಟು ಸಾಲುಗಳಿವೆ?

(9) ಒಂದು ಹಡಗು ದಿನಕ್ಕೆ 85 ಮೈಲಿ ದೂರ ಹೋದರೆ 5185 ಮೈಲಿ ದೂರ ಹೋಗಲು ಎಷ್ಟು ದಿನ ಬೇಕು?

(10) ನಾವು 24 ಗಂಟೆಗಳಲ್ಲಿ 21,600 ಸಲ ಉಸಿರು ಬಿಡುತ್ತೇವೆ. ಗಂಟೆಗೆ ಎಷ್ಟು ಸಲ ಉಸಿರು ಬಿಟ್ಟಂತಾಗುವುದು?

(11) i. 663 ಬಾಳೆಹಣ್ಣುಗಳನ್ನು 17 ಜನರು ಸಮವಾಗಿ ಹಂಚಿಕೊಂಡರೆ ಒಬ್ಬೊಬ್ಬನಿಗೆ ಎಷ್ಟು ಹಣ್ಣುಗಳು ಬರುತ್ತವೆ?

ii. ದುಡ್ಡಿಗೆ 3 ಹಣ್ಣುಗಳಂತೆ ಅವರು ಮಾರಿಬಿಟ್ಟರೆ ಒಬ್ಬೊಬ್ಬನಿಗೆ ಎಷ್ಟು ದುಡ್ಡುಗಳು ಬರುತ್ತವೆ?

(12) i. ಒಂದಂಗಡಿಯಲ್ಲಿ 9 ರಾಸಿ ಹಣ್ಣುಗಳಿದ್ದುವು. ಒಂದೊಂದು ರಾಸಿಯಲ್ಲಿ 325 ಹಣ್ಣುಗಳಿದ್ದರೆ ಒಟ್ಟು ಎಷ್ಟು ಹಣ್ಣುಗಳಿದ್ದುವು?

ii. ಅಂಗಡಿಯವನು ದಿನ 1ಕ್ಕೆ 75 ಹಣ್ಣುಗಳನ್ನು ಮಾರುತ್ತಾ ಬಂದಲ್ಲಿ ಹಣ್ಣುಗಳೆಲ್ಲಾ ಕ್ರಯವಾಗಲು ಎಷ್ಟು ದಿನಗಳಾಗುವುವು?

(13) i. ಒಬ್ಬನಲ್ಲಿ 1373 ರೂ. ಗಳಿದ್ದುವು. ಇದರಲ್ಲೊಬ್ಬನಿಗೆ 57 ರೂ. ಗಳನ್ನು ಕೊಟ್ಟ ಬಳಿಕ ಎಷ್ಟುಳಿಯಿತು?

ii. ಈ ಉಳಿದುದನ್ನು 47 ಮಂದಿಗೆ ಹಂಚಿದರೆ ಒಬ್ಬೊಬ್ಬನಿಗೆಷ್ಟು ಬರುವುದು?

(14) ಒಬ್ಬನ ಬಳಿ 10,000 ಮಣಿಗಳಿವೆ. ಆದರಲ್ಲಿ ಅರ್ಧವನ್ನು ಮತ್ತೊಬ್ಬನಿಗೆ ಕೊಟ್ಟು ಉಳಿದುದನ್ನು 25 ಮಂದಿಗೆ ಹಂಚಿದರೆ ಒಬ್ಬೊಬ್ಬನಿಗೆಷ್ಟು ಬರುವುದು?

(15) 52 ರೂ. ಗಳಿಗೆ ಒಂದು ಸಾವಿರ ಗಿಟಕುಗಳು ಬಂದರೆ 3900 ರೂ. ಗಳಿಗೆ ಎಷ್ಟು ಸಾವಿರ ಗಿಟಕುಗಳು ಬರುತ್ತವೆ?

III ಮೂರಂಕಗಳುಳ್ಳ ಸಂಖ್ಯೆಗಳು ಭಾಜಕಗಳಾಗಿದ್ದರೆ ಭಾಗಹಾರ ಮಾಡುವ ಕ್ರಮ.

ನೂರುಗಳಿಂದ ಭಾಗಿಸುವುದು.

ಭಾಜಕ 100.

1234 ನ್ನು 100 ರಿಂದ ಭಾಗಿಸು.

1234 = 12 ನೂರು, ಮೇಲೆ 34.

12 ನೂರು ÷ 1 ನೂರು = 12.

ಭಾಗಲಬ್ಧ = 12, ಶೇಷ 34.

ಭಾಜಕ 200.

21,334 ನ್ನು 200 ರಿಂದ ಭಾಗಿಸು.

21,334 = 231 ನೂರು, ಮೇಲೆ 34.

213 ನೂರುಗಳಲ್ಲಿ ಎಷ್ಟು 2 ನೂರು (= 200) ಗಳು ಇವೆ? ಮೇಲೆಷ್ಟು ಉಳಿಯುತ್ತದೆ?

21,334 (= 213 ನೂರುಗಳು, ಮೇಲೆ 34) ರಲ್ಲಿ ಎಷ್ಟು 2 ನೂರುಗಳು ಇವೆ? ಮೇಲೆ ಎಷ್ಟು ಉಳಿಯುತ್ತದೆ?

ಇದನ್ನೇ ಹೀಗೆ ಬರೆಯುತ್ತೇವೆ:—

```
2'0'0)2'1,33'4'
      ---------
       106,     ಮೇಲೆ 1 ನೂರು 34.
```

ಭಾಗಲಬ್ಧ = 106, ಶೇಷ 134.

300, 400, 500, 600, 700, 800, 900 ಭಾಜಕದಲ್ಲಿದ್ದರೂ ಹೀಗೆಯೇ.

ಹೀಗೆ ನೂರುಗಳಿಂದ ಒಂದು ಸಂಖ್ಯೆಯನ್ನು ಭಾಗಿಸಲು ಅದರ ಕೊನೆಯ ಎರಡಂಕಗಳನ್ನು ಬಿಟ್ಟು ಉಳಿದುದನ್ನು ಭಾಜಕದ ನೂರರ ಸ್ಥಾನದಲ್ಲಿರುವ ಅಂಕದಿಂದ ಭಾಗಿಸಿದರೆ ಭಾಗಲಬ್ಧವು ಬರುವುದು. ಏನಾದರೂ ಉಳಿದಲ್ಲಿ ಅದರ ಮುಂದೆ ಬಿಟ್ಟ ಕೊನೆಯ ಎರಡಂಕಗಳನ್ನು ಸಂಖ್ಯೆಯಲ್ಲಿರುವ ಹಾಗೆ ಬರೆದರೆ ಬರುವ ಸಂಖ್ಯೆಯೇ ಶೇಷವಾಗುವುದು. ಹಾಗೆ ಏನೂ ಉಳಿಯದಿದ್ದರೆ ಸಂಖ್ಯೆಯ ಕೊನೆಯಲ್ಲಿರುವ ಎರಡಂಕಗಳನ್ನು ಅಲ್ಲಿರುವ ಹಾಗೆಯೇ ಬರೆದರೆ ಬರುವ ಸಂಖ್ಯೆಯೇ ಶೇಷವಾಗುವುದು.

69 ನೆಯ ಅಭ್ಯಾಸ.

(1) 34,567 ನ್ನು 100, 200, 300, 400, 500, 600, 700, 800, 900 ರಿಂದ ಬೇರೆ ಬೇರೆ ಭಾಗಿಸು.

(2) i. ನನ್ನಲ್ಲಿ 5790 ರೂ ಗಳಿವೆ. ಈ ಹಣಕ್ಕೆ 100 ರೂ. ಗಳ ನೋಟುಗಳನ್ನು ತೆಗೆದುಕೊಂಡರೆ ನನಗೆ ಎಷ್ಟು ನೋಟುಗಳು ಬರುತ್ತವೆ, ಮೇಲೆ ಎಷ್ಟು ರೂ. ಗಳು ಉಳಿಯುತ್ತವೆ.

ii. ಉಳಿದ ಹಣಕ್ಕೆ ಎಷ್ಟು ರೂ. ಗಳನ್ನು ಸೇರಿಸಿದರೆ 1 ನೂರು ರೂ. ನೋಟು ಬರುತ್ತದೆ?

(3) 1 ಗುಣಿಯಲ್ಲಿ 2 ಪಲ್ಲ ರಾಗಿಯನ್ನು ತುಂಬಬಹುದು. 2600 ಸೇರು ರಾಗಿಯನ್ನು ತುಂಬಬೇಕಾದರೆ ಎಷ್ಟು ಗುಣಿಗಳು ಬೇಕು? (ಪಲ್ಲ = 100 ಸೇರುಗಳು)

(4) 1 ಮನೆಗೆ 600 ರೂ. ಗಳಂತೆ 1500 ರೂ. ಗಳಿಗೆ ಎಷ್ಟು ಮನೆಗಳನ್ನು ಕಟ್ಟಬಹುದು?

(5) 2500 ರೂ. ಗಳಿಗೆ 500 ರೂ. ಗಳ ನೋಟುಗಳು ಎಷ್ಟು ಬರುತ್ತವೆ?

3,44,937 ನ್ನು 263 ರಿಂದ ಭಾಗಿಸು.

```
263)3,44,937(1311
      263
      ---
      819
      789
      ---
       303
       263      ಲಬ್ಧ = 1311.
       ---
        407     ಶೇಷ = 144.
        263
        ---
        144
```

70 ನೆಯ ಅಭ್ಯಾಸ.

(1) 51,052 ನ್ನು 127, 134, 151 ರಿಂದ ಭಾಗಿಸು.

(2) 40,987 ನ್ನು 169, 185, 199 ರಿಂದ ಭಾಗಿಸು.

(3) 30,002 ನ್ನು 252, 287, 297 ರಿಂದ ಭಾಗಿಸು.

(4) 11,011 ನ್ನು 325, 358, 417 ರಿಂದ ಭಾಗಿಸು.

(5) 11,709 ನ್ನು 459, 541, 718 ರಿಂದ ಭಾಗಿಸು.

(6) 12,345 ನ್ನು 777, 888, 939 ರಿಂದ ಭಾಗಿಸು.

71 ನೆಯ ಅಭ್ಯಾಸ.

(1) 1 ಕಟ್ಟು ಕಾಗದಕ್ಕೆ 480 ಗಜಗಳಾದರೆ 15,840 ಗಜ ಗಳಿಗೆಷ್ಟು ಕಟ್ಟುಗಳು ?

(2) ಒಂದು ವರ್ಷಕ್ಕೆ 365 ದಿನಗಳಾದರೆ 8395 ದಿನಗಳಿಗೆ ಎಷ್ಟು ವರ್ಷಗಳು ?

(3) ಒಂದು ಬೀರುವಿನಲ್ಲಿ 288 ಪುಸ್ತಕಗಳನ್ನಿಡಬಹುದು, 26,208 ಪುಸ್ತಕಗಳನ್ನಿಡಲು ಎಷ್ಟು ಬೀರುಗಳು ಬೇಕು ?

(4) ತೊಲೆಗೆ 121 ರೂ. ಗಳ ಮೇರೆ 1,19,427 ರೂ. ಗಳಿಗೆ ಎಷ್ಟು ತೊಲೆಗಳು ಬರುವುವು ?

(5) ಒಂದು ಚಕ್ರವು ಮಿನಿಟಿಗೆ 237 ಸಲ ತಿರುಗುವುದು. 8,95,702 ಸಲ ತಿರಗಲು ಎಷ್ಟು ಹೊತ್ತಾಗುವುದು ?

(6) i. ಒಂದು ಕಟ್ಟಿನಲ್ಲಿ 47 ಹಂಚಿ ಕಡ್ಡಿಗಳಿವೆ. ಇಂತಹ 33 ಕಟ್ಟುಗಳಲ್ಲಿ ಎಷ್ಟು ಕಡ್ಡಿಗಳಿವೆ ?

ii. ಈ ಕಟ್ಟುಗಳನ್ನೆಲ್ಲಾ ಬಿಚ್ಚಿ ಒಂದೊಂದರಲ್ಲಿ 141 ಕಡಿ ಗಳಂತೆ ಕಂತೆಗಳನ್ನು ಕಟ್ಟಿದರೆ ಎಷ್ಟು ಕಂತೆಗಳಾಗುತ್ತವೆ ?

(7) i. ಒಂದು ಪಙ್ಕ್ತಿಯಲ್ಲಿ 15 ಅಕ್ಷರಗಳಿವೆ. ಮತ್ತು 1 ಪುಟ ದಲ್ಲಿ 13 ಪಙ್ಕ್ತಿಗಳಿವೆ. ಹಾಗಾದರೆ ಆ ಪುಟದಲ್ಲಿ ಎಷ್ಟು ಅಕ್ಷರಗಳಿವೆ?

ii. ಪ್ರತಿ ಒಂದು ಪುಟದಲ್ಲೂ ಹೀಗಿದ್ದರೆ 4485 ಅಕ್ಷರ ಗಳು ಎಷ್ಟು ಪುಟಗಳಲ್ಲಿ ಇವೆ ?

(8) 175 ತೊಲಾ ತೂಕ ಚಿನ್ನಕ್ಕೆ 4725 ರೂ. ಗಳಾದರೆ 1 ತೊಲಾಕ್ಕೆ ಎಷ್ಟು ರೂ. ಗಳು ?

(9) ಒಬ್ಬನಲ್ಲಿ 31,250 ಇಟ್ಟಿಗೆಗಳಿವೆ. ಅವುಗಳನ್ನು 1 ಬಂಡಿಗೆ 250 ಇಟ್ಟಿಗೆಗಳಂತೆ ಸಾಗಿಸಬೇಕಾದರೆ ಅವನಿಗೆ ಎಷ್ಟು ಬಂಡಿಗಳು ಬೇಕು ?

(10) 143 ಹಸುಗಳಿಗೆ 11,583 ರೂ. ಗಳನ್ನು ಕೊಟ್ಟು ಕೊಂಡು ಕೊಳ್ಳುತ್ತೇನೆ. ಪ್ರತಿ ಒಂದು ಹಸುವಿಗೂ ಒಂದೇ ಬೆಲೆಯನ್ನು ಕೊಟ್ಟಿ ದ್ದರೆ ಒಂದೊಂದು ಹಸುವಿನ ಬೆಲೆ ಎಷ್ಟು ?

ಆರನೆಯ ಅಧ್ಯಾಯ.

1. ದ್ರವ್ಯಮಾನ.

12 ಕಾಸುಗಳು = 1 ಆಣೆ.

16 ಆಣೆಗಳು = 1 ರೂಪಾಯಿ.

15 ರೂಪಾಯಿಗಳು = 1 ಸವರನ್ ಅಥವಾ ಪೌನು.

3 ಕಾಸುಗಳು	= 1	ಕಾಲಾಣೆ
4 ಕಾಸುಗಳು	= 1	ದುಡ್ಡು
2 ಕಾಲಾಣೆಗಳು ಅಥವಾ 6 ಕಾಸುಗಳು	= 1	ಅರ್ಧಾಣೆ
2 ಅರ್ಧಾಣೆ ಅಥವಾ 3 ದುಡ್ಡುಗಳು	= 1	ಆಣೆ
2 ಆಣೆಗಳು	=1	ದೊಡ್ಡಾಣೆ
2 ದೊಡ್ಡಾಣೆಗಳು	=1	ಪಾವಲಿ ಅಥವಾ ಕಾಲು ರೂಪಾಯಿ
2 ಪಾವಲಿಗಳು	=1	ಅರ್ಧ ರೂಪಾಯಿ
2 ಅರ್ಧ ರೂ.ಗಳು	=1	ರೂಪಾಯಿ

ಇವುಗಳಲ್ಲಿ ಕಾಸು, ಕಾಲಾಣೆ, ಅರ್ಧಾಣೆ, ಇವು ತಾಮ್ರದ ನಾಣ್ಯಗಳು.

ಆಣೆಯು ನಿಕಲ್ ನಾಣ್ಯವು. ಪೂರ್ವದಲ್ಲಿ ಇದು ಬೆಳ್ಳಿಯ ನಾಣ್ಯವಾಗಿತ್ತು. ದೊಡ್ಡಾಣೆ, ಪಾವಲಿ, ಅರ್ಧ ರೂಪಾಯಿ, ರೂಪಾಯಿ, ಇವು ಬೆಳ್ಳಿಯ ನಾಣ್ಯಗಳು. ಸವರನ್ ಚಿನ್ನದ ನಾಣ್ಯವು.

ಇಲ್ಲಿ ದುಗ್ಗಾಣಿ, ದುಡ್ಡು, ಮೊಹರ, ಹಣ, ವರಹ, ಎಂಬ ನಾಣ್ಯಗಳು ಇದ್ದುವು. ಇವುಗಳಲ್ಲಿ ದುಗ್ಗಾಣಿ, ದುಡ್ಡು ತಾಮ್ರದ ನಾಣ್ಯವು. ಮೊಹರ, ವರಹ, ಹಣ, ಚಿನ್ನದ ನಾಣ್ಯಗಳು.

2 ಕಾಸುಗಳು = 1 ದುಗ್ಗಾಣಿ
1 ಹಣ = 4 ಆ 8 ಕಾ.
1 ವರಹ = 2 ರೂ. 14 ಆ. 8 ಕಾ.
1 ಮೊಹರ = 16 ರೂ.

II. ರೂಪಾಂತರಕರಣ.

5 ರೂ. 4 ಆ. ಗಳಲ್ಲಿ ಎಷ್ಟು ಆಣೆಗಳಿವೆ?

5 ರೂ. 4 ಆ.	5 ರೂ. ಗಳಲ್ಲಿ ಎಷ್ಟು ಆಣೆಗಳಿವೆ?
16	
80 ಆ.	5 ರೂ. 4 ಆ. ಗಳಲ್ಲಿ ಎಷ್ಟು ಆಣೆಗಳಿವೆ?
4 ಆ.	
84 ಆ.	

5 ರೂ. 4 ಆ. = 84 ಆಣೆಗಳು.

72 ನೆಯ ಅಭ್ಯಾಸ.

ಇವುಗಳಲ್ಲಿ ಎಷ್ಟು ಆಣೆಗಳಿವೆ ಎನ್ನುವುದನ್ನು ಕಂಡು ಹಿಡಿ :—

(1) 4 ರೂ. 7 ಆ.	(6) 6 ರೂ. 7 ಆ.
(2) 3 ರೂ. 8 ಆ.	(7) 5 ರೂ. 9 ಆ.
(3) 5 ರೂ. 8 ಆ.	(8) 9 ರೂ. 3 ಆ.
(4) 8 ರೂ. 9 ಆ.	(9) 7 ರೂ. 11 ಆ.
(5) 7 ರೂ. 6 ಆ.	(10) 6 ರೂ. 15 ಆ.

3 ಆ. 4 ಕಾಸುಗಳಲ್ಲಿ ಎಷ್ಟು ಕಾಸುಗಳಿವೆ?

3 ಆ. = 36 ಕಾಸುಗಳು.

3 ಆ. 4 ಕಾ. = 40 ಕಾಸುಗಳು.

73 ನೆಯ ಅಭ್ಯಾಸ.

1 ಆಣೆ = 12 ಕಾಸುಗಳು.

ಇವುಗಳಲ್ಲಿ ಎಷ್ಟು ಕಾಸುಗಳಿವೆ?

(1) 5 ಆ. 6 ಕಾ.	(6) 8 ಆ. 7 ಕಾ.
(2) 6 ಆ. 5 ಕಾ.	(7) 9 ಆ. 8 ಕಾ.
(3) 4 ಆ. 6 ಕಾ.	(8) 12 ಆ. 6 ಕಾ.
(4) 6 ಆ. 4 ಕಾ.	(9) 13 ಆ. 9 ಕಾ.
(5) 7 ಆ. 8 ಕಾ.	(10) 14 ಆ. 3 ಕಾ.

74 ನೆಯ ಅಭ್ಯಾಸ.

ಇವುಗಳಲ್ಲಿ ಎಷ್ಟು ಕಾಸುಗಳಿವೆ?

(1) 7 ರೂ. 8 ಆ. 10 ಕಾ.	(6) 2 ರೂ. 5 ಆ. 9 ಕಾ.
(2) 3 ರೂ. 3 ಆ. 3 ಕಾ.	(7) 1 ರೂ. 14 ಆ. 10 ಕಾ.
(3) 4 ರೂ. 5 ಆ. 8 ಕಾ.	(8) 8 ರೂ. 12 ಆ. 9 ಕಾ.
(4) 6 ರೂ. 7 ಆ. 9 ಕಾ.	(9) 9 ರೂ. 14 ಆ. 11 ಕಾ.
(5) 5 ರೂ. 8 ಆ.	(10) 10 ರೂ.

150 ಆಣೆಗಳಲ್ಲಿ ಎಷ್ಟು ರೂಪಾಯಿಗಳು, ಮೇಲೆ ಎಷ್ಟು ಆಣೆಗಳು ಇವೆ?

ಆಣೆಗಳು 16)150 ಆಣೆಗಳು.

9 ಸಲ 16 ಆಣೆಗಳು, ಮೇಲೆ 6 ಆಣೆಗಳು.

150 ಆಣೆಗಳು = 9 ರೂ. 6 ಆ.

75 ನೆಯ ಅಭ್ಯಾಸ.

ಇವುಗಳಲ್ಲಿ ಎಷ್ಟು ರೂಪಾಯಿಗಳು, ಮೇಲೆ ಎಷ್ಟು ಆಣೆಗಳು ಇವೆ?

(1) 130 ಆ.	(4) 94 ಆ.	(7) 121 ಆ.	(10) 13 ಆ.
(2) 126 ಆ.	(5) 155 ಆ.	(8) 159 ಆ.	
(3) 83 ಆ.	(6) 142 ಆ.	(9) 104 ಆ.	

76 ನೆಯ ಅಭ್ಯಾಸ.

ಇವುಗಳಲ್ಲಿ ಎಷ್ಟು ರೂಪಾಯಿಗಳು, ಆಣೆಗಳು, ಕಾಸುಗಳು ಇವೆ?

(1) 1115 ಕಾ.	(4) 1472 ಕಾ.	(7) 1673 ಕಾ.	(10) 1915 ಕಾ.
(2) 1245 ಕಾ.	(5) 1546 ಕಾ.	(8) 1795 ಕಾ.	
(3) 1454 ಕಾ.	(6) 1597 ಕಾ.	(9) 1892 ಕಾ.	

ಮಿಶ್ರೋದಾಹರಣೆಗಳು.

77 ನೆಯ ಅಭ್ಯಾಸ.

A

1 ಡಸನ್ = 12, 4 ಪಾವುಗಳು = 1 ಸೇರು;

(1) ಒಂದು ಸೌತೇಕಾಯಿಗೆ 3 ಕಾಸಾದರೆ. 12 ಕಾಯಿಗಳಿಗೆ ಎಷ್ಟು ಆಣೆಗಳು?

(2) ಒಂದು ಬಳಪಕ್ಕೆ 2 ಆ. ಆದರೆ 12 ಬಳಪಗಳಿಗೆ ಎಷ್ಟು ಆಣೆಗಳು?

(3) ಒಂದು ಕಾಯಿ ಪೊಟ್ಟಣಕ್ಕೆ 5 ಕಾ. 12ಕ್ಕೆ ಎಷ್ಟು ಆಣೆಗಳು?

ಒಂದು ಪದಾರ್ಥಕ್ಕೆ ಎಷ್ಟು ಕಾಸುಗಳೋ ಅಷ್ಟೇ ಆಣೆಗಳು 12 ಪದಾರ್ಥಗಳಿಗೆ ಆಗುವುವು.

(4) ಒಂದು ಸೀಸೆಗೆ 9 ಕಾ. ಆದರೆ 12 ಸೀಸೆಗಳಿಗೆಷ್ಟು ಆಣೆಗಳು?

(5) ಒಂದು ನೋಟು ಬುಕ್ಕಿಗೆ 7 ಕಾ. ಆದರೆ 1 ಡಸನ್ ನೋಟು ಬುಕ್ಕುಗಳಿಗೆ ಎಷ್ಟು ಆಣೆಗಳು?

(6) ಒಂದು ಪಾವು ಉಪ್ಪಿಗೆ 4 ಕಾಸು ಆದರೆ 3 ಸೇರು ಉಪ್ಪಿಗೆ ಏನು ಕ್ರಯ?

(7) ಒಂದು ಪಾವು ಸಾಸವಿಗೆ 8 ಕಾ. ಆದರೆ 3 ಸೇರು ಸಾಸವೆಗೆ ಏನು ಕ್ರಯ?

(8) ಒಂದು ಸೇರು ರಾಗಿಗೆ 11 ಕಾ. ಆದರೆ 12 ಸೇರು ರಾಗಿಗೆ ಏನು ಕ್ರಯ?

(9) 100 ಬೆಂಡೆ ಬಿತ್ತಗಳಿಗೆ 10 ಕಾ. ಆದರೆ 1200 ಬಿತ್ತಗಳಿಗೆ ಎಷ್ಟು ?

(10) ಒಂದು ಗಜ ದಪ್ಪ ಕಾಗದಕ್ಕೆ ಒಂದೂವರೆ ಕಾಸಿನಂತೆ ಇದ್ದರೆ 12 ಗಜಗಳಿಗೆ ಎಷ್ಟು ಬೆಲೆ ?

B

1 ಮಣ = 16 ಅಡೆ ಸೇರುಗಳು.

(1) ಸೀಸದ ಕಡ್ಡಿಗೆ 2 ರೂ. ಆದರೆ 16 ಸೀಸದ ಕಡ್ಡಿಗಳಿಗೆಷ್ಟು ರೂ. ಗಳು ?

(2) ಒಂದು ಬಾಲಬೋಧೆಗೆ 3 ಆ. ಆದರೆ 16ಕ್ಕೆಷ್ಟು ರೂ. ಗಳು

(3) ಒಂದು ಸೇರು ಬೇಳೆಗೆ 4 ಆ. ಆದರೆ 16 ಸೇರು ಬೇಳೆಗೆ ಎಷ್ಟು ?

ಒಂದು ಪದಾರ್ಥಕ್ಕೆ **ಎಷ್ಟು ಆಣೆಗಳೋ ಅಷ್ಟೇ ರೂಪಾಯಿಗಳು** 16 ಪದಾರ್ಥಗಳಿಗೆ ಆಗುವುವು.

(4) ಒಂದು ಪುಸ್ತಕಕ್ಕೆ 5 ಆ. ಆದರೆ 16 ಪುಸ್ತಕಗಳಿಗೆಷ್ಟು ?

(5) ಒಂದು ಗಣಿತದ ಬುಕ್ಕಿಗೆ 8 ಆ. ಆದರೆ 16 ಬುಕ್ಕುಗಳಿಗೆಷ್ಟು ?

(6) ಒಂದು ಕಲ್ಲುಹಲಗೆಗೆ ನಾಲ್ಕೂವರೆ ಆಣೆಯಾದರೆ 16 ಕಲ್ಲು ಹಲಗೆಗಳಿಗೆಷ್ಟು ?

(7) ಒಂದು ಡಸನ್ ನೋಟು ಬುಕ್ಕುಗಳಿಗೆ 7 ಆ. ಆದರೆ 16 ಡಸನ್ ನೋಟು ಬುಕ್ಕುಗಳಿಗೆ ಎಷ್ಟು ?

(8) ಒಂದು ಗಜ ಮಲ್ಲು ಬಟ್ಟೆಗೆ ಐದೂಮುಕ್ಕಾಲಾಣೆಯಾದರೆ 16 ಗಜಗಳಿಗೆಷ್ಟು ?

(9) 1 ಅಡೆಸೇರು ಸೀಗೆಕಾಯಿಗೆ 3 ಆ. ಆದರೆ 1 ಮಣ ಸೀಗೆಕಾಯಿಗೆ ಏನು ಬೆಲೆ ?

(10) 1 ಅಡೆಸೇರು ತುಪ್ಪಕ್ಕೆ 1 ರೂ. 1 ಆ. ಆದರೆ 1 ಮಣ ತುಪ್ಪಕ್ಕೆ ಏನು ಕ್ರಯ ?

78 ನೆಯ ಅಭ್ಯಾಸ.

8 ಆಣೆಗಳು = 1 ಅರ್ಧ ರೂಪಾಯಿ 1 ರೂಪಾಯಿ = 2 ಅರ್ಧ ರೂಪಾಯಿಗಳು.

ಇವುಗಳಲ್ಲಿ ಎಷ್ಟು ಅರ್ಧ ರೂಪಾಯಿಗಳಿವೆ?

(1) 7 ರೂ. 8 ಆ.	(4) 17 ರೂ. 8 ಆ.	(7) 22 ರೂ. 8 ಆ.	(10) 50 ರೂ.
(2) 10 ರೂ. 8 ಆ.	(5) 12 ರೂ. 8 ಆ.	(8) 25 ರೂ. 8 ಆ.	
(3) 19 ರೂ. 8 ಆ.	(6) 20 ರೂ. 8 ಆ.	(9) 84 ರೂ. 8 ಆ.	

(11) ಒಂದು ಪುಸ್ತಕಕ್ಕೆ 8 ಆ. ಆದರೆ 9 ರೂ. ಗಳಿಗೆ ಎಷ್ಟು ಪುಸ್ತಕಗಳು ಬರುತ್ತವೆ?

(12) ಒಂದು ಹಾಸುಕಲ್ಲಿಗೆ 8 ಆ. ಆದರೆ 8 ರೂ. 8 ಆ. ಗಳಿಗೆ ಎಷ್ಟು ಕಲ್ಲುಗಳು ಬರುತ್ತವೆ?

79 ನೆಯ ಅಭ್ಯಾಸ.

4 ಆಣೆಗಳು = 1 ಪಾವಲಿ 1 ರೂಪಾಯಿ = 4 ಪಾವಲಿಗಳು.

ಇವುಗಳಲ್ಲಿ ಎಷ್ಟು ಪಾವಲಿಗಳಿವೆ?

(1) 2 ರೂ. 8 ಆ.	(6) 7 ರೂ. 4 ಆ.
(2) 2 ರೂ. 12 ಆ.	(7) 8 ರೂ. 8 ಆ.
(3) 3 ರೂ. 4 ಆ.	(8) 9 ರೂ. 12 ಆ.
(4) 4 ರೂ. 8 ಆ.	(9) 9 ರೂ. 4 ಆ.
(5) 5 ರೂ. 12 ಆ.	(10) 9 ರೂ.

80 ನೆಯ ಅಭ್ಯಾಸ.

1 ರೂಪಾಯಿ = 32 ಅರ್ಧಾಣೆಗಳು = 64 ಕಾಲಾಣೆಗಳು.

ಇವುಗಳಲ್ಲಿ ಎಷ್ಟು i. ಅರ್ಧಾಣೆಗಳು ಮತ್ತು ii. ಕಾಲಾಣೆಗಳು ಇವೆ?

(1) 2 ರೂ. 8 ಆ. 6 ಕಾ.	(6) 7 ರೂ. 8 ಆ. 6 ಕಾ.
(2) 3 ರೂ. 12 ಆ. 6 ಕಾ.	(7) 8 ರೂ. 9 ಆ.
(3) 4 ರೂ. 8 ಆ. 6 ಕಾ.	(8) 9 ರೂ. 6 ಕಾ.
(4) 5 ರೂ. 14 ಆ.	(9) 9 ರೂ. 12 ಆ.
(5) 6 ರೂ. 12 ಆ. 6 ಕಾ.	(10) 9 ರೂ. 15 ಆ. 6 ಕಾ.

ಏಳನೆಯ ಅಧ್ಯಾಯ.

---

1. ವಿವಿಧ ಸಂಕಲನ.

81 ನೆಯ ಅಭ್ಯಾಸ.

ಈ ಕೂಡುವ ಲೆಕ್ಕಗಳನ್ನು ಮಾಡು :—

(1)			(2)			(3)			
ರೂ.	ಆ.	ಕಾ.	ರೂ.	ಆ.	ಕಾ.	ರೂ.	ಆ.		
0	8	10	0	13	3	0	12		(4)
0	15	6	0	11	8	0	7		(5)
0	10	2	0	9	7	0	14	9	(6)

(7)			(8)			(9)			
ರೂ.	ಆ.	ಕಾ.	ರೂ.	ಆ.	ಕಾ.	ರೂ.	ಆ.	ಕಾ.	
0	7	9	0	5	9	0	9		(10)
0	3	7	0	12	8	0	14		(11)
0	12	8	0	3	7	0	7		(12)

(13) ನಾನು ಕಾಫಿ ಬೀಜಕ್ಕೆ 4 ಆ. 6 ಕಾ., ಟೀ ಸೊಪ್ಪಿಕ್ಕೆ 5 ಆ., ಸಕ್ಕರೆಗೆ 3 ಆ. 4 ಕಾ. ಗಳನ್ನು ಕೊಟ್ಟರೆ ಒಟ್ಟು ಎಷ್ಟು ಕೊಟ್ಟಹಾಗಾಯಿತು ?

(14) ನಾನು ತರಕಾರಿಗೆ 2 ಆ. 6 ಕಾ. ಅಡಿಸೇರು ಎಣ್ಣೆಗೆ 4 ಆ. 6 ಕಾ. ಸೇರು ತುಪ್ಪಕ್ಕೆ 5 ಆ. 1 ಕಾ. ಊಟದೆಲೆಗೆ 1 ಆ. 4 ಕಾ. ಗಳನ್ನು ಕೊಟ್ಟೆನು. ಹಾಗಾದರೆ ನಾನು ಎಷ್ಟು ಕೊಟ್ಟೆನು?

		ಆ.	ಕಾ.
(15)	1 ಸೇರು ಅಕ್ಕಿ	[illegible]	[illegible]
	1 ಸೇರು ಬೇಳೆ	[illegible]	[illegible]
	1 ಪಾವು ಉಪ್ಪು	0	4
	1 ಪಂಚೇರು ಹುಣಸೇಹಣ್ಣು	4	0

ಈ ಪಟ್ಟಿಯಲ್ಲಿರುವಂತೆ ನಾನು ಅಂಗಡಿಯಿಂದ ಸಾಮಾನು ತರಬೇಕಾದರೆ ನನಗೆ ಎಷ್ಟು ಹಣಬೇಕು?

82 ನೆಯ ಅಭ್ಯಾಸ.

ಈ ಕೂಡುವ ಲೆಕ್ಕಗಳನ್ನು ಮಾಡು:—

(1)

ರೂ.	ಆ.	ಕಾ.
65	15	11
32	14	9
34	0	1
67	1	3

(2)

ರೂ.	ಆ.	ಕಾ.
82	3	9
72	5	8
47	9	7
56	12	3

(3)

ರೂ.	ಆ.	ಕಾ.	
93	9	3	(4)
78	9	7	(5)
46	11	3	(6)
78	3	1	(7)

(8)

ರೂ.	ಆ.	ಕಾ.
153	12	9
178	14	3
239	15	11
456	7	9
336	9	10

(9)

ರೂ.	ಆ.	ಕಾ.
192	14	3
16	9	2
3	9	9
22	8	8
157	9	11

(10)

ರೂ.	ಆ.	ಕಾ.
193	10	7
108	6	11
120	3	1
25	8	9
117	7	1

II. ವಿವಿಧ ವ್ಯವಕಲನ.

(1) 10 ಆ. 6 ಕಾ. ಗಳಲ್ಲಿ 8 ಆ. 4 ಕಾಸುಗಳನ್ನು ಕಳೆ.

10 ಆ. 6 ಕಾ. ಗಳ ಕೆಳಗೆ 8 ಆ. 4 ಕಾ ಗಳನ್ನು ಕೂಡುವ ಲೆಕ್ಕಗಳಲ್ಲಿ ಬರೆಯುವ ಹಾಗೆ ಬರೆ. ಅನಂತರ ಒಂದು ಗೀಟುಹಾಕು. ಇದರ ಕೆಳಗೆ ಶೇಷವನ್ನು ಬರೆ

ಆ.	ಕಾ.
10	6
8	4
2	2

6 ಕಾ. − 4 ಕಾ. = 2 ಕಾ.

10 ಆ.—8 ಕಾ. = 2 ಆ.

2 ಆ. 2 ಕಾ. ಉತ್ತರ.

(2) 10 ಆ. 6 ಕಾಸುಗಳಲ್ಲಿ 7 ಆ. 9 ಕಾ. ಗಳನ್ನು ಬರಿ.

ಆ.	ಕಾ.
10	6
7	9
2	9

18 ಕಾ.–9 ಕಾ.=9 ಕಾ.
9 ಆ.–7 ಆ.=2 ಆ

2 ಆ. 9 ಕಾ. ಉತ್ತರ.

83 ನೆಯ ಅಭ್ಯಾಸ.

ಕಳೆಯುವ ಲೆಕ್ಕಗಳನ್ನು ಮಾಡು:—

(1) ಆ. ಕಾ.
7 6
4 3

(2) ಆ. ಕಾ.
10 5
3 1

(3) ಆ. ಕಾ.
12 8
7 5

(4) ಆ ಕಾ.
13 6
7 9

(5) ಆ. ಕಾ.
14 5
6 10

(6) ಆ. ಕಾ.
15 9
7 11

(7) ಆ. ಕಾ.
11 10
9 11

(8) ಆ. ಕಾ.
12 8
8 10

(9) ಆ ಕಾ.
8 4
4 8

(10) ಆ. ಕಾ.
9 2
2 9

(11) ನಾನು 10 ಆಣೆಗಳನ್ನು ತೆಗೆದುಕೊಂಡು ಹೋಗಿ 4 ಆ. 5 ಕಾ. ಗಳಿಗೆ ಗಂಧದಕಡ್ಡಿಯನ್ನು ಕೊಂಡೆನು. ಹಾಗಾದರೆ ನನ್ನಲ್ಲಿ ಎಷ್ಟುಳಿದಿದೆ?

(12) ನನ್ನಲ್ಲಿ 8 ಆ. ಇದೆ. ಒಂದು ಪುಸ್ತಕವನ್ನು 4 ಆ. 6 ಕಾ. ಗಳಿಗೆ ಕೊಂಡುಕೊಂಡ ಮೇಲೆ ನನ್ನಲ್ಲಿ ಎಷ್ಟು ಉಳಿಯುತ್ತದೆ?

(13) ಅಂಗಿ ಷರಾಯಿಗಳನ್ನು ಹೊಲಿಯುವುದಕ್ಕೆ 14 ಆ. ಕೂಲಿಯನ್ನು ಕೊಟ್ಟೆನು. ಅಂಗಿಯನ್ನು ಹೊಲಿಯುವುದಕ್ಕೆ 6 ಆ. 6 ಕಾ. ಗಳಾದರೆ ಷರಾಯಿ ಹೊಲಿದುದ್ದಕ್ಕೆ ಎಷ್ಟು ಬಿತ್ತು?

(14) ನನ್ನಲ್ಲಿ 8 ಆಣೆ ಇದೆ. 3 ಆ. 6 ಕಾ. ಗಳಿಗೆ ಕಾರ್ಡುಗಳನ್ನು ತರಿಸಿದೆನು. ಕಾರ್ಡುಗಳನ್ನು ತಂದ ಹುಡುಗನಿಗೆ 2 ಕಾ. ಗಳನ್ನು ಕೊಟ್ಟೆನು ಹಾಗಾದರೆ ಈಗ ನನ್ನಲ್ಲಿ ಎಷ್ಟು ಉಳಿದಿದೆ?

(15) ಪ್ರತಿ ಒಬ್ಬನಿಗೂ 4 ಆ 3 ಕಾ. ಗಳಂತೆ 3 ಜನಗಳಿಗೆ ಕೊಡುವುದಕ್ಕೆ 5 ಆ. 10 ಕಾ. ಗಳು ಸಾಲದೆ ಹೋಗುತ್ತದೆ. ಹಾಗಾದರೆ ನನ್ನಲ್ಲಿ ಎಷ್ಟಿದೆ?

84 ನೆಯ ಅಭ್ಯಾಸ

ಈ ಕಳೆಯುವ ಲೆಕ್ಕಗಳನ್ನು ಮಾಡು :—

	ರೂ.	ಆ.	ಕಾ.
(1)	2	8	6
	1	6	3

	ರೂ.	ಆ.	ಕಾ.
(2)	4	8	9
	3	7	3

	ರೂ.	ಆ	ಕಾ.
(3)	7	6	6
	4	3	3

	ರೂ.	ಆ.	ಕಾ.
(4)	18	9	6
	7	3	4

	ರೂ.	ಆ.	ಕಾ.
(5)	25	12	9
	14	9	3

	ರೂ.	ಆ.	ಕಾ.
(6)	27	13	9
	14	15	10

	ರೂ.	ಆ.	ಕಾ.
(7)	28	9	6
	13	9	9

	ರೂ.	ಆ.	ಕಾ.
(8)	29	8	6
	12	9	8

	ರೂ.	ಆ.	ಕಾ.
(9)	18	7	8
	7	8	9

	ರೂ.	ಆ.	ಕಾ.
(10)	19	6	5
	8	7	6

(11) ಮೈಸೂರಿನಿಂದ ಬೆಂಗಳೂರಿಗೆ ರೈಲುಬಂಡಿಯ ಛಾರ್ಜು 1 ರೂ. 2 ಆ. ನನ್ನಲ್ಲಿ 12 ಆ. 9 ಕಾ. ಗಳಿದ್ದರೆ ಇನ್ನೆಷ್ಟು ಸಾಲದು?

(12) ಒಂದು ಪಲ್ಲ ಅಕ್ಕಿಗೆ 16 ರೂ. ನನ್ನಲ್ಲಿ 13 ರೂ. 9 ಆ. ಇದೆ. ಅಷ್ಟು ಅಕ್ಕಿಯನ್ನು ಕೊಂಡುಕೊಳ್ಳಬೇಕಾದರೆ ಇನ್ನೆಷ್ಟು ಹಣ ಬೇಕು?

(13) ದಪ್ಪಕ್ಕಿ 1 ಪಲ್ಲಕ್ಕೆ 14 ರೂ. 8 ಆ. ಸಣ್ಣಕ್ಕಿ 1 ಪಲ್ಲಕ್ಕೆ 16 ರೂ. ದಪ್ಪಕ್ಕಿಯ ಬೆಲೆಗಿಂತ ಸಣ್ಣಕ್ಕಿಯ ಬೆಲೆ ಎಷ್ಟು ಹೆಚ್ಚು ?

(14) ನಾನು. ಅಂಗಡಿಯಲ್ಲಿ 2 ರೂ. 8 ಆ. ಗೆ ಬೆಲ್ಲ, 2 ರೂ. 1 ಆ. ಗೆ ತುಪ್ಪ, 4 ರೂ. ಗೆ ಅಕ್ಕಿ ಕೊಂಡುಕೊಂಡು 10 ರೂ. ನೋಟನ್ನು ಅಂಗಡಿಯವನಿಗೆ ಕೊಡುತ್ತೇನೆ. ಅವನಿಂದ ನನಗೆ ಹಿಂದಕ್ಕೆ ಎಷ್ಟು ಬರಬೇಕು.

(15) ನನ್ನಲ್ಲಿ 10 ರೂ. 6 ಆ. ಇದೆ. ಈ ಕೆಳಗಿನ ಪಟ್ಟಿಯಂತೆ ಸಾಮಾನುಗಳನ್ನು ತರಲು ಇನ್ನು ಎಷ್ಟು ಹೆಚ್ಚು ಹಣ ಬೇಕು.

	ರೂ.	ಆ.	ಕಾ.
ತುಪ್ಪ	2	1	0
ಅರಿಸಿನ	0	9	3
ಹುಳಿ	2	4	0
ಅಕ್ಕಿ	4	8	0
ಬೇಳೆ	1	8	0
ತರಕಾರಿ	0	5	0

ಎಂಟನೆಯ ಅಧ್ಯಾಯ.

ಮಿಶ್ರೋದಾಹರಣೆಗಳು.

(1) ಇವುಗಳನ್ನು ಬಾಯಿಯಲ್ಲಿ ಹೇಳು :—

125, 346, 795, 2034, 3204, 6780 12,345 51,234, 6,23,014, 2,03,614.

ಇವುಗಳನ್ನು ಸಂಖ್ಯೆಗಳಲ್ಲಿ ಬರಿ :—ಆರುನೂರ ಹತ್ತು, ಏಳು ನೂರೊಂದು, ನಾಲ್ಕುಸಾವಿರದಿಪ್ಪತ್ತೈದು, ಐದುಸಾವಿರದನೂರೆಂಟು, ಏಳುಸಾವಿರದೊಂಬೈನೂರೊಂದು, ಸಲವತ್ತೈದುಸಾವಿರದ ಮುನ್ನೂರ ಸಲವತ್ತೇಳು, ಅರವತ್ತೆಂಟುಸಾವಿರದ ಒಂಬೈನೂರೆಂಟು.

(2) ನಾನು ಒಂದು ಮನೆಯನ್ನು 7,850 ರೂ. ಗಳಿಗೆ ಕೊಂಡು ಕೊಂಡೆನು. ಅದನ್ನು 255 ರೂ. ಗಳ ಲಾಭಕ್ಕೆ ರಾಮನಿಗೆ ಮಾರಿದೆನು. ಅವನು ಗೋವಿಂದನಿಗೆ 187 ರೂ. ಗಳ ಲಾಭಕ್ಕೆ ಮಾರಿದನು. ಹಾಗಾದರೆ ಗೋವಿಂದನು ಮನೆಗೆ ಎಷ್ಟು ರೂ. ಗಳನ್ನು ಕೊಟ್ಟನು ?

(3) ಒಂದೂರಿನಲ್ಲಿ 7685 ಗಂಡಸರೂ 5796 ಹೆಂಗಸರೂ ಇದ್ದಾರೆ. ಹಾಗಾದರೆ ಹೆಂಗಸರಿಗಿಂತ ಗಂಡಸರು ಎಷ್ಟು ಜನಗಳು ಹೆಚ್ಚಾಗಿದ್ದಾರೆ ?

(4) ಒಂದು ಬೆಟ್ಟಕ್ಕೆ 1245 ಮೆಟ್ಟಲುಗಳಿವೆ· 3 ಸಲ ಬೆಟ್ಟವನ್ನು ಹತ್ತಿ ಇಳಿದರೆ ಎಷ್ಟು ಮೆಟ್ಟಲುಗಳನ್ನು ಹೋದ ಹಾಗಾಯಿತು.

(5) ಪ್ರತಿ ಒಂದು ಕಟ್ಟಿನಲ್ಲೂ ಸಮವಾಗಿರುವ ಹಾಗೆ 1375 ಗಣಿತ ಪುಸ್ತಕಗಳನ್ನು 11 ಕಟ್ಟುಗಳನ್ನಾಗಿ ಕಟ್ಟಿದರೆ ಒಂದೊಂದು ಕಟ್ಟಿನಲ್ಲಿ ಎಷ್ಟು ಪುಸ್ತಕಗಳಿವೆ ?

(6) i. 16 ರೂ. ಗಳಲ್ಲಿ ಎಷ್ಟು ಕಾಸುಗಳಿವೆ?

ii. 2116 ಕಾಸುಗಳನ್ನು ರೂ. ಆ. ಕಾ. ಗಳನ್ನಾಗಿ ಮಾಡು.

---

(7) i. 3, 7 ಎಂಬ ಅಂಕಗಳಿಂದ ಎರಡಂಕಗಳುಳ್ಳ ಸಂಖ್ಯೆಗಳು ಎಷ್ಟನ್ನು ಮಾಡಬಹುದು ? ಅವುಗಳನ್ನು ಹೇಳು.

ii. 3, 4, 5 ಎಂಬ ಅಂಕಗಳಿಂದ ಆಗುವ ಎರಡಂಕಗಳುಳ್ಳ ಸಂಖ್ಯೆಗಳನ್ನೆಲ್ಲಾ ಬರಿ. ಅವುಗಳಲ್ಲಿ ದೊಡ್ಡದಾವುದು? ಚಿಕ್ಕದಾವುದು?

(8) ಒಂದೂರಿನಲ್ಲಿ 4 ಜನ ಸಾಹುಕಾರರಿದ್ದಾರೆ. ಒಬ್ಬನು 5750 ರೂ. ಇನ್ನೊಬ್ಬನು 8675 ರೂ. ಮತ್ತೊಬ್ಬನು 7875 ರೂ. ನಾಲ್ಕನೆಯವನು 9550 ರೂ. ಗಳನ್ನು ಮೂಲಧನವಾಗಿ ಹಾಕಿ ಒಂದು ಜವಳಿ ಅಂಗಡಿಯನ್ನು ಇಡುತ್ತಾರೆ. ಒಟ್ಟು ಮೂಲಧನವೆಷ್ಟು ?

(9) ಹಾಸನ ಡಿಸ್ಟ್ರಿಕ್ಟಿನಲ್ಲಿ 5,80,200 ಜನಗಳಿರುವರು, ಕಡೂರು ಡಿಸ್ಟ್ರಿಕ್ಟಿನಲ್ಲಿ 3,38,457 ಜನಗಳಿರುವರು. ಕಡೂರು ಡಿಸ್ಟ್ರಿಕ್ಟಿಗಿಂತ ಹಾಸನ ಡಿಸ್ಟ್ರಿಕ್ಟಿನಲ್ಲಿ ಎಷ್ಟು ಜನಗಳು ಹೆಚ್ಚಾಗಿರುವರು ?

(10) ಒಂದು ಪೆಟ್ಟಿಗೆಯಲ್ಲಿ 8 ಚೀಲಗಳಿವೆ. ಪ್ರತಿಯೊಂದು ಚೀಲದಲ್ಲೂ 1325 ರೂ. ಗಳಿವೆ. ಹಾಗಾದರೆ ಆ ಪೆಟ್ಟಿಗೆಯಲ್ಲಿ ಎಷ್ಟು ರೂ. ಗಳಿವೆ ?

(11) ರಾಮನಲ್ಲೂ ಗೋವಿಂದನಲ್ಲೂ ಇರುವ ಹಣವನ್ನು ಸೇರಿಸಿದರೆ ನನ್ನಲ್ಲಿರುವ ಹಣದ 6 ರಷ್ಟು ಆಗುತ್ತದೆ. ನಮ್ಮ ಮೂವರಲ್ಲಿರುವ ಹಣವನ್ನು ಸೇರಿಸಿದರೆ 1645 ರೂ. ಗಳಾಗುತ್ತವೆ. ರಾಮ ಮತ್ತು ಗೋವಿಂದ ಇವರಿಬ್ಬರಿಂದ ಒಟ್ಟು ಎಷ್ಟು ರೂ. ಗಳಿವೆ? ನನ್ನಲ್ಲಿ ಎಷ್ಟು ರೂ. ಗಳಿವೆ?

(12) 115 ರೂ. ಗಳಲ್ಲಿ ಎಷ್ಟು ಕಾಲು ರೂಪಾಯಿಗಳಿವೆ? ಎಷ್ಟು ದೊಡ್ಡಾಣೆಗಳಿವೆ ?

---

(13) 3, 7, 5 ಎಂಬ ಅಂಕಗಳಿಂದ ಆಗುವ ಮೂರಂಕಗಳುಳ್ಳ ಸಂಖ್ಯೆಗಳನ್ನೆಲ್ಲಾ ಬರಿ. ಅವುಗಳಲ್ಲಿ ದೊಡ್ಡದಾವುದು? ಚಿಕ್ಕದಾವುದು?

(14) ನಾನು ನನ್ನ ಹಿರಿಯ ಮಗನಿಗೆ ಓದುವುದಕ್ಕೆ 2255 ರೂ. ಮದುವೆಗೆ 768 ರೂ. ಗಳನ್ನೂ ವೆಚ್ಚಮಾಡಿದೆನು. ಕಿರಿಯ ಮಗನಿಗೆ

ಮದುವೆಗೆ 545 ರೂ. ವ್ಯಾಪಾರಕ್ಕೆ 3750 ರೂ. ಗಳನ್ನೂ ಕೊಟ್ಟೆನು. ಇವರಿಬ್ಬರಿಂದ ನನಗೆ ಎಷ್ಟು ವ್ಯಯವಾಯಿತು?

(15) ಒಂದು ಮನೆ ಮತ್ತು ಹೊಲದ ಕ್ರಯವು 4330 ರೂ. ಗಳಾಗುತ್ತದೆ. ಹೊಲದ ಕ್ರಯವು 2895 ರೂ. ಗಳಾದರೆ ಮನೆಯ ಕ್ರಯವೆಷ್ಟು?

(16) ಇವುಗಳ ಫಲವನ್ನು ಕಂಡು ಹಿಡಿ :—

34,567 × 16 ; 2342 × 23.

(17) ಈ ಭಾಗಹಾರ ಲೆಕ್ಕಗಳನ್ನು ಮಾಡು :—

73,456 ÷ 24, 95,607 ÷ 31.

1 ನನ್ನ ಸಂಬಳವು 75 ರೂ. ಗಳು. ಒಂದು ತಿಂಗಳು 38 ರೂ. 7 ಆ. 10 ಕಾ. ಗಳು ವೆಚ್ಚವಾದುವು. ಹಾಗಾದರೆ ನನಗೆ ಎಷ್ಟು ಉಳಿಯಿತು?

---

(19) i. 7431, 8234, 45,323, 73,425, 3,24,012 6,20,321, ಇವುಗಳನ್ನು ಓದಿ ಹೇಳು.

ii. ಇವುಗಳನ್ನು ಸಂಖ್ಯೆಗಳಲ್ಲಿ ಬರೆ:—ನಾಲ್ಕು ಸಾವಿರದ ಮುನ್ನೂರೆಂಟು, ಏಳುಸಾವಿರದ ನಾನೂರತೊಂಬತ್ತು, ಐವತ್ತು ಮೂರುಸಾವಿರದ ಎಂಟನೂರ ನಲವತ್ತೈದು, ಎಪ್ಪತ್ತೆಂಟು ಸಾವಿರದ ಏಳುನೂರು ಮೂವತ್ತಾರು, ಏಳುಲಕ್ಷದ ಮುನ್ನೂರ ನಲವತ್ತೊಂದು, ಒಂಬತ್ತುಲಕ್ಷದ ಸಾವಿರದೆಂಟು.

(20) ನನ್ನಲ್ಲಿರುವ ಹಣಕ್ಕಿಂತ ರಾಮನಲ್ಲಿ 150 ರೂ. ಗಳು ಹೆಚ್ಚಾಗಿವೆ. ರಾಮನಲ್ಲಿರುವ ಹಣಕ್ಕಿಂತ ಗೋವಿಂದನಲ್ಲಿ 275 ರೂ. ಗಳು ಹೆಚ್ಚಾಗಿವೆ. ನನ್ನಲ್ಲಿ 1255 ರೂ. ಗಳಿದ್ದರೆ ರಾಮನಲ್ಲಿ ಎಷ್ಟಿದೆ? ಗೋವಿಂದನಲ್ಲಿ ಎಷ್ಟಿದೆ?

(21) ಬೊಂಬಾಯಿ ಆಧಿಪತ್ಯದ ವಿಸ್ತಾರ 1,86,923 ಚದರ ಮೈಲಿಗಳು. ಹೈದರಾಬಾದು ಸಂಸ್ಥಾನದ ವಿಸ್ತಾರವು ಬೊಂಬಾಯಿ ಆಧಿಪತ್ಯದ ವಿಸ್ತಾರಕ್ಕಿಂತ ಎಷ್ಟು ಕಡಿಮೆ?

(22) 9999 × 26, 999 × 263–ಇವುಗಳ ಫಲಗಳನ್ನು ಸುಲಭವಾಗಿ ಕಂಡು ಹಿಡಿ.

(23) i. ಒಂದು ಪೆಟ್ಟಿಗೆಯಲ್ಲಿ 144 ಟಾಕುಗಳಂತೆ 36 ಪೆಟ್ಟಿಗೆಗಳಲ್ಲಿ ಟಾಕುಗಳಿವೆ. ಒಟ್ಟು ಎಷ್ಟು ಟಾಕುಗಳಿವೆ?

ii. ಪೆಟ್ಟಿಗೆಗೆ 108 ಟಾಕುಗಳಂತೆ ಇವುಗಳನ್ನು ತುಂಬಿದರೆ ಎಷ್ಟು ಪೆಟ್ಟಿಗೆಗಳು ಬೇಕಾಗುತ್ತವೆ?

(24) ಈ ಕೂಡುವ ಲೆಕ್ಕದಲ್ಲಿ (*) ಕ್ಕೆ ಬದಲಾಗಿ ಸರಿಯಾದ ಸಂಖ್ಯೆಗಳನ್ನು ಬರೆ:—

ರೂ.	ಆ.	ಕಾ.
52	7	10
32	9	6
45	8	9
72	6	11
**	*	*
240	6	8

(25) ಈ ಸಂಖ್ಯೆಗಳಲ್ಲಿ (.) ಈ ಗುರುತುಮಾಡಿರುವ ಅಂಕಗಳ ಬೆಲೆಗಳನ್ನು ಹೇಳು :—

243, 423, 1234, 4231, 42,315.

. . . .

(26) ಈ ಕೂಡುವ ಲೆಕ್ಕವನ್ನು ಮಾಡು:—

```
1 2 3 4 6
5 3 4 2 1
2 4 5 1 3
4 5 2 3 2
3 1 1 5 4
```

(27) ನನ್ನಲ್ಲಿರುವ ಹಣಕ್ಕಿಂತ ರಾಮನಲ್ಲಿ 150 ರೂ. ಗಳು ಹೆಚ್ಚಾಗಿವೆ. ರಾಮನಲ್ಲಿರುವ ಹಣಕ್ಕಿಂತ ಗೋವಿಂದನಲ್ಲಿ 275 ರೂ. ಗಳು ಹೆಚ್ಚಾಗಿವೆ. ಗೋವಿಂದನಲ್ಲಿ 1680 ರೂ. ಗಳಿದ್ದರೆ ರಾಮನಲ್ಲಿ ಎಷ್ಟು ರೂ. ಗಳಿವೆ? ನನ್ನಲ್ಲಿ ಎಷ್ಟು ರೂ. ಗಳಿವೆ?

(28) i ಒಂದು ಥಾನಿನಲ್ಲಿ 24 ಗಜಗಳ ಬಟ್ಟೆ ಇದೆ. ಇಂತಹ ಥಾನುಗಳು 36 ಇವೆ. ಬಟ್ಟೆ ಎಷ್ಟು ಗಜಗಳ ಬಟ್ಟೆ ಇದೆ?

ii. ಗಜ ಒಂದಕ್ಕೆ 4 ಆಣೆಗಳಂತೆ ಮಾರಿದರೆ ನನಗೆ ಎಷ್ಟು ರೂ. ಗಳು ಬರುತ್ತವೆ?

(29) i. ಎರಡು ಸಂಖ್ಯೆಗಳನ್ನು ಗುಣಾಕಾರಮಾಡಿದರೆ ಫಲವು 88. ಬರುತ್ತದೆ. ಒಂದು ಸಂಖ್ಯೆಯು 11 ಆದರೆ ಮತ್ತೊಂದು ಎಷ್ಟು?

ii. ಎರಡು ಸಂಖ್ಯೆಗಳನ್ನು ಗುಣಾಕಾರಮಾಡಿದರೆ ಫಲವು 47,035 ಬರುತ್ತದೆ. ಅವುಗಳಲ್ಲಿ ಒಂದು ಸಂಖ್ಯೆಯು 23 ಆದರೆ ಮತ್ತೊಂದು ಸಂಖ್ಯೆಯು ಎಷ್ಟು?

(30) ಒಂದು ಅಡೀಸೇರು ಎಣ್ಣೆಗೆ 4 ಆ. 6 ಕಾ. ಗಳಾದರೆ ಒಂದು ಮಣಕ್ಕೆ ಏನು ಕ್ರಯ? 1 ಮಣ=16 ಅಡೀಸೇರುಗಳು.

---

(31) ಈ ಸಂಖ್ಯೆಗಳಲ್ಲಿ ಎಷ್ಟು ನೂರುಗಳಿವೆ? ಎಷ್ಟು ಹತ್ತುಗಳಿವೆ?
642, 2368, 4935, 7905, 12,345, 21,345, 54,213

(32)

5	25	475	6789	=
12	108	1534	12,345	=
15	125	5678	67,890	=
27	365	9012	12,346	=
—	—	—	—	
—	—	—	—	

ಅಡ್ಡಸಾಲು ಸಂಖ್ಯೆಗಳ ಒಟ್ಟೆಷ್ಟು? ಉದ್ದಸಾಲು ಸಂಖ್ಯೆಗಳ ಒಟ್ಟೆಷ್ಟು?

ಈ ಸಂಖ್ಯೆಗಳ ಒಟ್ಟನ್ನು 2 ವಿಧವಾಗಿ ಕಂಡು ಹಿಡಿ.

(33) ಸೋಮವಾರ ಇದ್ದ ಬೆಲೆಗಿಂತ ಮಂಗಳವಾರ ಒಂದುಸೇರು ಚಿನ್ನದ ಬೆಲೆಯು 48 ರೂ ಹೆಚ್ಚಾಗಿದೆ. ಮಂಗಳವಾರದ ಬೆಲೆಗಿಂತ ಬುಧವಾರ ಬೆಲೆಯು 18 ರೂ. ಇಳಿಯುತ್ತದೆ. ಹಾಗಾದರೆ ಬುಧವಾರದ ಬೆಲೆಯು ಸೋಮವಾರದ ಬೆಲೆಗಿಂತ ಎಷ್ಟು ಹೆಚ್ಚು?

(34) i. ಒಂದು ಪಟದಲ್ಲಿ 36 ಗುಂಡಿಗಳಂತೆ 1 ಕಟ್ಟಿನಲ್ಲಿ 12 ಪಟಗಳಿವೆ. ಹಾಗಾದರೆ ಒಂದು ಕಟ್ಟಿನಲ್ಲಿ ಎಷ್ಟು ಗುಂಡಿಗಳಿವೆ? 4 ಕಟ್ಟುಗಳಲ್ಲಿ ಎಷ್ಟು ಗುಂಡಿಗಳಿವೆ?

ii. ಒಂದು ಪಟದಲ್ಲಿ 36 ಗುಂಡಿಗಳಂತೆ 43 ಪಟಗಳಲ್ಲಿ ಎಷ್ಟು ಗುಂಡಿಗಳಿವೆ?

(35) i. ನನ್ನಲ್ಲಿರುವ ಹಣವನ್ನು 15 ಜನಗಳಿಗೆ ಹಂಚಿದರೆ ಒಬ್ಬೊಬ್ಬನಿಗೆ 3.50 ರೂ.ಗಳು ಬರುತ್ತವೆ. ಹಾಗಾದರೆ ನನ್ನಲ್ಲಿ ಎಷ್ಟು ರೂ.ಗಳಿವೆ?

ii. ಅದೇ ಹಣವನ್ನು 18 ಜನಗಳಿಗೆ ಸಮವಾಗಿ ಹಂಚಿದರೆ ಒಬ್ಬೊಬ್ಬನಿಗೆ ಎಷ್ಟು ರೂ. ಗಳು ಬರುತ್ತವೆ?

(36) ಒಂದು ಪೆಟ್ಟಿಗೆಯಲ್ಲಿ 126 ಅರ್ಧ ರೂ. ಗಳೂ, 256 ಪಾವಲಿಗಳೂ, 336 ದೊಡ್ಡಾಣೆಗಳೂ ಇವೆ. ಹಾಗಾದರೆ ಪೆಟ್ಟಿಗೆಯಲ್ಲಿ ಎಷ್ಟು ರೂ. ಗಳು ಇದ್ದ ಹಾಗಾಯಿತು?

---

(37) 252 = 2 ನೂ. + 5 ಹ. + 2 ಬಿಡಿ
= 25 ಹ. + 2 ಬಿಡಿ.
= 26 ಹ. — 8 ಬಿಡಿ.

ಹೀಗೆಯೇ ಈ ಸಂಖ್ಯೆಗಳನ್ನು ಮೂರು ವಿಧಗಳಾಗಿ ಬರೆ:—

324 468, 572, 635, 783, 851, 946.

(38) ಇವುಗಳನ್ನು ಕೂಡು:—

34,576, 2,567, 1,34,567, 633, 78,930, 99,336, 4,56,789

(39) ನನ್ನಲ್ಲಿ 25 ಅಡಿ ಉದ್ದವುಳ್ಳ ಒಂದು ಗಣೆ ಇದೆ. ಅದನ್ನು ನೆಟ್ಟಗೆ ಒಂದು ಬಾವಿಯಲ್ಲಿ ತಳವು ತಗಲುವವರೆಗೂ ಬಿಡಲು 7 ಅಡಿ ಹೆಚ್ಚು ಎತ್ತರ ಗಣೆಯು ನೀರಿನ ಹೊರಗೆ ನಿಲ್ಲುತ್ತದೆ. ಹಾಗಾದರೆ ಬಾವಿಯಲ್ಲಿ ಎಷ್ಟು ಅಡಿ ನೀರು ಇದೆ?

(40) 12 ಮೈಲಿಗಳ ದೂರವನ್ನು ನಾನು ಬೋರ್ಡಿನ ಮೇಲೆ ತೋರಿಸಬೇಕಾದರೆ 1 ಅಂಗುಲದ ಗೆರೆಯನ್ನು ಎಳೆದು ತೋರಿಸುತ್ತೇನೆ. 6 ಅಂಗುಲ ಉದ್ದವುಳ್ಳ 1 ಗೆರೆಯನ್ನು ಎಳೆದರೆ ಎಷ್ಟು ಮೈಲಿಗಳ ದೂರವನ್ನು ಬೋರ್ಡಿನ ಮೇಲೆ ತೋರಿಸಿದ ಹಾಗಾಯಿತು?

(41) ಬೋರ್ಡಿನ ಮೇಲೆ 10 ಮೈಲಿಗಳ ದೂರವನ್ನು ತೋರಿಸಬೇಕಾದರೆ 1 ಅಂಗುಲ ಉದ್ದವುಳ್ಳ ಗೆರೆಯನ್ನು ಎಳೆದು ತೋರಿಸುತ್ತೇನೆ.

ಹಾಗಾದರೆ 50 ಮೈಲಿಗಳ ದೂರವನ್ನು ಬೋರ್ಡಿನಮೇಲೆ ತೋರಿಸ ಬೇಕಾದರೆ ಎಷ್ಟು ಅಂಗುಲಗಳ ಉದ್ದವುಳ್ಳ ಗೆರೆಯನ್ನು ಎಳೆಯಬೇಕು?

(42) ನಾನು ಅಂಗಡಿಗೆ ಹೋಗಿ 2 ರೂ. 12 ಆ. 3 ಕಾ. ಗಳಿಗೆ ಸಾಮಾನುಗಳನ್ನು ಕೊಂಡು ಕೊಂಡು 5 ರೂ. ನೋಟನ್ನು ಅಂಗಡಿಯು ವನಿಗೆ ಕೊಡುತ್ತೇನೆ. ಅವನಿಂದ ನನಗೆ ಎಷ್ಟು ಹಿಂದಕ್ಕೆ ಬರಬೇಕು?

---

(43) ಈ ಸಂಖ್ಯೆಗಳಲ್ಲಿ ಎಷ್ಟು i. ಸಾವಿರಗಳು, ii. ನೂರುಗಳು, iii. ಹತ್ತುಗಳು ಇವೆ?

1234, 1375, 2768, 3654, 4782, 5326, 6425, 7896, 8956, 9432.

(44) ನಾನು ರಾಮಗಿರಿಯಿಂದ ಪೂರ್ವದಿಕ್ಕಿಗೆ ಬೈಸಿಕಲ್ಲಿನ ಮೇಲೆ ಗಂಟೆಗೆ 8 ಮೈಲಿಗಳಂತೆ ಪ್ರಯಾಣಮಾಡುತ್ತೇನೆ. ಅದೇ ಕಾಲ ದಲ್ಲಿ ಪಶ್ಚಿಮದಿಕ್ಕಿಗೆ ರಾಮನು ಗಂಟೆಗೆ 6 ಮೈಲಿಗಳಂತೆ ಪ್ರಯಾಣ ಮಾಡುತ್ತಾನೆ. ನಾವು ಹೊರಟ 4 ಗಂಟೆಗಳಮೇಲೆ ನನಗೂ ರಾಮ ನಿಗೂ ಮಧ್ಯೆ ಎಷ್ಟು ಮೈಲಿಗಳ ದೂರವಿದೆ?

(45) 1,23,749 ರಲ್ಲಿ 34,896 ನ್ನು ಕಳೆ.

(46) ನನ್ನಲ್ಲಿ 500 ರೂ. ಗಳಿವೆ. ಒಂದು ಜವಳಿಅಂಗಡಿಗೆ ಹೋಗಿ ಕಣ ಒಂದಕ್ಕೆ 3 ರೂ. ಗಳಂತೆ 18 ಕಣಗಳನ್ನೂ, ಜತೆ 1 ಕ್ಕೆ 7 ರೂ. ಗಳಂತೆ 16 ಜತೆ ಪಂಚೆಗಳನ್ನೂ, ಸೀರೆ 1 ಕ್ಕೆ 17 ರೂ. ಗಳಂತೆ 23 ಸೀರೆ ಗಳನ್ನೂ ಕೊಂಡುಕೊಳ್ಳುತ್ತೇನೆ. i. ಹಾಗಾದರೆ ಜವಳಿ ಅಂಗಡಿಯವ ನಿಗೆ ಎಷ್ಟು ರೂ. ಗಳು ಕೊಡಬೇಕು? ii. ಹಾಗೆ ಕೊಟ್ಟ ಮೇಲೆ ನನ್ನಲ್ಲಿ ಎಷ್ಟು ರೂ. ಗಳುಳಿಯುತ್ತವೆ?

(47) ನಾನು 25 ಸೀರೆಗಳನ್ನು 825 ರೂ. ಗಳಿಗೆ ಕೊಂಡು ಕೊಂಡು 50 ರೂ. ಲಾಭಕ್ಕೆ ಮಾರುತ್ತೇನೆ. ಹಾಗಾದರೆ ಎಷ್ಟು ರೂ. ಗಳಿಗೆ ಒಂದೊಂದು ಸೀರೆಯನ್ನು ಮಾರಿದ ಹಾಗಾಯಿತು?

(48) ನಾನು ಒಂದು ಪದಾರ್ಥವನ್ನು 28 ರೂ. 7 ಆ. ಕೊಂಡು ಕೊಂಡು 19 ರೂ. 8 ಆ. ಗೆ ಮಾರಿದರೆ ನನಗೆ ಎಷ್ಟು ನಷ್ಟವಾಯಿತು?
